ಮೇಲಿನ ದಿನಾಂಕದಂದು ಅವರು ಸಂಸ್ಥೆಯನ್ನು ವಿಸರ್ಜಿಸಿದರು.

a) ಆಸ್ತಿಗಳನ್ನು ಈ ಕೆಳಗಿನಂತೆ ಮಾರಿದರು:
ಬರತಕ್ಕ ಹುಂಡಿಗಳು ₹ 3,800 ಋಣಿಗಳು ₹ 25,800, ಸರಕು ₹ 39,000, ಯಂತ್ರಗಳು ₹ 19,000, ಕಟ್ಟಡಗಳು ₹ 50,000.

b) ₹ 10,000 ಕ್ಕೆಹೂಡಿಕೆಗಳನ್ನು ಅನಿತಾ ತೆಗೆದುಕೊಂಡಳು ಮತ್ತು ₹ 12,000 ಕ್ಕೆ ಪೀಠೋಪಕರಣಗಳನ್ನು ಸುನಿತಾ ತೆಗೆದುಕೊಂಡಳು.

c) ವಿಲೇವಾರಿ ವೆಚ್ಚ ₹ 2,600.

ತಯಾರಿಸಿ :

i) ವಿಲೇವಾರಿ ಖಾತೆ ii) ಪಾಲುಗಾರರ ಬಂಡವಾಳ ಖಾತೆಗಳು. iii) ಬ್ಯಾಂಕ್ ಖಾತೆ

**ನಿರೂಪಣೆ :**

**ಖರ್ಚು** **ವಿಲೇವಾರಿ ಖಾತೆ** **ಜಮಾ**

| ವಿವರಗಳು | ₹ | ವಿವರಗಳು | ₹ |
|---|---|---|---|
| ಬರಬೇಕಾದ ಹುಂಡಿಗಳ ಖಾತೆಗೆ | 4,000 | ಕಾಯ್ದಿಟ್ಟ ಕರಡು ನಿಧಿ ಖಾತೆಯಿಂದ | 2,000 |
| ಸಾಲಗಾರರ ಖಾತೆಗೆ | 28,000 | ಕೊಡಬೇಕಾದ ಹುಂಡಿಗಳ ಖಾತೆಯಿಂದ | 6,000 |
| ಸರಕುಗಳ ಖಾತೆಗೆ | 40,000 | ಸಾಹುಕಾರರ ಖಾತೆಯಿಂದ | 20,000 |
| ಹೂಡಿಕೆಗಳ ಖಾತೆಗೆ | 12,000 | ವನಿತಾಳ ಸಾಲದ ಖಾತೆಯಿಂದ | 5000 |
| ಪೀಠೋಪಕರಣಗಳ ಖಾತೆಗೆ | 14,000 | ಬ್ಯಾಂಕು ಖಾತೆಯಿಂದ: | |
| ಯಂತ್ರಗಳ ಖಾತೆಗೆ | 20,000 | ಬರಬೇಕಾದ ಹುಂಡಿಗಳು 3,800 | |
| ಕಟ್ಟಡಗಳ ಖಾತೆಗೆ | 40,000 | ಸರಕುಗಳು 39,000 | |
| ಬ್ಯಾಂಕು ಖಾತೆಗೆ: | | ಕಟ್ಟಡಗಳು 50,000 | |
| ಕೊಡಬೇಕಾದ ಹುಂಡಿಗಳು 6,000 | | ಸಾಲಗಾರರು 25,800 | |
| ಸಾಹುಕಾರರು 20,000 | | ಯಂತ್ರಗಳು 19,000 | 1,37,600 |
| ವನಿತಾಳ ಸಾಲ 5,000 | 31,000 | ಅನಿತಾಳ ಬಂಡವಾಳ ಖಾತೆಯಿಂದ | 10,000 |
| ಬ್ಯಾಂಕ್ ಖಾತೆಗೆ | 2,600 | (ಹೂಡಿಕೆಗಳನ್ನು ತೆಗೆದುಕೊಂಡಿದ್ದು) | |
| (ವೆಚ್ಚ) | | ಸುನಿತಾಳ ಬಂಡವಾಳ ಖಾತೆಯಿಂದ | 12,000 |
| ಪಾಲುದಾರರ ಬಂಡವಾಳ ಖಾತೆಗೆ ಲಾಭ | | (ಪೀಠೋಪಕರಣಗಳನ್ನು ತೆಗೆದುಕೊಂಡಿದ್ದು) | |
| ವರ್ಗಾಯಿಸಿದ್ದು: | | | |
| ಅನಿತ 500 | | | |
| ಸುನಿತ 500 | 1,000 | | |
| | **1,92,600** | | **1,92,600** |

**ಖರ್ಚು** **ಪಾಲುದಾರರ ಬಂಡವಾಳ ಖಾತೆಗಳು** **ಜಮಾ**

| ವಿವರಗಳು | ಅನಿತಾ ₹ | ಸುನೀತಾ ₹ | ವಿವರಗಳು | ಅನಿತಾ ₹ | ಸುನೀತಾ ₹ |
|---|---|---|---|---|---|
| ವಿಲೇವಾರಿ ಖಾತೆಗೆ | 10,000 | 12,000 | ಆರಂಭದ ಶಿಲ್ಕು | 50,000 | 50,000 |
| (ಆಸ್ತಿಗಳನ್ನು ತೆಗೆದುಕೊಂಡಿದ್ದು) | | | ಮೀಸಲು ನಿಧಿ ಖಾತೆಯಿಂದ | 15,000 | 15,000 |
| ಬ್ಯಾಂಕು ಖಾತೆಗೆ | 55,500 | 53,500 | ವಿಲೇವಾರಿ ಖಾತೆಯಿಂದ | 500 | 500 |
| | | | (profits) | | |
| | **65,500** | **65,500** | | **65,500** | **65,500** |

ಖರ್ಚು **ಬ್ಯಾಂಕು ಖಾತೆ** ಜಮಾ

| ವಿವರಗಳು | ₹ | ವಿವರಗಳು | ₹ |
|---|---|---|---|
| ಆರಂಭದ ಶಿಲ್ಕು | 10,000 | ವಿಲೇವಾರಿ ಖಾತೆಯಿಂದ (ಹೊಣೆಗಾರಿಕೆಗಳನ್ನು ಪಾವತಿಸಿದ್ದು) | 31,000 |
| ವಿಲೇವಾರಿ ಖಾತೆಗೆ (ಆಸ್ತಿಗಳ ಮಾರಾಟ) | 1,37,600 | ವಿಲೇವಾರಿ ಖಾತೆಯಿಂದ (ವಿಸರ್ಜನಾ ವೆಚ್ಚ ಪಾವತಿಸಿದ್ದು) | 2,600 |
| | | ಅನಿತಳ ಸಾಲದ ಖಾತೆಯಿಂದ | 5,000 |
| | | ಅನಿತಳ ಬಂಡವಾಳ ಖಾತೆಯಿಂದ | 55,500 |
| | | ಸುನಿತಾಳ ಬಂಡವಾಳ ಖಾತೆಯಿಂದ | 53,500 |
| | **1,47,600** | | **1,47,600** |

**ನಿದರ್ಶನ 4.**

ರಮ್ಯ, ಕಾವ್ಯ ಮತ್ತು ದಿವ್ಯ ಪಾಲುದಾರರಾಗಿದ್ದು 1:2:1 ರ ಪ್ರಮಾಣದಲ್ಲಿ ಲಾಭ/ನಷ್ಟವನ್ನು ಹಂಚಿಕೊಳ್ಳುತ್ತಿರುತಾರೆ. ದಿನಾಂಕ 31–3–2014 ರಂದು ಅವರ ಅಢಾವೆ ಪತ್ರಿಕೆ ಈ ಕೆಳಗಿನಂತಿದೆ.:

**ದಿನಾಂಕ 31–03–2014 ರ ಅಢಾವೆ ಪತ್ರಿಕೆ**

| ಹೊಣೆಗಾರಿಕೆಗಳು | ₹ | ₹ | ಆಸ್ತಿಗಳು | ₹ | ₹ |
|---|---|---|---|---|---|
| ಸಾಹುಕಾರರು | | 20,000 | ನಗದು | | 15,000 |
| ಕೊಡತಕ್ಕ ಹುಂಡಿಗಳು | | 6,000 | ಸಾಲಗಾರರು | | 15,000 |
| ಬ್ಯಾಂಕು ಮೀರೆಳೆತ | | 4,000 | ಕಟ್ಟಡಗಳು | | 60,000 |
| ಮೀಸಲು ನಿಧಿ | | 8,000 | ಸರಕು | | 18,000 |
| ಲಿಪಿಯಿಂದ ಸಾಲ | | 5,000 | ಪೀಠೋಪಕರಣ | | 12,000 |
| ಬಂಡವಾಳಗಳು: | | | ಯಂತ್ರೋಪಕರಣ | | 20,000 |
| ರಮ್ಯ | | 42,000 | | | |
| ಕಾವ್ಯ | | 35,000 | | | |
| ದಿವ್ಯ | | 20,000 | | | |
| | | **1,40,000** | | | **1,40,000** |

ಮೇಲ್ಕಂಡ ದಿನಾಂಕದಿಂದ ಅವರು ಸಂಸ್ಥೆಯನ್ನು ವಿಸರ್ಜಿಸಲು ನಿರ್ಧರಿಸಿದರು.

a) ಆಸ್ತಿಗಳನ್ನು ಈ ಕೆಳಗಿನಂತೆ ವಿಸರ್ಜಿಸಲಾಯಿತು. ಸಾಲಗಾರರು ₹ 13,500, ಸರಕುಗಳು ₹ 19800, ಕಟ್ಟಡಗಳು ₹ 62,000. ಅಲ್ಲದೆ ದಾಖಲಾಗಿರದ ವಾಹನದ ವಿಲೇವಾರಿಯಿಂದ ₹ 4000 ದೊರೆತಿದೆ.

b) ಪೀಠೋಪಕರಣಗಳನ್ನು ₹ 9,000 ಕ್ಕೆ ರಮ್ಯ ತೆಗೆದುಕೊಂಡಿದ್ದಾರೆ.

c) ಸಾಹುಕಾರರಿಗೆ ಶೇ 10 ರಷ್ಟು ಕಡಿಮೆ ಪಾವತಿಸಿ ಚುಕ್ತ ಮಾಡಲಾಗಿದೆ.

d) ಬ್ಯಾಂಕು ಮೀರೆಳೆತದ ಮೇಲೆ ₹ 400 ಬಾಕಿ ಬಡ್ಡಿಯನ್ನು ಸಹ ಪಾವತಿಸಿದೆ.

e) ವಿಸರ್ಜನಾ ವೆಚ್ಚ ₹ 4,000.

f) ದಿವ್ಯ ಲಿಪಿಯ ಸಾಲ ತೀರಿಸುವ ಜವಾಬ್ದಾರಿಯನ್ನು ವಹಿಸಿಕೊಂಡರು.

ತಯಾರಿಸಿ:

i) ವಿಲೇವಾರಿ ಖಾತೆ

ii) ಪಾಲುಗಾರರ ಬಂಡವಾಳ ಖಾತೆಗಳು. ಮತ್ತು

iii) ನಗದು ಖಾತೆ

**ನಿರೂಪಣೆ :**

**ಖರ್ಚು ವಿಲೇವಾರಿ ಖಾತೆ ಜಮಾ**

| ವಿವರಗಳು | | ₹ | ವಿವರಗಳು | | ₹ |
|---|---|---|---|---|---|
| ಸಾಲಗಾರರ ಖಾತೆಗೆ | | 15,000 | ಸಾಹುಕಾರರ ಖಾತೆಯಿಂದ | | 20,000 |
| ಸರಕುಗಳ ಖಾತೆಗೆ | | 18,000 | ಕೊಡತಕ್ಕ ಹುಂಡಿಗಳ ಖಾತೆಯಿಂದ | | 6,000 |
| ಪೀಠೋಪಕರಣಗಳ ಖಾತೆಗೆ | | 12,000 | ಬ್ಯಾಂಕು ಮೀರೆಳೆತ | | 4,000 |
| ಯಂತ್ರಗಳ ಖಾತೆಗೆ | | 20,000 | ಲಿಪಿಯ ಸಾಲದ ಖಾತೆಯಿಂದ | | 5,000 |
| ಕಟ್ಟಡಗಳ ಖಾತೆಗೆ | | 60,000 | ನಗದು ಖಾತೆಯಿಂದ: | | |
| ನಗದು ಖಾತೆಗೆ: | | | ಸಾಲಗಾರರು | 13,500 | |
| ಸಾಹುಕಾರರು | 18,000 | | ಸರಕುಗಳು | 19,800 | |
| ಬ್ಯಾಂಕು ಮೀರೆಳೆತ | 4,000 | | ಕಟ್ಟಡಗಳು | 62,000 | |
| ಮೀರೆಳೆತದ ಮೇಲಿನ ಬಡ್ಡಿ | 400 | | ವಾಹನ | 4,000 | |
| ಕೊಡತಕ್ಕ ಹುಂಡಿಗಳು | 6,000 | 28,400 | (ದಾಖಲಾಗಿಲ್ಲ) | | |
| ದಿವ್ಯಳ ಬಂಡವಾಳ ಖಾತೆಗೆ | | 5,000 | ಯಂತ್ರಗಳು | 20,000 | 1,19,300 |
| (ಲಿಪಿಯ ಸಾಲ | | | ರಮ್ಯಾಳ ಬಂಡವಾಳ | | 9,000 |
| ವಹಿಸಿಕೊಂಡಿದ್ದು) | | | ಖಾತೆಯಿಂದ | | |
| ನಗದು ಖಾತೆಗೆ | | 4,000 | (ಪೀಠೋಪಕರಣಗಳನ್ನು ತೆಗೆದುಕೊಂಡಿದ್ದು) | | |
| (Expenses paid) | | | | | |
| ಪಾಲುದಾರರ ಬಂಡವಾಳ ಖಾತೆಗೆ | | | | | |
| ಲಾಭ ವರ್ಗಾಯಿಸಿದ್ದು: | | | | | |
| ರಮ್ಯ | 225 | | | | |
| ಕಾವ್ಯ | 450 | | | | |
| ದಿವ್ಯ | 225 | 900 | | | |
| | | **1,63,300** | | | **1,63,300** |

**ಖರ್ಚು ಪಾಲುದಾರರ ಬಂಡವಾಳ ಖಾತೆಗಳು ಜಮಾ**

| ವಿವರಗಳು | ರಮ್ಯ ₹ | ಕಾವ್ಯ ₹ | ದಿವ್ಯ ₹ | ವಿವರಗಳು | ರಮ್ಯ ₹ | ಕಾವ್ಯ ₹ | ದಿವ್ಯ ₹ |
|---|---|---|---|---|---|---|---|
| ವಿಲೇವಾರಿ ಖಾತೆಗೆ (ಆಸ್ತಿಗಳನ್ನು ತೆಗೆದುಕೊಂಡಿದ್ದು) | 9,000 | - | - | ಆರಂಭದ ಶಿಲ್ಕು | 42,000 | 35,000 | 20,000 |
| | | | | ಮೀಸಲು ಖಾತೆಯಿಂದ | 2,000 | 4,000 | 2,000 |
| | | | | ವಿಲೇವಾರಿ ಖಾತೆಯಿಂದ (ಲಿಪಿಯ ಸಾಲ) | - | - | 5,000 |
| ನಗದು ಖಾತೆಗೆ | 35,225 | 39,450 | 27,225 | | | | |
| | | | | ವಿಲೇವಾರಿ ಖಾತೆಯಿಂದ | 225 | 450 | 225 |
| | **44,225** | **39,450** | **27,225** | | **44,225** | **39,450** | **27,225** |

ಖರ್ಚು **ನಗದು ಖಾತೆ** ಜಮಾ

| ವಿವರಗಳು | ₹ | ವಿವರಗಳು | ₹ |
|---|---|---|---|
| ಆರಂಭದ ಶಿಲ್ಕು | 15,000 | ವಿಲೇವಾರಿ ಖಾತೆಯಿಂದ (ಹೊಣೆಗಾರಿಕೆಗಳನ್ನು ಪಾವತಿಸಿದ್ದು) | 28,400 |
| ವಿಲೇವಾರಿ ಖಾತೆಗೆ (ಆಸ್ತಿಗಳ ಮಾರಾಟ) | 1,19,300 | ವಿಲೇವಾರಿ ಖಾತೆಯಿಂದ (ವೆಚ್ಚಗಳನ್ನು ನೀಡಿದ್ದು) | 4,000 |
| | | ರಮ್ಯಾಳ ಬಂಡವಾಳ ಖಾತೆಯಿಂದ | 35,225 |
| | | ಕಾವ್ಯಾಳ ಬಂಡವಾಳ ಖಾತೆಯಿಂದ | 39,450 |
| | | ದಿವ್ಯಾಳ ಬಂಡವಾಳ ಖಾತೆಯಿಂದ | 27,225 |
| | **1,34,300** | | **1,34,300** |

**ನಿದರ್ಶನ 5.**

ರೂಪ, ದೀಪ ಮತ್ತು ಕೃಪ ಪಾಲುಗಾರರು ತಮ್ಮ ಲಾಭ- ಮತ್ತು ನಷ್ಟಗಳನ್ನು 2 : 1 : 1 ರ ಪ್ರಮಾಣದಲ್ಲಿ ಹಂಚಿಕೊಳ್ಳುತ್ತಾರೆ ದಿನಾಂಕ : 31-3-2014 ರಂದು ಅವರ ಅಢಾವೆ ಪತ್ರಿಕೆ ಈ ಕೆಳಕಂಡಂತಿದೆ.

**ದಿನಾಂಕ 31-3-2014 ರ ಅಢಾವೆ ಪತ್ರಿಕೆ**

| ಹೊಣೆಗಾರಿಕೆಗಳು | ₹ | ₹ | ಆಸ್ತಿಗಳು | ₹ | ₹ |
|---|---|---|---|---|---|
| ಕೊಡತಕ್ಕ ಹುಂಡಿಗಳು | | 2,300 | ನಗದು | | 1,000 |
| ಸಾಹುಕಾರರು | | 5,700 | ಬರತಕ್ಕ ಹುಂಡಿಗಳು | | 400 |
| ಕಾಯ್ದಿಟ್ಟ ನಿಧಿ | | 4,000 | ಸರಕು | | 20,000 |
| ಬಂಡವಾಳಗಳು: | | | ಸಾಲಗಾರರು | 7,000 | |
| ರೂಪ | 30,000 | | -ಕಾಯ್ದಿರಿಸು ನಿಧಿ | 400 | 6,600 |
| ದೀಪ | 20,000 | | ಜಂಟಿ ಜೀವ ವಿಮೆ ಪಾಲಿಸಿ | | 4,000 |
| ಕೃಪ | 20,000 | 70,000 | ಯಂತ್ರಗಳು | | 50,000 |
| | | **82,000** | | | **82,000** |

ಮೇಲ್ಕಂಡ ದಿನಾಂಕದಂದು ಪಾಲುಗಾರಿಕೆ ಸಂಸ್ಥೆಯನ್ನು ವಿಸರ್ಜಿಸಿದಾಗ ಕಂಡು ಬಂದ ವಿವರಗಳು:

a) ರೂಪ ಜಂಟಿ ಜೀವ ವಿಮೆಯನ್ನು ₹ 5,000 ಕ್ಕೆ ತೆಗೆದುಕೊಳ್ಳುತ್ತಾಳೆ.

b) ಹಣ ಸಂಗ್ರಹಣೆ :

| | |
|---|---|
| ಸರಕಿನಿಂದ | ₹ 22,000 |
| ಸಾಲಗಾರರಿಂದ | ₹ 4,100 |
| ಯಂತ್ರಗಳಿಂದ | ₹ 58,000 |
| ಬರತಕ್ಕ ಹುಂಡಿಗಳಿಂದ ಪೂರ್ತಿ ಹಣ | |

c) ವಿಲೇವಾರಿ ಖರ್ಚುಗಳು ₹ 500.

**ತಯಾರಿಸಿ:**

i) ವಿಲೇವಾರಿ ಖಾತೆ

ii) ಪಾಲುಗಾರರ ಬಂಡವಾಳ ಖಾತೆಗಳು.

iii) ನಗದು ಖಾತೆ

**ನಿರೂಪಣೆ :**

ಖರ್ಚು **ವಿಲೇವಾರಿ ಖಾತೆ** ಜಮಾ

| ವಿವರಗಳು | | ₹ | ವಿವರಗಳು | | ₹ |
|---|---|---|---|---|---|
| ಬರಬೇಕಾದ ಹುಂಡಿಗಳ ಖಾತೆಗೆ | | 400 | ಕಾಯ್ದಿಟ್ಟ ನಿಧಿ ಖಾತೆಯಿಂದ | | 400 |
| ಸರಕುಗಳ ಖಾತೆಗೆ | | 20,000 | ಕೊಡತಕ್ಕ ಹುಂಡಿಗಳ ಖಾತೆಯಿಂದ | | 2,300 |
| ಸಾಲಗಾರರ ಖಾತೆಗೆ | | 7,000 | ಸಾಹುಕಾರರ ಖಾತೆಯಿಂದ | | 5,700 |
| ಜಂಟಿ ಜೀವ ವಿಮಾ ಪಾಲಿಸಿ ಖಾತೆಗೆ | | 4,000 | ನಗದು ಖಾತೆಯಿಂದ: | | |
| ಯಂತ್ರಗಳ ಖಾತೆಗೆ | | 50,000 | ಬರತಕ್ಕ ಹುಂಡಿಗಳು | 400 | |
| ನಗದು ಖಾತೆಗೆ: | | | ಸರಕುಗಳು | 22,000 | |
| ಕೊಡತಕ್ಕ ಹುಂಡಿಗಳು | 2,300 | | ಸಾಲಗಾರರು | 4,100 | |
| ಸಾಹುಕಾರರು | 5,700 | 8,000 | ಯಂತ್ರಗಳು | 58,000 | 84,500 |
| ನಗದು ಖಾತೆಗೆ: | | 500 | ರೂಪಳ ಬಂಡವಾಳ ಖಾತೆಯಿಂದ | | |
| (ವೆಚ್ಚಗಳನ್ನು ಪಾವತಿಸಿದ್ದು) | | | (ಜಂಟಿ ಜೀವ ವಿಮಾ ಪಾಲಿಸಿ ತೆಗೆದುಕೊಂಡಿದ್ದು) | | 5,000 |
| ಪಾಲುಗಾರರ ಬಂಡವಾಳ ಖಾತೆಗೆ: | | | | | |
| (ಲಾಭ) | | | | | |
| ರೂಪ | 4,000 | | | | |
| ದೀಪ | 2,000 | | | | |
| ಕೃಪ | 2,000 | 8,000 | | | |
| | | **97,900** | | | **97,900** |

ಖರ್ಚು **ಪಾಲುದಾರರ ಬಂಡವಾಳ ಖಾತೆಗಳು** ಜಮಾ

| ವಿವರಗಳು | ರೂಪ ₹ | ದೀಪ ₹ | ಕೃಪ ₹ | ವಿವರಗಳು | ರೂಪ ₹ | ದೀಪ ₹ | ಕೃಪ ₹ |
|---|---|---|---|---|---|---|---|
| ವಿಲೇವಾರಿ ಖಾತೆಗೆ (JLF ತೆಗೆದುಕೊಂಡಿದ್ದು) | 5,000 | - | - | ಆರಂಭದ ಶಿಲ್ಕು | 30,000 | 20000 | 20000 |
| | | | | ಮೀಸಲು ನಿಧಿ ಖಾತೆಯಿಂದ | 2,000 | 1000 | 1000 |
| ನಗದು ಖಾತೆಗೆ | 31,000 | 23,000 | 23,000 | ವಿಲೇವಾರಿ ಖಾತೆಯಿಂದ (ಲಾಭ) | 4,000 | 2000 | 2000 |
| | **36,000** | **23,000** | **23,000** | | **36,000** | **23,000** | **23,000** |

ಖರ್ಚು **ನಗದು ಖಾತೆ** ಜಮಾ

| ವಿವರಗಳು | ₹ | ವಿವರಗಳು | ₹ |
|---|---|---|---|
| ಆರಂಭದ ಶಿಲ್ಕು | 1,000 | ವಿಲೇವಾರಿ ಖಾತೆಯಿಂದ | 8,000 |
| ವಿಲೇವಾರಿ ಖಾತೆಗೆ | 84,500 | (ಹೊಣೆಗಾರಿಕೆಗಳನ್ನು ಪಾವತಿಸಿದ್ದು) | |
| (ಆಸ್ತಿಗಳ ಮಾರಾಟ) | | ವಿಲೇವಾರಿ ಖಾತೆಯಿಂದ | 500 |
| | | (ವೆಚ್ಚಗಳ ಪಾವತಿ) | |
| | | ರೂಪಳ ಬಂಡವಾಳ ಖಾತೆಯಿಂದ | 31,000 |
| | | ದೀಪಾಳ ಬಂಡವಾಳ ಖಾತೆಯಿಂದ | 23,000 |
| | | ಕೃಪಾಳ ಬಂಡವಾಳ ಖಾತೆಯಿಂದ | 23,000 |
| | **85,500** | | **85,500** |

**ನಿದರ್ಶನ 6.**

ಶ್ರುತಿ, ಶಿಲ್ಪಾ ಮತ್ತು ಶ್ರೇಯಾ ಒಂದು ಸಂಸ್ಥೆಯ ಪಾಲುಗಾರರಾಗಿದ್ದು ಲಾಭ- ಮತ್ತು ನಷ್ಟಗಳನ್ನು 2:2:1 ರ ಪ್ರಮಾಣದಂತೆ ಹಂಚಿಕೊಳ್ಳುತ್ತಾರೆ ಅವರ ಸಂಸ್ಥೆ ವಿಸರ್ಜನೆಯಾದ ದಿನಾಂಕದಂದು ಅವರ ಅಢಾವೆ ಪತ್ರಿಕೆ ಈ ಕೆಳಗಿನಂತಿತ್ತು :

**ದಿನಾಂಕ 31-3-2014 ರ ಅಢಾವೆ ಪತ್ರಿಕೆ**

| ಹೊಣೆಗಾರಿಕೆಗಳು | ₹ | ₹ | ಆಸ್ತಿಗಳು | ₹ | ₹ |
|---|---|---|---|---|---|
| ಸಾಹುಕಾರರು | | 30,000 | ಬ್ಯಾಂಕಿನಲ್ಲಿ ನಗದು | | 6,000 |
| ಕೊಡತಕ್ಕ ಹುಂಡಿಗಳು | | 20,000 | ಸಾಲಗಾರರು | | 30,000 |
| ಶ್ರೇಯಾಳಿಂದ ಪಡೆದ ಸಾಲ | | 8,000 | ಸರಕುಗಳು | | 30,000 |
| ಸಾಮಾನ್ಯ ಮೀಸಲು | | 10,000 | ಪೀಠೋಪಕರಣ | | 22,000 |
| ಬಂಡವಾಳಗಳು: | | | ಯಂತ್ರಗಳು | | 20,000 |
| ಶೃತಿ | | 40,000 | ಕಟ್ಟಡ | | 50,000 |
| ಶಿಲ್ಪಾ | | 30,000 | | | |
| ಶ್ರೇಯಾ | | 20,000 | | | |
| | | **1,58,000** | | | **1,58,000** |

(a) ಆಸ್ತಿಗಳನ್ನು ಈ ಕೆಳಗಿನಂತೆ ಮಾರಿದರು:

ಸಾಲಗಾರರು ಶೇ. 10 ಪುಸ್ತಕದ ಮೌಲ್ಯಕ್ಕಿಂತ ಕಡಿಮೆ ಮತ್ತು ಸರಕುಗಳಿಂದ ಶೇ.15 ಪುಸ್ತಕದ ಮೌಲ್ಯಕ್ಕಿಂತ ಅಧಿಕ ಹಣ ಬಂದಿದೆ. ಕಟ್ಟಡಗಳನ್ನು ₹ 60,000 ಕ್ಕೆ ಮಾರಲಾಯಿತು.

(b) ₹ 20,000 ಕ್ಕೆ ಶ್ರುತಿಯು ಪೀಠೋಪಕರಣಗಳನ್ನು ಕೊಂಡಳು.

(c) ₹ 15,000 ಕ್ಕೆ ಶಿಲ್ಪಾಳು ಯಂತ್ರಗಳನ್ನು ಕೊಂಡುಕೊಂಡಳು.

(d) ಸಾಹುಕಾರರು ಮತ್ತು ಕೊಡತಕ್ಕ ಹುಂಡಿಗಳನ್ನು ಶೇಕಡಾ 5 ಸೋಡಿಯ ಪ್ರಕಾರ ಪಾವತಿ ಮಾಡಲಾಗಿದೆ.

(e) ವಿಲೇವಾರಿ ವೆಚ್ಚ ₹ 1,500.

ತಯಾರಿಸಿ:

i) ವಿಲೇವಾರಿ ಖಾತೆ ii) ಪಾಲುಗಾರರ ಬಂಡವಾಳ ಖಾತೆಗಳು iii) ಬ್ಯಾಂಕು ಖಾತೆ

**ನಿರೂಪಣೆ :**

**ಖರ್ಚು** **ವಿಲೇವಾರಿ ಖಾತೆ** **ಜಮಾ**

| ವಿವರಗಳು | | ₹ | ವಿವರಗಳು | | ₹ |
|---|---|---|---|---|---|
| ಸಾಲಗಾರರ ಖಾತೆಗೆ | | 30,000 | ಸಾಹುಕಾರರ ಖಾತೆಯಿಂದ | | 30,000 |
| ಸರಕುಗಳ ಖಾತೆಗೆ | | 30,000 | ಕೊಡತಕ್ಕ ಹುಂಡಿಗಳ ಖಾತೆಯಿಂದ | | 20,000 |
| ಪೀಠೋಪಕರಣದ ಖಾತೆಗೆ | | 22,000 | ಬ್ಯಾಂಕು ಖಾತೆಯಿಂದ: | | |
| ಯಂತ್ರಗಳ ಖಾತೆಗೆ | | 20,000 | ಸಾಲಗಾರರು | 27,000 | |
| ಕಟ್ಟಡಗಳ ಖಾತೆಗೆ | | 50,000 | ಸರಕುಗಳು | 34,500 | |
| ಬ್ಯಾಂಕು ಖಾತೆಗೆ: | | | ಕಟ್ಟಡಗಳು | 60,000 | 1,21,500 |
| ಸಾಹುಕಾರರು | 28,500 | | ಶೃತಿಯ ಬಂಡವಾಳ ಖಾತೆಯಿಂದ | | 20,000 |
| ಕೊಡತಕ್ಕ ಹುಂಡಿಗಳು | 19,000 | 47,500 | (ಪೀಠೋಪಕರಣ ತೆಗೆದುಕೊಂಡಿದ್ದಕ್ಕೆ) | | |

| | | | | |
|---|---|---|---|---|
| ಬ್ಯಾಂಕು ಖಾತೆಗೆ (ವಿಸರ್ಜನಾ ವೆಚ್ಚ) | | 1,500 | ಶಿಲ್ಪಾಳ ಬಂಡವಾಳ ಖಾತೆಯಿಂದ (ಯಂತ್ರಗಳನ್ನು ತೆಗೆದುಕೊಂಡಿದ್ದಕ್ಕೆ) | 15,000 |
| ಪಾಲುದಾರರ ಬಂಡವಾಳ ಖಾತೆಗೆ (ಲಾಭ) | | | | |
| ಶೃತಿ | 2,200 | | | |
| ಶಿಲ್ಪ | 2,200 | | | |
| ಶ್ರೇಯ | 1,100 | 5,500 | | |
| | | **2,06,500** | | **2,06,500** |

ಖರ್ಚು **ಪಾಲುದಾರರ ಬಂಡವಾಳ ಖಾತೆಗಳು** ಜಮಾ

| ವಿವರಗಳು | ಶೃತಿ ₹ | ಶಿಲ್ಪ ₹ | ಶ್ರೇಯ ₹ | ವಿವರಗಳು | ಶೃತಿ ₹ | ಶಿಲ್ಪ ₹ | ಶ್ರೇಯ ₹ |
|---|---|---|---|---|---|---|---|
| ವಿಲೇವಾರಿ ಖಾತೆಗೆ (ಆಸ್ತಿಗಳನ್ನು ತೆಗೆದು ಕೊಂಡಿದ್ದಕ್ಕೆ) | 20,000 | 15,000 | - | ಆರಂಭದ ಶಿಲ್ಕು | 40,000 | 30,000 | 20,000 |
| | | | | ಮೀಸಲು ನಿಧಿ ಖಾತೆಯಿಂದ | 4,000 | 4,000 | 2,000 |
| | | | | ವಿಲೇವಾರಿ ಖಾತೆಯಿಂದ (ಲಾಭ) | 2,200 | 2,200 | 1,100 |
| ಬ್ಯಾಂಕು ಖಾತೆಗೆ | 26,200 | 21,200 | 23,100 | | | | |
| | **46,200** | **36,200** | **23,100** | | **46,200** | **36,200** | **23,100** |

ಖರ್ಚು **ನಗದು ಖಾತೆ** ಜಮಾ

| ವಿವರಗಳು | ₹ | ವಿವರಗಳು | ₹ |
|---|---|---|---|
| ಆರಂಭದ ಶಿಲ್ಕು | 6,000 | ವಿಲೇವಾರಿ ಖಾತೆಯಿಂದ (ಹೊಣೆಗಾರಿಕೆಗಳನ್ನು ಪಾವತಿಸಿದ್ದು) | 47,500 |
| ವಿಲೇವಾರಿ ಖಾತೆಗೆ (ಆಸ್ತಿಗಳ ಮಾರಿದ್ದು) | 1,21,500 | ವಿಲೇವಾರಿ ಖಾತೆಯಿಂದ (ವೆಚ್ಚಗಳನ್ನು ಪಾವತಿಸಿದ್ದು) | 1,500 |
| | | ಶ್ರೇಯಾಳ ಸಾಲದ ಖಾತೆಯಿಂದ | 8,000 |
| | | ಶೃತಿಯ ಬಂಡವಾಳ ಖಾತೆಯಿಂದ | 26,200 |
| | | ಶಿಲ್ಪಾಳ ಬಂಡವಾಳ ಖಾತೆಯಿಂದ | 21,200 |
| | | ಶ್ರೇಯಾಳ ಬಂಡವಾಳ ಖಾತೆಯಿಂದ | 23,100 |
| | **1,27,500** | | **1,27,500** |

**ನಿದರ್ಶನ 7.**

ದಿನಾಂಕ 31–3–2014 ರಂದು ದಿಶಾ, ದಿಯಾ ಮತ್ತು ದೀಪ ಎಂಬ ಪಾಲುಗಾರರ ಅಢಾವೆ ಪತ್ರಿಕೆ ಈ ಕೆಳಗಿನಂತಿದೆ:

**ದಿನಾಂಕ 31–3–2014 ರ ಅಢಾವೆ ಪತ್ರಿಕೆ**

| ಹೊಣೆಗಾರಿಕೆಗಳು | ₹ | ₹ | ಆಸ್ತಿಗಳು | ₹ | ₹ |
|---|---|---|---|---|---|
| ಧನಿಗಳು | | 15,000 | ನಗದು | | 6,500 |
| ಕೊಡತಕ್ಕ ಹುಂಡಿಗಳು | | 1,800 | ಋಣಿಗಳು | | 8,600 |
| ಮೀಸಲು ನಿಧಿ | | 6,000 | ಹೂಡಿಕೆಗಳು | | 10,000 |
| ಬಂಡವಾಳಗಳು: | | | ಸರಕು | | 13,700 |
| ದಿಶಾ | | 22,000 | ಪೀಠೋಪಕರಣ | | 5,100 |
| ದಿಯಾ | | 12,000 | ಕಟ್ಟಡ | | 12,900 |
| ದೀಪ | | 10,000 | ಕೀರ್ತಿಮೌಲ್ಯ | | 10000 |
| | | **66,800** | | | **66,800** |

ಈ ಕೆಳಗಿನ ಕರಾರುಗಳ ಪ್ರಕಾರ ಪಾಲುಗಾರಿಕೆ ಸಂಸ್ಥೆಯನ್ನು ವಿಸರ್ಜಿಸಲು ನಿರ್ಧರಿಸಲಾಯಿತ್ತು.

a) ದಿಶ ರವರು ಕೀರ್ತಿಮೌಲ್ಯವನ್ನು ₹ 12,000 ಮತ್ತು ಕಟ್ಟಡಗಳನ್ನು ₹ 15750 ಕ್ಕೆ ತೆಗೆದುಕೊಂಡರು.

b) ದಿಯಾವರು ಧನಿಗಳಿಗೆ ಪುಸ್ತಕ ಬೆಲೆಯನ್ನು ಕೊಡಲು ವಹಿಸಿಕೊಂಡಿದ್ದಾರೆ.

c) ದೀಪ ರವರು ಕೊಡತಕ್ಕ ಹುಂಡಿಗಳ ಪುಸ್ತಕದ ಬೆಲೆಯನ್ನು ಕೊಡಲು ವಹಿಸಿಕೊಂಡಿದ್ದಾರೆ.

d) ಇತರೆ ಆಸ್ತಿಗಳನ್ನು ಈ ಕೆಳಗಿನಂತೆ ಮಾರಿದರು. :
ಸಾಲಗಾರರು ₹ 8,000 ಹೂಡಿಕೆಗಳು ₹ 8,950, ಸರಕು ₹ 15,600 ಮತ್ತು ಪೀಠೋಪಕರಣ ₹ 4500.

e) ವಿಲೇವಾರಿ ವೆಚ್ಚ ₹ 600.

ತಯಾರಿಸಿ:

i) ವಿಲೇವಾರಿ ಖಾತೆ

ii) ಪಾಲುಗಾರರ ಬಂಡವಾಳ ಖಾತೆಗಳು.

iii) ನಗದು ಖಾತೆ

**ನಿರೂಪಣೆ :**

ಖರ್ಚು **ವಿಲೇವಾರಿ ಖಾತೆ** ಜಮಾ

| ವಿವರಗಳು | | ₹ | ವಿವರಗಳು | | ₹ |
|---|---|---|---|---|---|
| ಋಣಿಗಳ ಖಾತೆಗೆ | | 8,600 | ಧನಿಗಳ ಖಾತೆಯಿಂದ | | 15,000 |
| ಹೂಡಿಕೆಗಳ ಖಾತೆಗೆ | | 10,000 | ಕೊಡತಕ್ಕ ಹುಂಡಿಗಳ ಖಾತೆಯಿಂದ | | 1,800 |
| ಸರಕುಗಳ ಖಾತೆಗೆ | | 13,700 | ನಗದು ಖಾತೆಯಿಂದ: | | |
| ಪೀಠೋಪಕರಣದ ಖಾತೆಗೆ | | 5,100 | ಋಣಿಗಳು | 8,000 | |
| ಕಟ್ಟಡದ ಖಾತೆಗೆ | | 12,900 | ಹೂಡಿಕೆಗಳು | 8,950 | |
| ಕೀರ್ತಿಮೌಲ್ಯದ ಖಾತೆಗೆ | | 10,000 | ಸರಕು | 15,600 | |
| ದಿಯಾಳ ಬಂಡವಾಳ ಖಾತೆಗೆ (ಸಾಹುಕಾರರನ್ನು ವಹಿಸಿಕೊಂಡಿದ್ದು) | | 15,000 | ಪೀಠೋಪಕರಣ | 4,500 | 37,050 |
| ದೀಪಾಳ ಬಂಡವಾಳ ಖಾತೆಗೆ (ಕೊಡತಕ್ಕ ಹುಂಡಿಗಳನ್ನು ತೆಗೆದುಕೊಂಡಿದ್ದಕ್ಕೆ) | | 1,800 | ದಿಶಾಳ ಬಂಡವಾಳ ಖಾತೆಯಿಂದ (ಕೀರ್ತಿಮೌಲ್ಯ ಮತ್ತು ಕಟ್ಟಡಗಳನ್ನು ತೆಗೆದುಕೊಂಡಿದ್ದಕ್ಕೆ) | | 27,750 |
| ನಗದು ಖಾತೆಗೆ (ವೆಚ್ಚಗಳನ್ನು ಪಾವತಿಸಿದ್ದಕ್ಕೆ) | | 600 | | | |
| ಪಾಲುಗಾರರ ಬಂಡವಾಳ ಖಾತೆಗಳಿಗೆ (ಲಾಭ) | | | | | |
| ದಿಶಾ | 1,300 | | | | |
| ದಿಯಾ | 1,300 | | | | |
| ದೀಪಾ | 1,300 | 3,900 | | | |
| | | **81,600** | | | **81,600** |

ಖರ್ಚು **ಪಾಲುದಾರರ ಬಂಡವಾಳ ಖಾತೆಗಳು** ಜಮಾ

| ವಿವರಗಳು | ದಿಶಾ ₹ | ದಿಯಾ ₹ | ದೀಪ ₹ | ವಿವರಗಳು | ದಿಶಾ ₹ | ದಿಯಾ ₹ | ದೀಪ ₹ |
|---|---|---|---|---|---|---|---|
| ವಿಲೇವಾರಿ ಖಾತೆಗೆ (ಕೀರ್ತಿಮೌಲ್ಯ ಮತ್ತು ಕಟ್ಟಡ ತೆಗೆದುಕೊಂಡಿದ್ದಕ್ಕೆ) | 27,750 | - | - | ಆರಂಭಿಕ ಶಿಲ್ಕು | 22,000 | 12,000 | 10,000 |
| ನಗದು ಖಾತೆಗೆ (Final balance paid) | - | 30,300 | 15,100 | ಮೀಸಲು ನಿಧಿ | 2,000 | 2,000 | 2,000 |
| | | | | ವಿಲೇವಾರಿ ಖಾತೆಯಿಂದ (ಹೊಣೆಗಾರಿಕೆಗಳನ್ನು ವಹಿಸಿಕೊಂಡಿದ್ದಕ್ಕೆ) | - | 15,000 | 1,800 |
| | | | | ವಿಲೇವಾರಿ ಖಾತೆಯಿಂದ (ಲಾಭ) | 1,300 | 1,300 | 1,300 |
| | | | | ನಗದು ಖಾತೆಯಿಂದ (Deficiency made good) | 2,450 | - | - |
| | **27,750** | **30,300** | **15,100** | | **27,750** | **30,300** | **15,100** |

ಖರ್ಚು **ನಗದು ಖಾತೆ** ಜಮಾ

| ವಿವರಗಳು | ₹ | ವಿವರಗಳು | ₹ |
|---|---|---|---|
| ಆರಂಭಿಕ ಶಿಲ್ಕು | 6,500 | ವಿಲೇವಾರಿ ಖಾತೆಯಿಂದ (ವೆಚ್ಚಗಳನ್ನು ಪಾವತಿಸಿದ್ದಕ್ಕೆ) | 600 |
| ವಿಲೇವಾರಿ ಖಾತೆಗೆ (ಆಸ್ತಿಗಳ ಮಾರಾಟ) | 37,050 | ದಿಯಾಳ ಬಂಡವಾಳ ಖಾತೆಯಿಂದ | 30,300 |
| ದಿಶಾಳ ಬಂಡವಾಳ ಖಾತೆಗೆ (ಕೊರತೆಯನ್ನು ಸರಿದೂಗಿಸಿದ್ದಕ್ಕೆ) | 2,450 | ದೀಪಾಳ ಬಂಡವಾಳ ಖಾತೆಯಿಂದ | 15,100 |
| | **46,000** | | **46,000** |

### ನಿದರ್ಶನ 8.

ರಶ್ಮಿ ಮತ್ತು ಗೀತಾ ಪಾಲುಗಾರರಾಗಿದ್ದು, ಅವರು 3:2 ರ ಪ್ರಮಾಣದಲ್ಲಿ ಲಾಭಾಂಶವನ್ನು ಹಂಚಿಕೊಳ್ಳುವರು, ದಿನಾಂಕ: 31–3–2014 ರಂದು ಅವರ ಆಢಾವೆ ಪತ್ರಿಕೆ ಈ ಕೆಳಗಿನಂತೆ ಇದೆ :

**ದಿನಾಂಕ 31–3–2014 ರ ಆಢಾವೆ ಪತ್ರಿಕೆ**

| ಹೊಣೆಗಾರಿಕೆಗಳು | | ₹ | ಆಸ್ತಿಗಳು | ₹ |
|---|---|---|---|---|
| ಸಾಹುಕಾರರು | | 10,000 | ಬ್ಯಾಂಕಿನಲ್ಲಿ ನಗದು | 5,000 |
| ಕೊಡತಕ್ಕ ಹುಂಡಿಗಳು | | 10,000 | ಹೂಡಿಕೆಗಳು | 5,000 |
| ರಶ್ಮಿಯ ಸಾಲ | | 5,000 | ಬರತಕ್ಕ ಹುಂಡಿಗಳು | 10,000 |
| ಮೀಸಲು ನಿಧಿ | | 10,000 | ಸಾಲಗಾರರು | 20,000 |
| ಬಂಡವಾಳಗಳು: | | | ಸರಕು | 15,000 |
| ರಶ್ಮಿ | 30,000 | | ಯಂತ್ರೋಪಕರಣ | 15,000 |
| ಗೀತಾ | 40,000 | 70,000 | ಪೀಠೋಪಕರಣ | 5,000 |
| | | | ಕಟ್ಟಡ | 20,000 |
| | | | ಕೀರ್ತಿಮೌಲ್ಯ | 10,000 |
| | | **1,05,000** | | **1,05,000** |

ಮೇಲಿನ ದಿನಾಂಕದಂದು ಅವರು ಪಾಲುಗಾರಿಕೆ ಸಂಸ್ಥೆಯನ್ನು ವಿಸರ್ಜಿಸಿದ್ದು, ಆಸ್ತಿಗಳ ವಿಲೇವಾರಿ ಈ ಕೆಳಗಿನಂತೆ ಆಯಿತು:

a) ಬರತಕ್ಕ ಹುಂಡಿಗಳು ₹ 7,500 ಸಾಲಗಾರರು ಮತ್ತು ಸರಕು ಪುಸ್ತಕ ಬೆಲೆಯ ಶೇ. 10 ರಷ್ಟು ಕಡಿಮೆ, ಯಂತ್ರೋಪಕರಣ ಶೇ. 5 ರಷ್ಟು ಹೆಚ್ಚಿಗೆ, ಕಟ್ಟಡ ₹ 12,000 ಕ್ಕೆ ವಿಕ್ರಯವಾದವು.

b) ಪೀಠೋಪಕರಣ ಮತ್ತು ಹೂಡಿಕೆಗಳನ್ನು ಪ್ರತಿಯೊಂದು ಕ್ರಮವಾಗಿ ₹ 4,000 ದಂತೆ ರಶ್ಮಿ ಮತ್ತು ಗೀತಾ ತೆಗೆದುಕೊಂಡಿದ್ದಾರೆ.

c) ವಿಸರ್ಜನೆ ಖರ್ಚು ₹ 600

d) ಎಲ್ಲಾ ಜವಾಬ್ದಾರಿಗಳಿಗೆ ಹಣ ಪಾವತಿ ಮಾಡಲಾಗಿದೆ.

ತಯಾರಿಸಿ:

i) ವಿಲೇವಾರಿ ಖಾತೆ

ii) ಪಾಲುಗಾರರ ಬಂಡವಾಳ ಖಾತೆಗಳು.

iii) ಬ್ಯಾಂಕ್ ಖಾತೆ

**ನಿರೂಪಣೆ :**

**ಖರ್ಚು** **ವಿಲೇವಾರಿ ಖಾತೆ** **ಜಮಾ**

| ವಿವರಗಳು | | ₹ | ವಿವರಗಳು | | ₹ |
|---|---|---|---|---|---|
| ಹೂಡಿಕೆಗಳ ಖಾತೆಗೆ | | 5,000 | ಸಾಹುಕಾರರ ಖಾತೆಯಿಂದ | | 10,000 |
| ಸಾಲಗಾರರ ಖಾತೆಗೆ | | 10,000 | ಕೊಡತಕ್ಕ ಹುಂಡಿಗಳ ಖಾತೆಯಿಂದ | | 10,000 |
| ಬರತಕ್ಕ ಹುಂಡಿಗಳ ಖಾತೆಗೆ | | 20,000 | ಬ್ಯಾಂಕ್ ಖಾತೆಯಿಂದ | | |
| ಸರಕು ಖಾತೆಗೆ | | 15,000 | ಬರತಕ್ಕ ಹುಂಡಿಗಳು | 7,500 | |
| ಯಂತ್ರಗಳ ಖಾತೆಗೆ | | 15,000 | ಸಾಲಗಾರರು | 18,000 | |
| ಪೀಠೋಪಕರಣಗಳ ಖಾತೆಗೆ | | 5,000 | ಸರಕು | 13,500 | |
| ಕಟ್ಟಡದ ಖಾತೆಗೆ | | 20,000 | ಯಂತ್ರಗಳು | 15,750 | |
| ಕೀರ್ತಿಮೌಲ್ಯದ ಖಾತೆಗೆ | | 10,000 | ಕಟ್ಟಡಗಳು | 12,000 | 66,750 |
| ಬ್ಯಾಂಕ್ ಖಾತೆಗೆ: | | | ರಶ್ಮಿಯ ಬಂಡವಾಳ ಖಾತೆಯಿಂದ | | 4,000 |
| ಸಾಹುಕಾರರು | 10,000 | | (ಪೀಠೋಪಕರಣ ತೆಗೆದುಕೊಂಡಿದ್ದಕ್ಕೆ) | | |
| ಕೊಡತಕ್ಕ ಹುಂಡಿಗಳು | 10,000 | 20,000 | ಗೀತಾಳ ಬಂಡವಾಳ ಖಾತೆಗೆ | | 4,000 |
| ಬ್ಯಾಂಕು ಖಾತೆಗೆ | | 600 | (ಹೂಡಿಕೆಗಳನ್ನು ತೆಗೆದು | | |
| (ವೆಚ್ಚದ ಪಾವತಿ) | | | ಕೊಂಡಿದ್ದಕ್ಕೆ) | | |
| | | | ಪಾಲುದಾರರ ಬಂಡವಾಳ | | |
| | | | ಖಾತೆಗಳಿಗೆ: | | |
| | | | ರಶ್ಮಿ | 15,510 | |
| | | | ಗೀತಾ | 10,340 | 25,850 |
| | | **1,20,600** | | | **1,20,600** |

ಖರ್ಚು **ಪಾಲುದಾರರ ಬಂಡವಾಳ ಖಾತೆಗಳು** ಜಮಾ

| ವಿವರಗಳು | ರಶ್ಮಿ ₹ | ಗೀತಾ ₹ | ವಿವರಗಳು | ರಶ್ಮಿ ₹ | ಗೀತಾ ₹ |
|---|---|---|---|---|---|
| ವಿಲೇವಾರಿ ಖಾತೆಗೆ (ಆಸ್ತಿಗಳನ್ನು ತೆಗೆದುಕೊಂಡಿದ್ದಕ್ಕೆ) | 4,000 | 4,000 | ಆರಂಭಿಕ ಶಿಲ್ಕು ಖಾತೆಯಿಂದ | 30,000 | 40,000 |
| ವಿಲೇವಾರಿ ಖಾತೆಗೆ (ನಷ್ಟ) | 15,510 | 10,340 | ಮೀಸಲು ನಿಧಿ ಖಾತೆಯಿಂದ | 6,000 | 4,000 |
| ಬ್ಯಾಂಕ್ ಖಾತೆಗೆ | 16,490 | 29,660 | | | |
| | **36,000** | **44,000** | | **36,000** | **44,000** |

ಖರ್ಚು **ಬ್ಯಾಂಕ್ ಖಾತೆ** ಜಮಾ

| ವಿವರಗಳು | ₹ | ವಿವರಗಳು | ₹ |
|---|---|---|---|
| ಆರಂಭಿಕ ಶಿಲ್ಕು | 5,000 | ವಿಲೇವಾರಿ ಖಾತೆಯಿಂದ (ಹೊಣೆಗಾರಿಕೆಗಳನ್ನು ಪಾವತಿಸಿದ್ದಕ್ಕೆ) | 20,000 |
| ವಿಲೇವಾರಿ ಖಾತೆಯಿಂದ (ಆಸ್ತಿಗಳ ಮಾರಾಟ) | 66,750 | ವಿಲೇವಾರಿ ಖಾತೆಯಿಂದ (ವೆಚ್ಚಗಳನ್ನು ಪಾವತಿಸಿದ್ದಕ್ಕೆ) | 600 |
| | | ರಶ್ಮಿಯ ಸಾಲದ ಖಾತೆಯಿಂದ | 5,000 |
| | | ರಶ್ಮಿಯ ಬಂಡವಾಳ ಖಾತೆಯಿಂದ | 16,490 |
| | | ಗೀತಾಳ ಬಂಡವಾಳ ಖಾತೆಯಿಂದ | 29,660 |
| | **71,750** | | **71,750** |

**ನಿದರ್ಶನ 9.**

X, Y ಮತ್ತು Z 3:2 : 1 ರ ಪ್ರಮಾಣದಲ್ಲಿ ಲಾಭ/ನಷ್ಟವನ್ನು ಹಂಚಿಕೊಳ್ಳುವ ಪಾಲುದಾರರಾಗಿದ್ದಾರೆ. ದಿನಾಂಕ 31–3–2014 ರಂದು ಅವರ ಆಢಾವೆ ಪತ್ರಿಕೆ ಈ ಕೆಳಗಿನಂತಿದೆ.:

**ದಿನಾಂಕ 31–3–2014 ರ ಅಢಾವೆ ಪತ್ರಿಕೆ**

| ಹೊಣೆಗಾರಿಕೆಗಳು | ₹ | ಆಸ್ತಿಗಳು | | ₹ |
|---|---|---|---|---|
| ಬಂಡವಾಳಗಳು: | | ಹೂಡಿಕೆಗಳು | | 20,830 |
| X | 30,000 | ಯಂತ್ರಗಳು | | 40,500 |
| Y | 20,000 | ಸರಕುಗಳು | | 17,550 |
| Z | 10,000 | ಜಂಟಿ ವಿಮಾ ಪಾಲಿಸಿ | | 14,000 |
| ಶ್ರೀಮತಿ X ಯಿಂದ ಸಾಲ | 10,000 | ಸಾಲಗಾರರು | 9,300 | |
| ಸಾಹುಕಾರರು | 18,500 | –ಕಾಯ್ದಿರಿಸಿದ ಕರಡು ನಿಧಿ | 600 | 8,700 |
| ವಿಮಾ ಪಾಲಿಸಿ ನಿಧಿ | 14,000 | ಲಾಭ–ನಷ್ಟದ ಖಾತೆ | | 1,500 |
| ಹೂಡಿಕೆ ಏರಿಳಿತ ನಿಧಿ | 6,000 | ಬ್ಯಾಂಕಿನಲ್ಲಿ ನಗದು | | 5,420 |
| | **1,08,500** | | | **1,08,500** |

ಮೇಲ್ಕಂಡ ದಿನಾಂಕದಂದು ಸಂಸ್ಥೆಯನ್ನು ವಿಸರ್ಜಿಸಲಾಯಿತು.

1. ವಿಮಾ ಪಾಲಿಸಿಯನ್ನು 12,000 ₹ಗಳಿಗೆ ಅಧ್ಯರ್ಪಣ ಮಾಡಲಾಯಿತು.
2. X ಹೂಡಿಕೆಗಳನ್ನು ₹ 17,500 ಗಳಿಗೆ ತೆಗೆದುಕೊಂಡನು.
3. X ಅವನ ಹೆಂಡತಿ ಸಾಲ ತೀರಿಸಲು ಒಪ್ಪಿದನು.
4. Y ಸಾಲಗಾರರನ್ನು ₹ 6,150 ಗಳಿಗೆ ತೆಗೆದುಕೊಂಡನು .

5. ಯಂತ್ರಗಳನ್ನು 55,000 ₹ಗಳಿಗೆ ವಿಲೇವಾರಿ ಮಾಡಲಾಯಿತು.
6. 3000 ₹ಗಳ ಹೂಡಿಕೆಯು ಲೆಕ್ಕದ ಪುಸ್ತಕದಲ್ಲಿ ದಾಖಲೆಯಾಗಿಲ್ಲ ಎಂಬುದು ಕಂಡುಬಂದಿತು. ಅದನ್ನು ಅದೇ ಬೆಲೆಗೆ ಸಾಹುಕಾರರಲ್ಲಿ ಒಬ್ಬರು ತೆಗೆದುಕೊಂಡರು.
7. ಸರಕುಗಳನ್ನು 15,000 ₹ಗಳಿಗೆ ವಿಲೇವಾರಿ ಮಾಡಲಾಯಿತು.
8. ವಿಲೇವಾರಿ ವೆಚ್ಚ 600 ₹ಗಳಷ್ಟಾಯಿತು.

**ತಯಾರಿಸಿ:**

a) ವಿಲೇವಾರಿ ಖಾತೆ b) ಪಾಲುಗಾರರ ಬಂಡವಾಳ ಖಾತೆಗಳು. ಮತ್ತು c) ಬ್ಯಾಂಕು ಖಾತೆ

**ನಿರೂಪಣೆ :**

**ಖರ್ಚು ವಿಲೇವಾರಿ ಖಾತೆ ಜಮಾ**

| ವಿವರಗಳು | | ₹ | ವಿವರಗಳು | | ₹ |
|---|---|---|---|---|---|
| ಹೂಡಿಕೆಗಳ ಖಾತೆಗೆ | | 20,830 | ಕಾಯ್ದಿಟ್ಟ ನಿಧಿ ಖಾತೆಯಿಂದ | | 600 |
| ಯಂತ್ರಗಳ ಖಾತೆಗೆ | | 40,500 | ಶ್ರೀಮತಿ X ನ ಸಾಲದ ಖಾತೆಯಿಂದ | | 10,000 |
| ಸರಕು ಖಾತೆಗೆ | | 17,550 | ಸಾಹುಕಾರರ ಖಾತೆಯಿಂದ | | 18,500 |
| ಸಾಲಗಾರರ ಖಾತೆಗೆ | | 9,300 | ಜೀವವಿಮಾ ನಿಧಿ ಖಾತೆಯಿಂದ | | 14,000 |
| ಜಂಟಿ ಜೀವ ವಿಮಾ ಪಾಲಿಸಿ ಖಾತೆ | | 14,000 | ಹೂಡಿಕೆ ಏರಿಳಿತ | | |
| ಬ್ಯಾಂಕ್ ಖಾತೆಗೆ: | | | ನಿಧಿ ಖಾತೆಯಿಂದ | | 6,000 |
| ಸಾಹುಕಾರರು | | 15,500 | ಬ್ಯಾಂಕ್ ಖಾತೆಯಿಂದ | | |
| (18500-3000) | | | ಜಂಟಿ ಜೀವವಿಮಾ ಪಾಲಿಸಿ | 12,000 | |
| X ನ ಬಂಡವಾಳ ಖಾತೆಗೆ | | 10,000 | ಯಂತ್ರಗಳು | 55,000 | |
| (ಶ್ರೀಮತಿ Xನ ಸಾಲ | | | ಸರಕು | 15,000 | 82,000 |
| ವಹಿಸಿಕೊಂಡಿದ್ದಕ್ಕೆ) | | | X ನ ಬಂಡವಾಳ ಖಾತೆಯಿಂದ | | 17,500 |
| ಬ್ಯಾಂಕ್ ಖಾತೆಗೆ | | 600 | (ಹೂಡಿಕೆಗಳನ್ನು ತೆಗೆದುಕೊಂಡಿದ್ದಕ್ಕೆ) | | |
| (ವೆಚ್ಚಗಳನ್ನು ಪಾವತಿಸಿದ್ದಕ್ಕೆ) | | | Yನ ಬಂಡವಾಳ ಖಾತೆಯಿಂದ | | 6,150 |
| ಪಾಲುದಾರರ ಬಂಡವಾಳ | | | (ಸಾಲಗಾರರನ್ನು ತೆಗೆದುಕೊಂಡಿದ್ದಕ್ಕೆ) | | |
| ಖಾತೆಗಳಿಗೆ: | | | | | |
| X | 13,235 | | | | |
| Y | 8,823 | | | | |
| Z | 4,412 | 26,470 | | | |
| | | **1,54,750** | | | **1,54,750** |

**ಖರ್ಚು ಪಾಲುದಾರರ ಬಂಡವಾಳ ಖಾತೆಗಳು ಜಮಾ**

| ವಿವರಗಳು | X ₹ | Y ₹ | Z ₹ | ವಿವರಗಳು | X ₹ | Y ₹ | Z ₹ |
|---|---|---|---|---|---|---|---|
| ಲಾಭ-ನಷ್ಟದ ಖಾತೆಗೆ | 750 | 500 | 250 | ಆರಂಭ ಶಿಲ್ಕು ಖಾತೆಯಿಂದ | 30,000 | 20,000 | 10,000 |
| ವಿಲೇವಾರಿ ಖಾತೆಗೆ (ಆಸ್ತಿಗಳನ್ನು ತೆಗೆದು ಕೊಂಡಿದ್ದಕ್ಕೆ) | -<br>17,500 | 6,150 | | ವಿಲೇವಾರಿ ಖಾತೆಯಿಂದ (ಶ್ರೀಮತಿ X ನ ಸಾಲ ವಹಿಸಿಕೊಂಡಿದ್ದಕ್ಕೆ) | 10,000 | - | - |
| ಬ್ಯಾಂಕ್ ಖಾತೆಗೆ | 34,985 | 22,173 | 14,162 | ವಿಲೇವಾರಿ ಖಾತೆಯಿಂದ (ಲಾಭ) | 13,235 | 8,823 | 4,412 |
| | **53,235** | **28,823** | **14,412** | | **53,235** | **28,823** | **14,412** |

ಖರ್ಚು ಬ್ಯಾಂಕು ಖಾತೆ ಜಮಾ

| ವಿವರಗಳು | ₹ | ವಿವರಗಳು | ₹ |
|---|---|---|---|
| ಗೆ ಆರಂಭಿಕ ಶಿಲ್ಕು | 5,420 | ಯಿಂದ ವಿಲೇವಾರಿ ಖಾತೆ | 15,500 |
| " ವಿಲೇವಾರಿ ಖಾತೆ | 82,000 | (ಹೊಣೆಗಾರಿಕೆಗಳನ್ನು ಪಾವತಿಸಿದ್ದಕ್ಕೆ) | |
| (ಆಸ್ತಿಗಳ ಮಾರಾಟ) | | " ವಿಲೇವಾರಿ ಖಾತೆ | 600 |
| | | (ವೆಚ್ಚಗಳನ್ನು ಪಾವತಿಸಿದ್ದಕ್ಕೆ) | |
| | | " x ನ ಬಂಡವಾಳ ಖಾತೆ | 34,985 |
| | | " y ನ ಬಂಡವಾಳ ಖಾತೆ | 22,173 |
| | | " z ನ ಬಂಡವಾಳ ಖಾತೆ | 14,162 |
| | **87,420** | | **87,420** |

**ನಿದರ್ಶನ 10.**

ಅಮರ, ಮಧುರ ಮತ್ತು ಪ್ರೇಮ 2 : 1 : 1 ರ ಪ್ರಮಾಣದಲ್ಲಿ ಲಾಭ/ನಷ್ಟವನ್ನು ಹಂಚಿಕೊಳ್ಳುವ ಪಾಲುದಾರರಾಗಿದ್ದಾರೆ. ದಿನಾಂಕ 31–3–2014 ರಂದು ಅವರ ಅಢಾವೆ ಪತ್ರಿಕೆ ಈ ಕೆಳಗಿನಂತಿದೆ. :

**ದಿನಾಂಕ 31–03–2014 ರ ಅಢಾವೆ ಪತ್ರಿಕೆ**

| ಹೊಣೆಗಾರಿಕೆಗಳು | ₹ | ₹ | ಆಸ್ತಿಗಳು | ₹ | ₹ |
|---|---|---|---|---|---|
| ಕೊಡತಕ್ಕ ಹುಂಡಿಗಳು | | 4,300 | ಕೈಯಲ್ಲಿನ ನಗದು | | 1,000 |
| ಸಾಹುಕಾರರು | 6,000 | | ಬರತಕ್ಕ ಹುಂಡಿಗಳು | | 400 |
| | | | ಸರಕುಗಳು | | 20,000 |
| –ಸೋಡಿಗೆ ಮೀಸಲು | 300 | 5,700 | ಸಾಲಗಾರರು | 7,000 | |
| ಬಂಡವಾಳಗಳು : | | | –ಕಾಯ್ದಿರಿಸಿದ ಕರಡು ನಿಧಿ | 400 | 6,600 |
| ಅಮರ | | 30,000 | ಜಂಟಿ ವಿಮಾ ಪಾಲಿಸಿ | | 4,000 |
| ಮಧುರ | | 20,000 | ಯಂತ್ರಗಳು | | 50,000 |
| ಪ್ರೇಮ | | 20,000 | ಮುಂಚಿತವಾಗಿ | | 2,000 |
| ಜಂಟಿ ಜೀವಾ ವಿಮಾ ಪಾಲಿಸಿನಿಧಿ | | 4,000 | - ನೀಡದ ಬಾಡಿಗೆ | | |
| | | **84,000** | | | **84,000** |

ಮೇಲ್ಕಂಡ ದಿನಾಂಕದಂದು ಸಂಸ್ಥೆಯನ್ನು ವಿಸರ್ಜಿಸಲಾಯಿತು.

1. ಅಮರ ಜಂಟಿ ಜೀವ ವಿಮಾ ಪಾಲಿಸಿಯನ್ನು 5000 ₹ಗಳಿಗೆ ತೆಗೆದುಕೊಂಡರು.
2. ಸರಕುಗಳಿಂದ ₹ 22,000 ಬಂದಿದೆ ಸಾಲಗಾರರಿಂದ ₹ 4,100 ಬಂದಿದೆ ಮತ್ತು ಯಂತ್ರಗಳನ್ನು 58,000 ₹ಗಳಿಗೆ ಮಾರಲಾಯಿತು.
3. ಬರತಕ್ಕ ಹುಂಡಿಗಳಿಂದ ಸಂಪೂರ್ಣ ಹಣ ಬಂದಿತು.
4. ₹ 500 ರ ಹುಂಡಿಯೊಂದನ್ನು ಸೋಡೀಕರಿಸಿದ್ದು ತಿರಸ್ಕೃತವಾಗಿದೆ. ಮತ್ತು ಸಂಸ್ಥೆಯಿಂದ ಅದರ ಹಣವನ್ನು ಪಾವತಿಸಿದೆ.
5. ಸಾಹುಕಾರರಿಗೆ ₹ 5,700 ಪಾವತಿಸಿ ಲೆಕ್ಕ ಚುಕ್ತ ಮಾಡಿದೆ ಮತ್ತು ಕೊಡಬೇಕಾದ ಹುಂಡಿಗಳಿಗೆ ಪೂರ್ತಿಯಾಗಿ ಪಾವತಿಸಿದೆ.

**ತಯಾರಿಸಿ:**

a) ವಿಲೇವಾರಿ ಖಾತೆ b) ಪಾಲುಗಾರರ ಬಂಡವಾಳ ಖಾತೆಗಳು. ಮತ್ತು c) ನಗದು ಖಾತೆ

**ನಿರೂಪಣೆ :**

ಖರ್ಚು ವಿಲೇವಾರಿ ಖಾತೆ ಜಮಾ

| ವಿವರಗಳು | ₹ | ವಿವರಗಳು | ₹ |
|---|---|---|---|
| ಬರತಕ್ಕ ಹುಂಡಿಗಳ ಖಾತೆಗೆ | 400 | ಕೊಡತಕ್ಕ ಹುಂಡಿಗಳ ಖಾತೆಯಿಂದ | 4,300 |
| ಸರಕುಗಳ ಖಾತೆಗೆ | 20,000 | ಸಾಹುಕಾರರ ಖಾತೆಯಿಂದ | 6,000 |
| ಸಾಲಗಾರರ ಖಾತೆಗೆ | 7,000 | ಜಂಟಿ ಜೀವವಿಮಾ ಪಾಲಿಸಿ ನಿಧಿ ಖಾತೆಯಿಂದ | 4,000 |
| ಜಂಟಿ ಜೀವವಿಮಾ ಪಾಲಿಸಿ ಖಾತೆಗೆ | 4,000 | ಕಾಯ್ದಿರಿಸಿದ ಕರಡು ಸಾಲದ ಖಾತೆಯಿಂದ | 400 |
| ಯಂತ್ರಗಳ ಖಾತೆಗೆ | 50,000 | ನಗದು ಖಾತೆಯಿಂದ: | |
| ಮುಂಗಡ ಬಾಡಿಗೆ ಖಾತೆಗೆ | 2,000 | ಸರಕು 22,000 | |
| ಸಾಹುಕಾರ ಮೇಲಿನ ಸೋಡಿಗೆಮೀಸಲು | 300 | ಸಾಲಗಾರರು 4,100 | |
| ನಗದು ಖಾತೆಗೆ : | | ಯಂತ್ರಗಳು 58,000 | |
| ಸಾಹುಕಾರರು 5,700 | | ಬರತಕ್ಕ ಹುಂಡಿಗಳು 400 | 84,500 |
| ಕೊಡತಕ್ಕ ಹುಂಡಿಗಳು 4,300 | | ಅಮರಾಳ ಬಂಡವಾಳ ಖಾತೆಯಿಂದ | 5,000. |
| ತಿರಸ್ಕೃತ ಹುಂಡಿ 500 | | (ಜಂಟಿ ಜೀವವಿಮಾ ಪಾಲಿಸಿ | |
| ಪಾಲುದಾರರ ಬಂಡವಾಳ ಖಾತೆಗಳಿಗೆ (ಲಾಭ) | 10,500 | ತೆಗೆದುಕೊಂಡಿದ್ದಕ್ಕೆ) | |
| ಅಮರ 5,000 | | | |
| ಮಧುರ 2,500 | | | |
| ಪ್ರೇಮ 2,500 | 10,000 | | |
| | **1,04,200** | | **1,04,200** |

ಖರ್ಚು ಪಾಲುದಾರರ ಬಂಡವಾಳ ಖಾತೆಗಳು ಜಮಾ

| ವಿವರಗಳು | ಅಮರ | ಮಧುರ | ಪ್ರೇಮ | ವಿವರಗಳು | ಅಮರ | ಮಧುರ | ಪ್ರೇಮ |
|---|---|---|---|---|---|---|---|
| | ₹ | ₹ | ₹ | ₹ | ₹ | ₹ | ₹ |
| ವಿಲೇವಾರಿ ಖಾತೆಗೆ (ಆಸ್ತಿಗಳನ್ನು ತೆಗೆದು -ಕೊಂಡಿದ್ದಕ್ಕೆ) | 5,000 | - | - | ಆರಂಭಿಕ ಶಿಲ್ಕು | 30,000 | 20,000 | 20,000 |
| ನಗದು ಖಾತೆಗೆ | 30,000 | 22,500 | 22,500 | ವಿಲೇವಾರಿ ಖಾತೆಯಿಂದ (ಲಾಭ) | 5,000 | 2,500 | 2,500 |
| | **35,000** | **22,500** | **22,500** | | **35,000** | **22,500** | **22,500** |

ಖರ್ಚು ನಗದು ಖಾತೆ ಜಮಾ

| ವಿವರಗಳು | ₹ | ವಿವರಗಳು | ₹ |
|---|---|---|---|
| ಆರಂಭಿಕ ಶಿಲ್ಕು | 1,000 | ವಿಲೇವಾರಿ ಖಾತೆಯಿಂದ (ಹೊಣೆಗಾರಿಕೆಗಳನ್ನು ಪಾವತಿಸಿದ್ದಕ್ಕೆ) | 10,500 |
| ವಿಲೇವಾರಿ ಖಾತೆಗೆ (ಆಸ್ತಿಗಳ ಮಾರಾಟ) | 84,500 | ಅಮರಾಳ ಬಂಡವಾಳ ಖಾತೆಯಿಂದ | 30,000 |
| | | ಮಧುರಾಳ ಬಂಡವಾಳ ಖಾತೆಯಿಂದ | 22,500 |
| | | ಪ್ರೇಮಾಳ ಬಂಡವಾಳ ಖಾತೆಯಿಂದ | 22,500 |
| | **85,500** | | **85,500** |

## ಪ್ರಶ್ನೆಗಳು

### ಭಾಗ – ಎ

### ಎರಡು ಅಂಕಗಳ ಪ್ರಶ್ನೆಗಳು

1. ಪಾಲುದಾರಿಕೆ ವಿಸರ್ಜನೆಯ ಅರ್ಥವನ್ನು ತಿಳಿಸಿ.
2. ಪಾಲುದಾರಿಕೆ ಸಂಸ್ಥೆಯ ವಿಸರ್ಜನೆ ಎಂದರೇನು?
3. ಪಾಲುದಾರಿಕೆ ಸಂಸ್ಥೆಯ ವಿಸರ್ಜನೆಗೊಳ್ಳುವ ಯಾವುದಾದರೂ ಎರಡು ಸಂದರ್ಭಗಳನ್ನು ತಿಳಿಸಿ.
4. ಪಾಲುದಾರಿಕೆಯ ವಿಸರ್ಜನೆ ಮತ್ತು ಪಾಲುದಾರಿಕೆ ಸಂಸ್ಥೆಯ ವಿಸರ್ಜನೆಯ ನಡುವಿನ ಯಾವುದಾದರು ಎರಡು ವ್ಯತ್ಯಾಸಗಳನ್ನು ತಿಳಿಸಿ
5. ವಿಲೇವಾರಿ ಖಾತೆ ಎಂದರೇನು?
6. ವಿಲೇವಾರಿ ಖಾತೆಯ ಉದ್ದೇಶಗಳನ್ನು ತಿಳಿಸಿ.
7. ದಾಖಲೆ ಆಗಿಲ್ಲದ ಆಸ್ತಿಗಳು/ಹೊಣೆಗಾರಿಕೆಗಳನ್ನು ಲೆಕ್ಕದಲ್ಲಿ ಹೇಗೆ ಪರಿಗಣಿಸುವಿರಿ.
8. ವಿಲೇವಾರಿ ಖಾತೆಯನ್ನು ಏಕೆ ತಯಾರಿಸುತ್ತಾರೆ?
9. ಸಂಸ್ಥೆಯು ವಿಸರ್ಜನೆಯಾದಾಗ ವಿಲೇವಾರಿ ಖಾತೆಯನ್ನು ಹೇಗೆ ಮುಚ್ಚುವಿರಿ?
10. ಸಂಸ್ಥೆಯು ವಿಸರ್ಜನೆಯಾದಾಗ ಕರಡು ಸಾಲದ ಮೀಸಲನ್ನು ಹೇಗೆ ದಾಖಲು ಮಾಡುವಿರಿ?
11. ಸಂಸ್ಥೆಯು ವಿಸರ್ಜನೆಯಾದಾಗ ಪಾಲುದಾರನೊಬ್ಬ ಆಸ್ತಿಯನ್ನು ತೆಗೆದುಕೊಂಡಿದ್ದಕ್ಕೆ ರೋಜು ದಾಖಲೆ ನೀಡಿ.
12. ಸಂಸ್ಥೆಯು ವಿಸರ್ಜನೆಯಾದಾಗ ಪಾಲುದಾರನೊಬ್ಬ ಹೊಣೆಗಾರಿಕೆಯೊಂದನ್ನು ವಹಿಸಿಕೊಂಡಿದ್ದಕ್ಕೆ ರೋಜು ದಾಖಲೆ ನೀಡಿ.
13. ವಿಲೇವಾರಿ ಖಾತೆಯ ಲಾಭವನ್ನು ಪಾಲುದಾರರಿಗೆ ವರ್ಗಾಯಿಸಿದ್ದಕ್ಕೆ ರೋಜು ದಾಖಲೆ ನೀಡಿ.
14. ವಿಲೇವಾರಿ ಖಾತೆಯ ನಷ್ಟವನ್ನು ಪಾಲುದಾರರಿಗೆ ವರ್ಗಾಯಿಸಿದ್ದಕ್ಕೆ ರೋಜು ದಾಖಲೆ ನೀಡಿ
15. ಸಂಸ್ಥೆ ವಿಸರ್ಜನೆಯಾದಾಗ ಪಾಲುದಾರನ ಸಾಲದ ಖಾತೆಯನ್ನು ಮುಚ್ಚಲು ರೋಜು ದಾಖಲೆ ನೀಡಿ.
16. ವಿಲೇವಾರಿ ಖಾತೆಗೆ ಆಸ್ತಿಗಳನ್ನು ವರ್ಗಾಯಿಸಿದ್ದಕ್ಕೆ ರೋಜು ದಾಖಲೆ ನೀಡಿ.
17. ವಿಲೇವಾರಿ ಖಾತೆಗೆ ಹೊಣೆಗಾರಿಕೆಗಳನ್ನು ವರ್ಗಾಯಿಸಿದ್ದಕ್ಕೆ ರೋಜು ದಾಖಲೆ ಬರೆಯಿರಿ.
18. ಪಾಲುದಾರಿಕಾ ಸಂಸ್ಥೆ ವಿಸರ್ಜನೆಯಾದಾಗ ಆಸ್ತಿಗಳನ್ನು ಮಾರಿದ್ದಕ್ಕೆ ರೋಜು ದಾಖಲೆ ನೀಡಿ.
19. ಪಾಲುದಾರಿಕಾ ಸಂಸ್ಥೆ ವಿಸರ್ಜನೆಯಾದಾಗ ವಿಸರ್ಜನಾ ವೆಚ್ಚ ನೀಡಿದ್ದಕ್ಕೆ ರೋಜು ದಾಖಲೆ ಕೊಡಿ.
20. ಪಾಲುದಾರಿಕಾ ಸಂಸ್ಥೆ ವಿಸರ್ಜನೆಯಾದಾಗ ಹೊಣೆಗಾರಿಕೆಯೊಂದನ್ನು ಪಾವತಿಸಿದ್ದಕ್ಕೆ ರೋಜು ದಾಖಲೆ ಕೊಡಿ.

### ಭಾಗ – ಬಿ

### 14 ಅಂಕಗಳ ಪ್ರಶ್ನೆಗಳು

1. ವಿಶ್ವಾಸ್ , ವಿಸ್ಮಯ್ ಮತ್ತು ವಿಕಾಸ್, 2:2:1 ಹಂಚಿಕೆಯ ಪಾಲುದಾರರಾಗಿದ್ದಾರೆ. ಅವರು ತಮ್ಮ ಸಂಸ್ಥೆಯನ್ನು ವಿಸರ್ಜಿಸಲು ನಿರ್ಧರಿಸುತ್ತಾರೆ. ದಿನಾಂಕ : 31–3–2014 ರಂದು ಅವರ ಆಢಾವೆ ಪತ್ರಿಕೆ ಈ ಕೆಳಕಂಡಂತಿದೆ.

## ಅಢಾವೆ ಪತ್ರಿಕೆ

| ಜವಾಬ್ದಾರಿಗಳು | ₹ | ಆಸ್ತಿಗಳು | ₹ |
|---|---|---|---|
| ವಿಸ್ಮಯ್‌ನ ಸಾಲ | 6,000 | ಬ್ಯಾಂಕಿನಲ್ಲಿ ನಗದು | 20,100 |
| ಸಾಹುಕಾರರು | 4,100 | ಸಾಲಗಾರರು | 7,000 |
| ಮೀಸಲು ನಿಧಿ | 10,000 | ಸರಕು | 40,000 |
| ಬಂಡವಾಳಗಳು | | ಪೀಠೋಪಕರಣ | 1,000 |
| ವಿಶ್ವಾಸ್ | 40,000 | ಯಂತ್ರೋಪಕರಣ | 10,000 |
| ವಿಸ್ಮಯ್ | 20,000 | ಕಟ್ಟಡಗಳು | 20,000 |
| ವಿಕಾಸ್ | 18,000 | | |
| | **98,100** | | **98,100** |

**ಆಸ್ತಿ ವಿಲೇವಾರಿ ವಿವರ ಈ ರೀತಿ ಇದೆ :**

ಕಟ್ಟಡಗಳು ₹ 16,000/– ಕ್ಕೆ : ಯಂತ್ರೋಪಕರಣ ₹ 9,000/– : ಪೀಠೋಪಕರಣ ₹ 750/– ಕ್ಕೆ : ಸರಕು ₹ 42,000/– ಕ್ಕೆ ಮತ್ತು ಸಾಲಗಾರರು ₹ 6,000/– ಕ್ಕೆ ವಿಲೇವಾರಿ ಮಾಡಲಾಯಿತು. ಸಾಹುಕಾರರಿಗೆ ಪೂರ್ತಿ ಹಣ ಪಾವತಿಸಲಾಯಿತು. ವಿಸರ್ಜನ ವೆಚ್ಚ ₹ 1,000.

**ತಯಾರಿಸಿ:**

a) ವಿಲೇವಾರಿ ಖಾತೆ b) ಪಾಲುಗಾರರ ಬಂಡವಾಳ ಖಾತೆಗಳು. ಮತ್ತು c) ಬ್ಯಾಂಕು ಖಾತೆ

**ಉತ್ತರ :** ವಿಲೇವಾರಿ ಖಾತೆಯ ನಷ್ಟ ₹ 5250 ಅಂತಿಮ ಹಣ ಸಂದಾಯ : ವಿಶ್ವಾಸ್ ₹ 41900, ವಿಸ್ಮಯ್ ₹ 21900 ಮತ್ತು ವಿಕಾಸ್ ₹ 18950 ಬ್ಯಾಂಕ್ ಖಾತೆಯ ಒಟ್ಟು ₹ 93850

2. ನೇಹ, ನಿಷಾ ಮತ್ತು ನಿಕ್ಕಿ ಪಾಲುದಾರರಾಗಿದ್ದು ಲಾಭ–ನಷ್ಟವನ್ನು 1/2, 1/3 ಮತ್ತು 1/6 ರ ಪ್ರಮಾಣದಲ್ಲಿ ಹಂಚಿಕೊಳ್ಳುತ್ತಿದ್ದರು ಅವರ ಅಢಾವೆ ಪತ್ರಿಕೆ ದಿನಾಂಕ 31–3–2014 ರಂದು ಈ ಕೆಳಗಿನಂತಿದೆ.

## ದಿನಾಂಕ 31–3–2014 ರ ಅಢಾವೆ ಪತ್ರಿಕೆ

| ಹೊಣೆಗಾರಿಕೆಗಳು | ₹ | ₹ | ಆಸ್ತಿಗಳು | ₹ | ₹ |
|---|---|---|---|---|---|
| ಸಾಹುಕಾರರು | | 12,000 | ನಗದು | | 11,000 |
| ಕೊಡತಕ್ಕ ಹುಂಡಿಗಳು | | 5,000 | ಸಾಲಗಾರರು | 8,000 | |
| ನೇಹಾಳ ಸಾಲದ ಖಾತೆ | | 8,000 | –ಕಾಯ್ದಿರಿಸಿದ ನಿಧಿ | 400 | 7,600 |
| ಬಂಡವಾಳಗಳು : | | | ಸರಕು | | 12,400 |
| ನೇಹ | | 20,000 | ಪೀಠೋಪಕರಣ | | 5,000 |
| ನಿಷಾ | | 15,000 | ವಾಹನಗಳು | | 15,000 |
| ನಿಕ್ಕಿ | | 10,000 | ಕಟ್ಟಡಗಳು | | 25,000 |
| ಸಂಚಿತ ನಿಧಿ | | 6,000 | | | |
| | | **76,000** | | | **76,000** |

ಮೇಲಿನ ದಿನಾಂಕದಂದು ಅವರು ಸಂಸ್ಥೆಯನ್ನು ವಿಸರ್ಜಿಸಿದರು.

**ವಿಸರ್ಜನೆಯ ವಿವರಗಳು:**

1. ಆಸ್ತಿಗಳನ್ನು ಈ ಕೆಳಗಿನಂತೆ ಮಾರಿದರು.
   ಸಾಲಗಾರರು ₹ 10,800, ಸರಕು ₹ 16000 ಪೀಠೋಪಕರಣ ₹ 6,000, ವಾಹನಗಳು ₹ 15,000, ಕಟ್ಟಡಗಳು ₹ 30,000
2. ವಿಲೇವಾರಿ ವೆಚ್ಚ ₹ 600.
3. ಸಾಹುಕಾರರು ಮತ್ತು ಕೊಡತಕ್ಕ ಹುಂಡಿಗಳಿಗೆ ಪೂರ್ಣ ಹಣ ಸಂದಾಯ ಮಾಡಲಾಗಿದೆ.
4. ಕೊಡಬೇಕಾದ ಹೊಣೆಗಾರಿಕೆಗಳು ₹ 200 ಸಹ ಪಾವತಿಸಲಾಗಿದೆ.

**ತಯಾರಿಸಿ:**

a) ವಿಲೇವಾರಿ ಖಾತೆ b) ಪಾಲುಗಾರರ ಬಂಡವಾಳ ಖಾತೆಗಳು, ಮತ್ತು c) ನಗದು ಖಾತೆ

**ಉತ್ತರ :** ವಿಲೇವಾರಿ ಖಾತೆಯ ಲಾಭ ₹ 12000 ಅಂತಿಮ ಹಣ ಸಂದಾಯ : ನೇಹ ₹ 29000, ನಿಷಾ ₹ 21000 ಮತ್ತು ನಿಕ್ಕಿ ₹ 13000 ನಗದು ಖಾತೆಯ ಒಟ್ಟು ₹ 88800.

3. ಅರುಣ್, ಕಿರಣ್ ಮತ್ತು ಅರ್ಜುನ್ ರವರು ಪಾಲುಗಾರರಾಗಿದ್ದು, ಲಾಭ-ನಷ್ಟವನ್ನು ಸಮವಾಗಿ ಹಂಚಿಕೊಳ್ಳುತ್ತಿದ್ದು, ಅವರ ಆಢಾವೆ ಪತ್ರಿಕೆ ದಿನಾಂಕ 31-3-2014 ರಂದು ಈ ಕೆಳಗಿನಂತೆ ಇದೆ.

**ದಿನಾಂಕ 31-3-2014 ರ ಆಢಾವೆ ಪತ್ರಿಕೆ**

| ಹೊಣೆಗಾರಿಕೆಗಳು | ₹ | ₹ | ಆಸ್ತಿಗಳು | ₹ | ₹ |
|---|---|---|---|---|---|
| ಧನಿಗಳು | | 12,000 | ಬ್ಯಾಂಕಿನಲ್ಲಿ ನಗದು | | 6,000 |
| ಕೊಡತಕ್ಕ ಹುಂಡಿಗಳು | | 16,000 | ಬರತಕ್ಕ ಹುಂಡಿಗಳು | | 6,000 |
| ಅರುಣನ ಸಾಲ | | 22,000 | ಋಣಿಗಳು | 26,000 | |
| ಮೀಸಲು ನಿಧಿ | | 12,000 | – ಕಾಯ್ದಿರಿಸಿದ ನಿಧಿ | 1,000 | 25,000 |
| ಬ್ಯಾಂಕ್‌ಸಾಲ | | 8,000 | ಸರಕು | | 20,000 |
| ಬಂಡವಾಳಗಳು: | | | ಹೂಡಿಕೆಗಳು | | 8,000 |
| ಅರುಣ್ | | 40,000 | ಪೀಠೋಪಕರಣಗಳು | | 10,000 |
| ಕಿರಣ್ | | 30,000 | ಯಂತ್ರಗಳು | | 25,000 |
| ಅರ್ಜುನ್ | | 20,000 | ಕಟ್ಟಡ | | 60,000 |
| | | **1,60,000** | | | **1,60,000** |

ಮೇಲಿನ ದಿನಾಂಕದಂದು ಅವರು ಸಂಸ್ಥೆಯನ್ನು ವಿಸರ್ಜಿಸಿದ್ದು, ಆಸ್ತಿಗಳ ವಿಲೇವಾರಿ ಕೆಳಗಿನಂತೆ ಆಯಿತು :

1. ಬರತಕ್ಕ ಹುಂಡಿಗಳು ₹5,000.ಋಣಿಗಳು ₹23,500, ಸರಕುಗಳು ₹ 18,000, ಯಂತ್ರಗಳು ₹, 20,000, ಕಟ್ಟಡ ₹75,000.
2. ₹ 10,000 ಕ್ಕೆ ಹೂಡಿಕೆಗಳನ್ನು ಕಿರಣ್ ಮತ್ತು ₹ 8,000 ಕ್ಕೆ ಪೀಠೋಪಕರಣಗಳನ್ನು ಅರ್ಜುನ್ ರವರು ತೆಗೆದುಕೊಂಡರು.
3. ಇತರೆ ಎಲ್ಲಾ ಜವಾಬ್ದಾರಿಗಳನ್ನು ಪೂರ್ತಿ ಪಾವತಿ ಮಾಡಲಾಯಿತು ಮತ್ತು "ವಿಸರ್ಜನೆಯ ವೆಚ್ಚ ₹ 2,500 ಸಹ ಪಾವತಿಸಲಾಯಿತು.

**ತಯಾರಿಸಿ:**

a) ವಿಲೇವಾರಿ ಖಾತೆ b) ಪಾಲುಗಾರರ ಬಂಡವಾಳ ಖಾತೆಗಳು, ಮತ್ತು c) ಬ್ಯಾಂಕು ಖಾತೆ

**ಉತ್ತರ :** ವಿಲೇವಾರಿ ಖಾತೆಯ ಲಾಭ ₹ 3000 , ಅಂತಿಮ ಹಣ ಸಂದಾಯ : ಅರುಣ್ ₹ 45000, ಕಿರಣ್ ₹ 25000 ಮತ್ತು ಅರ್ಜನ್ ₹ 17000, ಬ್ಯಾಂಕ್ ಖಾತೆಯ ಒಟ್ಟು ₹ 147500.

4. ಮೋಹನ್, ನಾಗರಾಜು ಮತ್ತು ಪ್ರಕಾಶ್ ಪಾಲುಗಾರರಾಗಿದ್ದು, ಲಾಭ-ನಷ್ಟವನ್ನು 4:3:2 ರ ಪ್ರಮಾಣದಂತೆ ಹಂಚಿಕೊಳ್ಳುತ್ತಾರೆ, ಅವರ ದಿನಾಂಕ 31-3-2014 ರ ಆಢಾವೆ ಪತ್ರಿಕೆ ಈ ಕೆಳಗಿನಂತಿತ್ತು.

**ದಿನಾಂಕ 31-3-2014 ರ ಆಢಾವೆ ಪತ್ರಿಕೆ**

| ಹೊಣೆಗಾರಿಕೆಗಳು | ₹ | ₹ | ಆಸ್ತಿಗಳು | ₹ | ₹ |
|---|---|---|---|---|---|
| ಧನಿಗಳು | | 25,000 | ನಗದು | | 9,000 |
| ಕೊಡತಕ್ಕ ಹುಂಡಿಗಳು | | 17,000 | ಋಣಿಗಳು | | 27,000 |
| ಪ್ರಕಾಶನ ಸಾಲ | | 10,000 | ಸರಕು | | 15,000 |
| ಮೀಸಲು ನಿಧಿ | | 18,000 | ಹೂಡಿಕೆಗಳು | | 5,000 |
| ಬಂಡವಾಳಗಳು : | | | ಪೀಠೋಪಕರಣ | | 14,000 |
| ಮೋಹನ್ | | 30,000 | ಕೀರ್ತಿಮೌಲ್ಯ | | 20,000 |
| ನಾಗರಾಜ್ | | 20,000 | ಕಟ್ಟಡ | | 40,000 |
| ಪ್ರಕಾಶ್ | | 10,000 | | | |
| | | **1,30,000** | | | **1,30,000** |

ಮೇಲಿನ ದಿನಾಂಕದಂದು ಅವರು ಸಂಸ್ಥೆಯನ್ನು ವಿಸರ್ಜಿಸಿದರು.

1. ಆಸ್ತಿಗಳ ವಿಲೇವಾರಿ ಈ ಕೆಳಗಿನಂತೆ ಮಾಡಿದರು :

   ಋಣಿಗಳಿಂದ ಶೇ.10 ಪುಸ್ತಕದ ಮೌಲ್ಯಕ್ಕಿಂತ ಕಡಿಮೆ ಮತ್ತು ಹೂಡಿಕೆಗಳಿಂದ ಶೇ. 20ಪುಸ್ತಕದ ಮೌಲ್ಯಕಿಂತ ಅಧಿಕ ಹಣ ಬಂದಿದೆ. ಕಟ್ಟಡಗಳನ್ನು ₹ 60,000 ಕ್ಕೆ , ಸರಕುಗಳನ್ನು ₹ 12,000 ಕ್ಕೆ ಮತ್ತು ಪೀಠೋಪಕರಣಗಳನ್ನು ₹ 15,000 ಕ್ಕೆ ಮಾರಲಾಯಿತು.
2. ಕೀರ್ತಿಮೌಲ್ಯವನ್ನು ಮೋಹನ್ ₹ 15,000 ಕ್ಕೆ ತೆಗೆದುಕೊಂಡನು.
3. ಧನಿಗಳು ಮತ್ತು ಕೊಡತಕ್ಕ ಹುಂಡಿಗಳನ್ನು ಶೇ. 5 ಸೋಡಿಯ ಪ್ರಕಾರ ಪಾವತಿಸಿದೆ.
4. ವಿಲೇವಾರಿ ವೆಚ್ಚ ₹2,000.

**ತಯಾರಿಸಿ:**

a) ವಿಲೇವಾರಿ ಖಾತೆ b) ಪಾಲುಗಾರರ ಬಂಡವಾಳ ಖಾತೆಗಳು. ಮತ್ತು c) ನಗದು ಖಾತೆ

**ಉತ್ತರ :** ವಿಲೇವಾರಿ ಖಾತೆಯ ಲಾಭ ₹ 11400, ಅಂತಿಮ ಹಣ ಸಂದಾಯ : ಮೋಹನ್ ₹ 28067, ನಾಗರಾಜು ₹ 29800 ಮತ್ತು ಪ್ರಕಾಶ್ ₹ 16563, ನಗದು ಖಾತೆಯ ಒಟ್ಟು ₹ 126300

5. ಕಾವ್ಯ, ಕವಿತ ಮತ್ತು ಕರಿಷ್ಮ ಪಾಲುಗಾರರಾಗಿದ್ದು, ಲಾಭ-ನಷ್ಟವನ್ನು 3 : 2 : 1 ರ ಪ್ರಮಾಣದಲ್ಲಿ ಹಂಚಿಕೊಳ್ಳುತ್ತಾರೆ. ದಿನಾಂಕ 31-3-2014 ರಂದು ಅವರು ತಮ್ಮ ಸಂಸ್ಥೆಯನ್ನವಿಸರ್ಜಿಸಲು ಒಪ್ಪಿಕೊಳ್ಳುತ್ತಾರೆ. ಆ ದಿನದಂದು ಅವರ ಆಢಾವೆ ಪತ್ರಿಕೆ ಈ ಕೆಳಗಿನಂತಿದೆ.

### ದಿನಾಂಕ 31–3–2014 ರ ಅಢಾವೆ ಪತ್ರಿಕೆ

| ಹೊಣೆಗಾರಿಕೆಗಳು | ₹ | ₹ | ಆಸ್ತಿಗಳು | ₹ | ₹ |
|---|---|---|---|---|---|
| ಸಾಹುಕಾರರು | | 60,000 | ಬ್ಯಾಂಕಿನಲ್ಲಿರುವ ನಗದು | | 30,000 |
| ಕೊಡತಕ್ಕ ಹುಂಡಿಗಳು | | 18,000 | ಬರತಕ್ಕ ಹುಂಡಿಗಳು | | 24,000 |
| ಕಾವ್ಯಳ ಸಾಲ | | 40,000 | ದಾಸ್ತಾನು | | 40,000 |
| ಕಾಯ್ದಿಟ್ಟ ನಿಧಿ | | 36,000 | ಸಾಲಗಾರರು | | 80,000 |
| ಬಂಡವಾಳಗಳು :ಕಾವ್ಯ | | 90,000 | ಮೋಟಾರುಕಾರು | | 20,000 |
| ಕವಿತ | | 60,000 | ಹೂಡಿಕೆಗಳು | | 30,000 |
| ಕರಿಷ್ಮ | | 30,000 | ಪೀಠೋಪಕರಣ | | 26,000 |
| | | | ಯಂತ್ರೋಪಕರಣ | | 60,000 |
| | | | ಲಾಭ–ನಷ್ಟ ಖಾತೆ | | 24,000 |
| | | **3,34,000** | | | **3,34,000** |

1. ಆಸ್ತಿಗಳ ವಿಲೇವಾರಿ ಈ ಕೆಳಗಿನಂತೆ ಮಾಡಿದರು :
   ದಾಸ್ತಾನು ₹44,000, ಸಾಲಗಾರರು ₹ 80,000, ಯಂತ್ರೋಪಕರಣ ₹ 66,000 ಮತ್ತು ಬರತಕ್ಕ ಹುಂಡಿಗಳು ₹ 20,000
2. ಪೀಠೋಪಕರಣವನ್ನು ಕಾವ್ಯ ₹ 30,000 ಕ್ಕೆ ತೆಗೆದುಕೊಂಡಳು, ಹೂಡಿಕೆಗಳನ್ನು ಕವಿತ ₹ 40,000 ಕ್ಕೆ ತೆಗೆದುಕೊಂಡಳು ಮತ್ತು ಕರಿಷ್ಮ ಮೋಟಾರು ಕಾರನ್ನು ₹ 14,800 ಗಳಿಗೆ ತೆಗೆದುಕೊಂಡಳು.
3. ಸಾಹುಕಾರರಿಗೆ ಮತ್ತು ಕೊಡತಕ್ಕ ಹುಂಡಿಗಳಿಗೆ ಹಣ ಪಾವತಿ ಮಾಡಿದಾಗ ಶೇಕಡಾ 10 ರಷ್ಟು ಸೋಡಿ ಸಿಕ್ಕಿದೆ.
4. ವಿಲೇವಾರಿ ವೆಚ್ಚ ₹ 8,000 ಆಗಿರುತ್ತದೆ
5. ಸೋಡೀಕರಿಸಿದ 2000 ದ ಹುಂಡಿಯೊಂದು ತಿರಸ್ಕೃತವಾಗಿದ್ದು, ಸಂಸ್ಥೆ ಹಣಪಾವತಿಸಿದೆ.

ತಯಾರಿಸಿ: a) ವಿಲೇವಾರಿ ಖಾತೆ b) ಪಾಲುಗಾರರ ಬಂಡವಾಳ ಖಾತೆಗಳು. ಮತ್ತು c) ಬ್ಯಾಂಕು ಖಾತೆ

**ಉತ್ತರ :** ವಿಲೇವಾರಿ ಖಾತೆಯ ಲಾಭ ₹ 12600, ಅಂತಿಮ ಹಣ ಸಂದಾಯ : ಕಾವ್ಯ ₹ 72300, ಕವಿತ ₹ 28200, ಮತ್ತು ಕರಿಷ್ಮ ₹ 19300, ಬ್ಯಾಂಕ್ ಖಾತೆಯ ಒಟ್ಟು ₹ 240,000.

6. ಗಗನ್ ಮತ್ತು ರಚಿತ್ ಪಾಲುಗಾರರಾಗಿದ್ದು, ಲಾಭ–ನಷ್ಟವನ್ನು ಸಮನಾಗಿ ಹಂಚಿಕೊಳ್ಳುತ್ತಾರೆ, ಅವರು ಸಂಸ್ಥೆಯನ್ನು ದಿನಾಂಕ 31–3–2014 ರಂದು ವಿಸರ್ಜಿಸಲು ಒಪ್ಪಿಕೊಂಡಿದ್ದಾರೆ. ಆ ದಿನದಂದು ಅವರ ಅಢಾವೆ ಪತ್ರಿಕೆ ಈ ರೀತಿ ಇದೆ.

### ದಿನಾಂಕ 31–3–2014 ರ ಅಢಾವೆ ಪತ್ರಿಕೆ

| ಹೊಣೆಗಾರಿಕೆಗಳು | ₹ | ₹ | ಆಸ್ತಿಗಳು | ₹ | ₹ |
|---|---|---|---|---|---|
| ಧನಿಗಳು | | 25,000 | ಬ್ಯಾಂಕಿನಲ್ಲಿ ನಗದು | | 10,000 |
| ಕೊಡತಕ್ಕ ಹುಂಡಿಗಳು | | 10,000 | ಸರಕು | | 18,000 |
| ರಚಿತ್‌ನ ಸಾಲ | | 10,000 | ಋಣಿಗಳು | 25,000 | |
| ಮೀಸಲು ನಿಧಿ | | 5,000 | – ಕಾಯ್ದಿರಿಸಿದ ನಿಧಿ | 3,000 | 22,000 |
| ಬಂಡವಾಳಗಳು : | | | ಬರತಕ್ಕ ಹುಂಡಿಗಳು | | 5,000 |
| ಗಗನ್ | | 40,000 | ಮೋಟಾರುಕಾರು | | 10,000 |
| ರಚಿತ್ | | 30,000 | ಪೀಠೋಪಕರಣ | | 12,000 |
| | | | ಯಂತ್ರೋಪಕರಣ | | 16,000 |
| | | | ಕಟ್ಟಡಗಳು | | 23,000 |
| | | | ಲಾಭ–ನಷ್ಟ ಖಾತೆ | | 4,000 |
| | | **1,20,000** | | | **1,20,000** |

1. ಆಸ್ತಿಗಳನ್ನು ಈ ಕೆಳಗಿನಂತೆ ಮಾರಾಟ ಮಾಡಲಾಯಿತು ಸರಕು ₹ 25,000. ಋಣಿಗಳು ₹ 20,000. ಬರತಕ್ಕ ಹುಂಡಿಗಳು ₹ 4,000 ಮೋಟಾರು ವಾಹನ ₹ 10,000. ಪೀಠೋಪಕರಣ ₹ 8,000 ಯಂತ್ರೋಪಕರಣ ₹ 15,000.
2. ಧನಿಗಳ ಮೊತ್ತವನ್ನು ಗಗನ್ ತೆಗೆದುಕೊಂಡಿರುತ್ತಾನೆ.
3. ಕೊಡತಕ್ಕ ಹುಂಡಿಗಳನ್ನು ಶೇ. 5 ರಷ್ಟು ಕಡಿಮೆಗೆ ಪಾವತಿಸಲಾಯಿತು.
4. ವಿಸರ್ಜನೆ ಖರ್ಚು ₹ 2,000

**ತಯಾರಿಸಿ:**

a) ವಿಲೇವಾರಿ ಖಾತೆ b) ಪಾಲುಗಾರರ ಬಂಡವಾಳ ಖಾತೆಗಳು. ಮತ್ತು c) ಬ್ಯಾಂಕು ಖಾತೆ

**ಉತ್ತರ :** ವಿಲೇವಾರಿ ಖಾತೆಯ ನಷ್ಟ ₹ 2500, ಅಂತಿಮ ಹಣ ಸಂದಾಯ : ಗಗನ್ ₹ 64250, ರಚಿತ್ ₹ 29250 ಮತ್ತು ಬ್ಯಾಂಕ್ ಖಾತೆಯ ಒಟ್ಟು ₹ 1,15,000.

7. ಅಪ್ಪು, ಅಭಿ ಮತ್ತು ಆಕಾಶ್ ಪಾಲುಗಾರರಾಗಿದ್ದು, ಲಾಭ-ನಷ್ಟವನ್ನು ಸಮನಾಗಿ ಹಂಚಿಕೊಳ್ಳುತ್ತಾರೆ, ಅವರು ಸಂಸ್ಥೆಯನ್ನು ದಿನಾಂಕ 31-3-2014 ರಂದು ವಿಸರ್ಜಿಸಲು ಒಪ್ಪಿಕೊಂಡಿದ್ದಾರೆ. ಆ ದಿನದಂದು ಅವರ ಅಢಾವೆ ಪತ್ರಿಕೆ ಈ ರೀತಿ ಇದೆ.

### ದಿನಾಂಕ 31-3-2014 ರ ಅಢಾವೆ ಪತ್ರಿಕೆ

| ಹೊಣೆಗಾರಿಕೆಗಳು | ₹ | ₹ | ಆಸ್ತಿಗಳು | ₹ | ₹ |
|---|---|---|---|---|---|
| ಅಕ್ಷಯ್‌ನಿಂದ ಸಾಲ | | 2,000 | | | |
| ಧನಿಗಳು | | 15,000 | ಬ್ಯಾಂಕಿನಲ್ಲಿ ನಗದು | | 8,000 |
| ಕೊಡತಕ್ಕ ಹುಂಡಿಗಳು | | 5,000 | ಪೀಠೋಪಕರಣ | | 10,000 |
| ಅಪ್ಪು ನಿಂದ ಸಾಲ | | 5,000 | ಋಣಿಗಳು | | 20,000 |
| ಸಾಮಾನ್ಯನಿಧಿ | | 4,000 | ಸರಕು | | 25,000 |
| ಲಾಭ-ನಷ್ಟ ಖಾತೆ | | 2,000 | ಯಂತ್ರಗಳು | | 15,000 |
| ಅಪ್ಪು | | 20,000 | | | |
| ಅಭಿ | | 15,000 | | | |
| ಆಕಾಶ್ | | 10,000 | | | |
| | | **78,000** | | | **78,000** |

1. ಆಸ್ತಿ ವಿಲೇವಾರಿ ವಿವರ ಇಂತಿದೆ
   ಋಣಿಗಳಿಂದ ಶೇ 10 ಕಡಿಮೆ: ಸರಕು ಶೇ. 10 ಅಧಿಕ.
2. ಅಪ್ಪು ಪೀಠೋಪಕರಣಗಳನ್ನು ₹ 8,000 ಗಳಿಗೆ ಕೊಂಡನು.
3. ಅಭಿ ಯಂತ್ರಗಳನ್ನು ₹ 12,000 ಗಳಿಗೆ ಕೊಂಡನು.
4. ಧನಿಗಳಿಗೆ ಮತ್ತು ಹುಂಡಿಗಳಿಗೆ ಹಣ ಪಾವತಿ ಮಾಡಿದಾಗ ಶೇ.5 ಸೋಡಿ ಬಂದಿದೆ.
5. ವಿಸರ್ಜನಾ ವೆಚ್ಚ ₹ 500.

**ತಯಾರಿಸಿ:**

a) ವಿಲೇವಾರಿ ಖಾತೆ b) ಪಾಲುಗಾರರ ಬಂಡವಾಳ ಖಾತೆಗಳು. ಮತ್ತು c) ಬ್ಯಾಂಕು ಖಾತೆ

**ಉತ್ತರ :** ವಿಲೇವಾರಿ ಖಾತೆಯ ನಷ್ಟ ₹ 4000 , ಅಂತಿಮ ಹಣ ಸಂದಾಯ : ಅಪ್ಪು ₹ 13000, ಅಭಿ ₹ 3500 ಮತ್ತು ಆಕಾಶ್ ₹ 10500 , ಬ್ಯಾಂಕ್ ಖಾತೆಯ ಒಟ್ಟು ₹ 53500.

8. ಆಕಾಶ್, ಪೃಥ್ವಿ ಮತ್ತು ಸಾಗರ್ ½, 1/3 ಮತ್ತು 1/6 ಪ್ರಮಾಣದಲ್ಲಿ ಲಾಭ ಮತ್ತು ನಷ್ಟ ಹಂಚಿಕೊಳ್ಳುವ ಪಾಲುದಾರರಾಗಿದ್ದಾರೆ. ಅವರು 31–3–2014 ರಂದು ತಮ್ಮ ಸಂಸ್ಥೆಯನ್ನು "ಸರ್ಜಿಸಲು ನಿರ್ಧರಿಸಿದರು. ಅಂದು ಅವರ ಅಢಾವೆ ಪತ್ರಿಕೆ ಈ ಕೆಳಗಿನಂತಿದೆ.

**ದಿನಾಂಕ 31–3–2014 ರ ಅಢಾವೆ ಪತ್ರಿಕೆ**

| ಹೊಣೆಗಾರಿಕೆಗಳು | ₹ | ₹ | ಆಸ್ತಿಗಳು | ₹ | ₹ |
|---|---|---|---|---|---|
| ಸಾಹುಕಾರರು | | 10,000 | ಬರತಕ್ಕ ಹುಂಡಿಗಳು | | 6,000 |
| ಕೊಡತಕ್ಕ ಹುಂಡಿಗಳು | | 18,000 | ಬ್ಯಾಂಕಿನಲ್ಲಿನ ನಗದು | | 6,000 |
| ಬ್ಯಾಂಕು ಸಾಲ | | 8,000 | ಸರಕುಗಳು | | 20,000 |
| ಆಕಾಶ್ ನಿಂದ ಸಾಲ | | 12,000 | ಸಾಲುಗಾರರು | 26,000 | |
| ಬಂಡವಾಳಗಳು : | | | –ಕಾಯ್ದಿಟ್ಟ ಕರಡು ಸಾಲದ ನಿಧಿ | 1,000 | 25,000 |
| ಆಕಾಶ್ | | 45,000 | ಕಟ್ಟಡಗಳು | | 50,000 |
| ಪೃಥ್ವಿ | | 30,000 | ಹೂಡಿಕೆಗಳು | | 8,000 |
| ಸಾಗರ್ | | 15,000 | ಪೀಠೋಪಕರಣ | | 10,000 |
| ಮೀಸಲು ನಿಧಿ | | 12,000 | ಯಂತ್ರಗಳು | | 25,000 |
| | | **1,50,000** | | | **1,50,000** |

1. ಆಸ್ತಿಗಳನ್ನು ಕೆಳಗಿನಂತೆ ವಿಲೇವಾರಿ ಮಾಡಲಾಯಿತು. ಬರತಕ್ಕ ಹುಂಡಿಗಳು ₹ 5,000 ಸರಕುಗಳು ₹ 18,000 ಯಂತ್ರಗಳು ₹ 20,000, ಸಾಲಗಾರರು ₹ 22,500 ಪೀಠೋಪಕರಣ ₹ 8,000, ಕಟ್ಟಡಗಳು ₹ 60,000, ಹೂಡಿಕೆಗಳು ₹ 10,000.
2. ಎಲ್ಲಾ ಹೊಣೆಗಾರಿಕೆಗಳನ್ನು ಪೂರ್ತಿಯಾಗಿ ಪಾವತಿಸಿದೆ.
3. ಅಲ್ಲದೆ 3000 ₹ ಹುಂಡಿಯೊಂದನ್ನು ಸೋಡೀಕರಿಸಿದ್ದು ತಿರಸ್ಕೃತಗೊಂಡಿದೆ ಮತ್ತು ಸಂಸ್ಥೆಯಿಂದ ಹಣ ಪಾವತಿಮಾಡಬೇಕಾಗಿ ಬಂತು.
4. ವಿಸರ್ಜನಾ ವೆಚ್ಚ ₹ 2,500 ರಷ್ಟಾಯಿತು.

**ತಯಾರಿಸಿ:**

a) ವಿಲೇವಾರಿ ಖಾತೆ b) ಪಾಲುಗಾರರ ಬಂಡವಾಳ ಖಾತೆಗಳು. ಮತ್ತು c) ಬ್ಯಾಂಕು ಖಾತೆ

**ಉತ್ತರ :** ವಿಲೇವಾರಿ ಖಾತೆಯ ನಷ್ಟ ₹ 6,000 ಅಂತಿಮ ಹಣ ಸಂದಾಯ : ಆಕಾಶ್ ₹ 48,000, ಪೃಥ್ವಿ ₹ 32,000 ಮತ್ತು ಸಾಗರ್ ₹ 16,000. ಬ್ಯಾಂಕು ಖಾತೆಯ ಒಟ್ಟು ₹ 1,49,560.

9. ಹರಿ,ಗಿರಿ ಮತ್ತು ಸೂರಿಯ 31–03–2014 ರ ಅಢಾವೆ ಪತ್ರಿಕೆ ಈ ಕೆಳಗಿನಂತಿದೆ.

**ದಿನಾಂಕ 31–3–2014 ರ ಅಢಾವೆ ಪತ್ರಿಕೆ**

| ಹೊಣೆಗಾರಿಕೆಗಳು | ₹ | ₹ | ಆಸ್ತಿಗಳು | ₹ | ₹ |
|---|---|---|---|---|---|
| ಸಾಹುಕಾರರು | | 2,400 | ನಗದು | | 2,000 |
| ಕೊಡತಕ್ಕ ಹುಂಡಿಗಳು | | 5,400 | ಬ್ಯಾಂಕು | | 4,000 |
| ಬಂಡವಾಳಗಳು : | | | ಬರತಕ್ಕ ಹುಂಡಿಗಳು | | 4,000 |
| ಹರಿ | | 10,000 | ಸರಕುಗಳು | | 8,000 |
| ಗಿರಿ | | 11,000 | ಸಾಲಗರರು | 3,000 | |
| ಸೂರಿ | | 6,200 | –ಕಾಯ್ದಿಟ್ಟ ಕರಡು ಸಾಲದ ನಿಧಿ | 300 | 2,700 |
| | | | ಭೂಮಿ ಮತ್ತು ಕಟ್ಟಡ | | 12,000 |
| | | | ಪೀಠೋಪಕರಣ | | 1,400 |
| | | | ಲಾಭ ಮತ್ತು ನಷ್ಟದ ಖಾತೆ | | 900 |
| | | **35,000** | | | **35,000** |

ಮೇಲ್ಕಂಡ ದಿನಾಂಕದಂದು ಸಂಸ್ಥೆಯನ್ನು ವಿಸರ್ಜಿಸಲಾಯಿತು.

1. ಆಸ್ತಿಗಳನ್ನು ಕೆಳಗಿನಂತೆ ವಿಲೇವಾರಿ ಮಾಡಲಾಯಿತು.
   ಎ) ಬರತಕ್ಕ ಹುಂಡಿಗಳು ₹ 3850
   ಬಿ) ಸಾಲಗಾರರಿಂದ ಶೇ 5 ರಷ್ಟು ಕಡಿಮೆ ಬಂದಿದೆ.
   ಸಿ) ದಾಖಲಾಗಿಲ್ಲದ ಆಸ್ತಿಯೊಂದು ₹ 150 ಕ್ಕೆ ವಿಲೇವಾರಿಯಾಗಿದೆ.
2. ಸೂರಿ ಭೂಮಿ ಮತ್ತು ಕಟ್ಟಡವನ್ನು ಶೇ 10 ರಷ್ಟು ಅಧಿಕ ಬೆಲೆಗೆ ತೆಗೆದುಕೊಂಡನು.
3. ಹರಿ ಕೊಡತಕ್ಕ ಹುಂಡಿಗಳನ್ನು ತೆಗೆದುಕೊಂಡನು.
4. ವಿಸರ್ಜನಾ ವೆಚ್ಚ ₹ 450.

**ತಯಾರಿಸಿ:**

a) ವಿಲೇವಾರಿ ಖಾತೆ b) ಪಾಲುಗಾರರ ಬಂಡವಾಳ ಖಾತೆಗಳು. ಮತ್ತು c) ಬ್ಯಾಂಕು ಖಾತೆ

**ಉತ್ತರ :** ವಿಲೇವಾರಿ ಖಾತೆಯ ಲಾಭ ₹ 900 ಅಂತಿಮ ಹಣ ಸಂದಾಯ : ಹರಿ ₹ 15,400, ಗಿರಿ ₹ 11,000 ಮತ್ತು ಸೂರಿ ಹಣ ತಂದಿದ್ದು ₹ 7,000. ಬ್ಯಾಂಕು ಖಾತೆಯ ಒಟ್ಟು ₹ 29,250.

10. ವೀಣಾ, ಮೀನಾ, ಮತ್ತು ರೀನಾ ಇವರು 2 : 2: 1 ಪ್ರಮಾಣದಲ್ಲಿ ಲಾಭ ಮತ್ತು ನಷ್ಟಗಳನ್ನು ಹಂಚಿಕೊಳ್ಳುವ ಪಾಲುಗಾರರಿದ್ದು, 31–03–2014 ರಂದು, ಅವರು ಪಾಲುಗಾರಿಕೆಯನ್ನು ವಿಸರ್ಜಿಸಲು ನಿರ್ಧರಿಸಿದರು. ಆ ದಿನಾಂಕದಂದು ಅವರ ಅಢಾವೆ ಪತ್ರಿಕೆ ಈ ಕೆಳಗಿನಂತಿತ್ತು.

| ಹೊಣೆಗಾರಿಕೆಗಳು | ₹ | ₹ | ಆಸ್ತಿಗಳು | ₹ | ₹ |
|---|---|---|---|---|---|
| ಸಾಹುಕಾರರು | | 40,000 | ಕೈಯಲ್ಲಿಯ ನಗದು | | 10,000. |
| ಕೊಡಬೇಕಾದ ಹುಂಡಿಗಳು | | 10,000 | ಶಿಲ್ಕು ಮಾಲು (ಸರಕು) | | 30,000 |
| ಸುಮಾಳ ಸಾಲ | | 20,000 | ಸಾಲಗಾರರು | 45,000 | |
| ಮೀನಾಳ ಸಾಲ | | 10,000 | –ಕಾಯ್ದಿಟ್ಟ ನಿಧಿ | 5,000 | 40,000 |
| ಮೀಸಲು ನಿಧಿ | | 15,000 | ಬರಬೇಕಾದ ಹುಂಡಿ | | 10,000 |
| ಬಂಡವಾಳಗಳು : | | | ಮೋಟಾರು ಕಾರು | | 20,000 |
| ವೀಣಾ | | 60,000 | ಹೂಡಿಕೆಗಳು | | 10,000 |
| ಮೀನಾ | | 40,000 | ಪೀಠೋಪಕರಣ | | 20,000 |
| ರೀನಾ | | 30,000 | ಯಂತ್ರೋಪಕರಣಗಳು | | 20,000 |
| | | | ಕಟ್ಟಡ | | 50,000 |
| | | | ಲಾಭ–ನಷ್ಟದ ಖಾತೆ | | 15,000 |
| | | **2,25,000** | | | **2,25,000** |

1. ಆಸ್ತಿಗಳನ್ನು ಈ ಕೆಳಗಿನಂತೆ ಮಾರಾಟಮಾಡಲಾಯಿತು.
   ಸರಕು ₹ 25,000, ಸಾಲಗಾರರು ₹ 42,000, ಯಂತ್ರೋಪಕರಣಗಳು ₹ 15,000, ಮತ್ತು ಪೀಠೋಪಕರಣಗಳು ₹ 18,000,
2. ವೀಣಾಳು 60,000 ₹ ಗಳಿಗೆ ಕಟ್ಟಡವನ್ನು ತೆಗೆದುಕೊಂಡಳು, ಮೀನಾಳು 25,000 ₹ ಗಳಿಗೆ ಮೋಟಾರು ಕಾರನ್ನು ತೆಗೆದುಕೊಳ್ಳಲು ಒಪ್ಪಿದಳು. ಮತ್ತು ರೀನಾಳು ಹೂಡಿಕೆಗಳನ್ನು 15,000 ₹ ಗಳಿಗೆ ತೆಗೆದುಕೊಂಡಳು.

3. ಸಾಹುಕಾರರನ್ನು ಮತ್ತು ಕೊಡಬೇಕಾದ ಹುಂಡಿಗಳನ್ನು ಶೇಕಾಡ 5 ರ ಸೋಡಿಗೆ ಸಂದಾಯ ಮಾಡಲಾಯಿತು.
4. ಸುಮಾಳ ಸಾಲವನ್ನುಪುಸ್ತಕದ ಬೆಲೆಗೆ ವೀಣಾಳು ಸಂದಾಯ ಮಾಡಿದಳು. ವಿಸರ್ಜನಾ ವೆಚ್ಚವು ₹ 5,000 ಗಳಷ್ಟಾಯಿತು.

ತಯಾರಿಸಿ:

a) ವಿಲೇವಾರಿ ಖಾತೆ b) ಪಾಲುಗಾರರ ಬಂಡವಾಳ ಖಾತೆಗಳು. ಮತ್ತು c) ನಗದು ಖಾತೆ

**ಉತ್ತರ :** ವಿಲೇವಾರಿ ಖಾತೆಯ ಲಾಭ ₹ 7500, ಅಂತಿಮ ಹಣ ಸಂದಾಯ : ವೀಣಾ ₹ 23000, ಮೀನಾ ₹ 18000 ಮತ್ತು ರೀನಾ ₹ 16500, ನಗದು ಖಾತೆಯ ಒಟ್ಟು ₹ 1,20,000.

II. ಅಜಯ್, ಅಭಯ್ ಮತ್ತು ಆದಿತ್ಯ 1 : 2 : 1 ರ ಪ್ರಮಾಣದಲ್ಲಿ ಲಾಭ – ನಷ್ಟ ಹಂಚಿಕೊಳ್ಳುವ ಪಾಲುದಾರರು. 31–3–2014. ರಂದು ಅವರ ಅಢಾವೆ ಪತ್ರಿಕೆ ಈ ಕೆಳನಂತಿದೆ.

## ದಿನಾಂಕ 31–3–2014 ರ ಅಢಾವೆ ಪತ್ರಿಕೆ

| ಹೊಣೆಗಾರಿಕೆಗಳು | ₹ | ₹ | ಆಸ್ತಿಗಳು | ₹ | ₹ |
|---|---|---|---|---|---|
| ಸಾಹುಕಾರರು | | 10,000 | ನಗದು | | 5,000 |
| ಕೊಡತಕ್ಕ ಹುಂಡಿಗಳು | | 6,000 | ಸಾಲಗಾರರು | | 15,000 |
| ಬ್ಯಾಂಕು ಮೀರೆಳೆತ | | 4,000 | ಸರಕುಗಳು | | 18,000 |
| ಶ್ರೀಮತಿ ಆದಿತ್ಯರ ಸಾಲ | | 5,000 | ಪೀಠೋಪಕರಣ | | 12,000 |
| ಲಾಭಮತ್ತು ನಷ್ಟದ ಖಾತೆ | | 8,000 | ಯಂತ್ರಗಳು | | 20,000 |
| ಬಂಡವಾಳಗಳು : | | | ಕಟ್ಟಡಗಳು | | 50,000 |
| ಅಜಯ್ | | 42,000 | ಕೀರ್ತಿಮೌಲ್ಯ | | 10,000 |
| ಅಭಯ್ | | 35,000 | | | |
| ಆದಿತ್ಯ | | 20,000 | | | |
| | | **1,30,000** | | | **1,30,000** |

ಮೇಲ್ಕಂಡ ದಿನಾಂಕದಂದು ಸಂಸ್ಥೆಯನ್ನು ವಿಸರ್ಜಿಸಲು ತೀರ್ಮಾನಿಸಿದರು:

1. ಸಾಲಗಾರರಿಂದ ಶೇ 10 ರಷ್ಟು ಕಡಿಮೆ, ಸರಕುಗಳಿಂದ ಶೇ 10 ರಷ್ಟು ಅಧಿಕ ಮತ್ತು ಕಟ್ಟಡಗಳಿಂದ ₹ 62,000 ಹಣ ಬಂದಿದೆ. ದಾಖಲೆಯಾಗಿಲ್ಲದ ವಾಹನದಿಂದ ₹ 4,000 ಬಂದಿದೆ.
2. ಅಜಯ್ ಪೀಠೋಪಕರಣವನ್ನು 9000 ₹ಗಳಿಗೆ ತೆಗೆದುಕೊಂಡನು.
3. ಸಾಹುಕಾರರಿಗೆ ಶೇ 10 ರಷ್ಟು ಕಡಿಮೆ ಪಾವತಿಸಿ ಲೆಕ್ಕ ಚುಕ್ತ ಮಾಡಲಾಯಿತು ಮತ್ತು ಬ್ಯಾಂಕು ಮೀರೆಳೆತದ ಮೇಲಿನ ಬಾಕಿ ಬಡ್ಡಿ 500 ₹ ಗಳನ್ನು ಪಾವತಿಸಲಾಯಿತು.
4. ಆದಿತ್ಯ ಅವನ ಹೆಂಡತಿಯ ಸಾಲ ವಹಿಸಿಕೊಂಡನು.
5. ವಿಸರ್ಜನಾ ವೆಚ್ಚ ₹ 3,000 ಖರ್ಚಾಯಿತು.

ತಯಾರಿಸಿ:

a) ವಿಲೇವಾರಿ ಖಾತೆ b) ಪಾಲುಗಾರರ ಬಂಡವಾಳ ಖಾತೆಗಳು. ಮತ್ತು c) ನಗದು ಖಾತೆ

**ಉತ್ತರ :** ವಿಲೇವಾರಿ ಖಾತೆಯ ಲಾಭ ₹ 800 ಅಂತಿಮ ಹಣ ಸಂದಾಯ : ಅಜಯ್ ₹ 35,200, ಅಭಯ್ ₹ 39,400 ಮತ್ತು ಆದಿತ್ಯ ₹ 27,200 ನಗದು ಖಾತೆಯ ಒಟ್ಟು ₹ 1,24,300.

12. ಗಂಗಾ, ಜಮುನಾ ಮತ್ತು ಕಾವೇರಿ ಸಂಸ್ಥೆಯೊಂದರ ಸಮಪಾಲುಗಾರರು, ಅವರು ಅವರ ಅಢಾವೆ ಪತ್ರಿಕೆ ಈ ಕೆಳಗಿನಂತೆ ಇದೆ.

## ದಿನಾಂಕ 31–3–2014 ರ ಅಢಾವೆ ಪತ್ರಿಕೆ

| ಹೊಣೆಗಾರಿಕೆಗಳು | ₹ | ₹ | ಆಸ್ತಿಗಳು | ₹ | ₹ |
|---|---|---|---|---|---|
| ಸಾಹುಕಾರರು | | 50,000 | ಬ್ಯಾಂಕಿನ ನಗದು | | 25,000 |
| ಕೊಡತಕ್ಕ ಹುಂಡಿಗಳು | | 20,000 | ದಾಸ್ತಾನು | | 30,000 |
| ಬ್ಯಾಂಕು ಸಾಲ | | 10,000 | ಸಾಲಗಾರರು | | 40,000 |
| ಮೀಸಲು ನಿಧಿ | | 15,000 | ಬರತಕ್ಕ ಹುಂಡಿಗಳು | | 10,000 |
| ಬಂಡವಾಳ | | | ಯಂತ್ರೋಪಕರಣ | | 20,000 |
| ಗಂಗಾ | | 60,000 | ಪೀಠೋಪಕರಣ | | 20,000 |
| ಜಮುನಾ | | 40,000 | ಹೂಡಿಕೆ | | 10,000 |
| ಕಾವೇರಿ | | 30,000 | ಮೋಟಾರು ಕಾರು | | 20,000 |
| | | | ಕಟ್ಟಡ | | 50,000 |
| | | **2,25,000** | | | **2,25,000** |

ಮೇಲಿನ ದಿನಾಂಕದಂದು ಸಂಸ್ಥೆ ವಿಸರ್ಜಿಸಲ್ಪಟ್ಟಿದ್ದು ವಿಲೇವಾರಿಯು ಈ ಮುಂದಿನಂತೆ ಆಯಿತು.

1. ಆಸ್ತಿಗಳು ಈ ಕೆಳಗಿನಂತೆ ಮಾರಲ್ಪಟ್ಟವು.

   ಸರಕುಗಳ ದಾಸ್ತಾನು ₹ 30,400, ಸಾಲಗಾರರು ₹42,600, ಬರತಕ್ಕ ಹುಂಡಿಗಳು 9,000, ಯಂತ್ರೋಪಕರಣಗಳು ₹ 15,000, ಪೀಠೋಪಕರಣಗಳು ₹ 18,000.

2. ಗಂಗಾ ಕಟ್ಟಡವನ್ನು ₹ 60,000 ಕ್ಕೆ, ಜಮುನಾ ಮೋಟಾರು ವಾಹನವನ್ನು ₹ 26,600 ಕ್ಕೆ ಮತ್ತು ಕಾವೇರಿ ಹೂಡಿಕೆಗಳನ್ನು ₹ 10,000 ಕ್ಕೆ ಪಡೆದುಕೊಂಡರು.

3. ಹೊಣೆಗಾರಿಕೆಗಳನ್ನು ಪೂರ್ತಿಯಾಗಿ ಪಾವತಿಸಲಾಯಿತು.

4. ವಿಸರ್ಜನಾ ವೆಚ್ಚ ₹ 5,000 ಪಾವತಿಯಾಯಿತು.

**ತಯಾರಿಸಿ:**

a) ವಿಲೇವಾರಿ ಖಾತೆ b) ಪಾಲುಗಾರರ ಬಂಡವಾಳ ಖಾತೆಗಳು, ಮತ್ತು c) ಬ್ಯಾಂಕು ಖಾತೆ

**ಉತ್ತರ :** ವಿಲೇವಾರಿ ಖಾತೆಯ ಲಾಭ ₹ 6600, ಅಂತಿಮ ಹಣ ಸಂದಾಯ : ಗಂಗಾ ₹ 7200, ಜಮುನ ₹ 20600 ಮತ್ತು ಕಾವೇರಿ ₹ 27,200, ಬ್ಯಾಂಕ್ ಖಾತೆಯ ಒಟ್ಟು ₹ 1,40,000.

❖ ❖ ❖ ❖ ❖

## ಅಧ್ಯಾಯ – 6

# ಶೇರು ಬಂಡವಾಳ ಹಾಗೂ ಸಾಲ ಪತ್ರಗಳ ಲೆಕ್ಕ ಪತ್ರಗಳು

**ಕಲಿಕೆಯ ಉದ್ದೇಶಗಳು :**

**ಈ ಅಧ್ಯಾಯವನ್ನು ಕಲಿತ ಮೇಲೆ ನೀವು :**

- ❒ ಸಂಯುಕ್ತ ಬಂಡವಾಳ ಸಂಸ್ಥೆಯ ಪಿಠಿಕೆ, ಅರ್ಥ ಮತ್ತು ವ್ಯಾಖ್ಯೆ ವಿವರಿಸಬಲ್ಲಿರಿ.
- ❒ ಸಂಯುಕ್ತ ಬಂಡವಾಳ ಸಂಸ್ಥೆಯ ಲಕ್ಷಣಗಳನ್ನು ಕಲಿಯುವಿರಿ.
- ❒ ಸಂಯುಕ್ತ ಬಂಡವಾಳ ಸಂಸ್ಥೆಯ ನೀಡುವ ವಿವಿಧ ಪ್ರಕಾರದ ಶೇರುಗಳು ಹಾಗೂ ಸಾಲ ಪತ್ರಗಳ ಬಗೆಗೆ ತಿಳಿದುಕೊಳ್ಳುವಿರಿ.
- ❒ ಶೇರುಗಳು ಹಾಗೂ ಸಾಲ ಪತ್ರಗಳನ್ನು ಅವುಗಳ ಮುಖ ಬೆಲೆಗೆ ಅಧಿಕ ಬೆಲೆಗೆ ಹಾಗೂ ಸೋಡಿಗೆ ನೀಡಿದಾಗ ದಿನವಹಿಯಲ್ಲಿ ಬರೆಯುವ ಜಮಾ ಖರ್ಚು ಕಲಿಯುವಿರಿ.
- ❒ ಶೇರುಗಳ ಮುಟ್ಟುಗೋಲು ಮತ್ತು ಮರು ನೀಡಿಕೆಗೆ ಸಂಬಧಿಸಿದಂತೆ ಜಮಾ ಖರ್ಚು ದಾಖಲೆ ಮಾಡುವುದನ್ನು ಕಲಿಯುವಿರಿ.

### ಪೀಠಿಕೆ (Introduction) :

ಕೈಗಾರಿಕಾ ಕ್ರಾಂತಿಯ ಪೂರ್ವದಲ್ಲಿ ಏಕವ್ಯಕ್ತಿ ವ್ಯಾಪಾರಿ ಸಂಸ್ಥೆಗಳು ಮತ್ತು ಪಾಲಿಗಾರಿಕೆ ಸಂಸ್ಥೆಗಳು ಹೆಚ್ಚು ಪ್ರಚಲಿತದಲ್ಲಿದ್ದವು. ಆದರೆ ಕೈಗಾರಿಕಾ ಕ್ರಾಂತಿಯ ನಂತರ ಉತ್ಪಾದನೆಯ ವಿಧಾನದಲ್ಲಿ ಬದಲಾವಣೆಯಾಯಿತು. ಏಕವ್ಯಕ್ತಿ ವ್ಯಾಪಾರಿ ಸಂಸ್ಥೆಗಳು ಹಾಗೂ ಪಾಲುಗಾರಿಕೆ ಸಂಸ್ಥೆಗಳಿಗೆ ದೊಡ್ಡ ಪ್ರಮಾಣದ ಬಂಡವಾಳವನ್ನು ಒದಗಿಸುವುದು ಸಾಧ್ಯವಾಗಲಿಲ್ಲ. ಏಕೆಂದರೆ ಈ ಸಂಸ್ಥೆಗಳಲ್ಲಿ ಅನಿಯಮಿತ ಹೊಣೆಗಾರಿಕೆ, ಕಡಿಮೆ ಬಂಡವಾಳ, ಮಿತವಾದ ಆಡಳಿತ ಸಾಮರ್ಥ್ಯ ನಿರಂತರ ಅಸ್ತಿತ್ವವಿಲ್ಲದಿರುವಿಕೆ ಮುಂತಾದ ತೊಂದರೆಗಳಿದ್ದವು. ಆದ್ದರಿಂದ ದೊಡ್ಡ ಪ್ರಮಾಣದ ಉತ್ಪಾದನೆಗೆ ದೊಡ್ಡ ಪ್ರಮಾಣದ ಬಂಡವಾಳವನ್ನು ಒದಗಿಸುವುದು ಅನಿವಾರ್ಯವಾಯಿತು. ಸಾರ್ವಜನಿಕರಿಂದ ದೊಡ್ಡ ಪ್ರಮಾಣದಲ್ಲಿ ಬಂಡವಾಳವನ್ನು ಕಲೆಹಾಕಿ ದೊಡ್ಡ ಪ್ರಮಾಣದಲ್ಲಿ ವ್ಯವಹಾರವನ್ನು ಪ್ರಾರಂಭಿಸಲು ಸಂಯುಕ್ತ ಬಂಡವಾಳ ಸಂಸ್ಥೆಗಳು ಉದ್ಭವಿಸಿದವು.

### ಅರ್ಥ (Meaning):

ಕೂಡು ಬಂಡವಾಳ ಸಂಸ್ಥೆ ಎಂಬುದು, ಲಾಭದ ಉದ್ದೇಶದಿಂದ ಸ್ಥಾಪಿಸಲ್ಪಡುವ, ಕಾಯಿದೆಯಡಿಯಲ್ಲಿ ನೋಂದಾಯಿಸಿದ ಸ್ವತಂತ್ರ ಹಾಗೂ ನಿರಂತರ ಅಸ್ತಿತ್ವವನ್ನು ಹೊಂದಿದ, ಸಾಮಾನ್ಯ ಮುದ್ರೆಯುಳ್ಳ, ಸದಸ್ಯರಿಂದ ನೀಡಲ್ಪಟ್ಟ ಸಾಮಾನ್ಯ ಬಂಡವಾಳವುಳ್ಳ, ನಿಯಮಿತ ಹೊಣೆಗಾರಿಕೆಯಿಂದ ಕೂಡಿದ ವ್ಯಕ್ತಿಗಳ ಸ್ವಯಂಪ್ರೇರಿತ ಸಂಸ್ಥೆಯಾಗಿದೆ.

### ವ್ಯಾಖ್ಯೆ (Definition) :

ಇಂಗ್ಲೆಂಡಿನ ನ್ಯಾಯಮೂರ್ತಿ ಲಿಂಡ್ಲೆಯವರ ಪ್ರಕಾರ, ಅನೇಕ ಜನರು ಹಣದ ಮೂಲಕ ಇಲ್ಲವೆ ತತ್ಸಮ ಮೌಲ್ಯದ ಆಸ್ತಿಗಳ ಮೂಲಕ ಸಾಮಾನ್ಯ ಬಂಡವಾಳವನ್ನು ಕೂಡಿಸಿ, ಅದನ್ನು ಯಾವುದಾದರೂ ಒಂದು ಉದ್ಯಮೆ ಅಥವಾ ವ್ಯಾಪಾರದಲ್ಲಿ ತೊಡಗಿಸಿ ಅದರಿಂದ ಉಂಟಾಗುವ ಲಾಭ ಅಥವಾ ನಷ್ಟವನ್ನು ಹಂಚಿಕೊಳ್ಳಲು ಸ್ವಪ್ರೇರಣೆಯಿಂದ ಸ್ಥಾಪಿಸಿದ ಸಂಸ್ಥೆಗೆ ಸಂಯುಕ್ತ ಬಂಡವಾಳ ಸಂಸ್ಥೆಯೆಂದು ಕರೆಯುತ್ತಾರೆ.

## 6.1.2. ಸಂಯುಕ್ತ ಬಂಡವಾಳ ಸಂಸ್ಥೆಯ ಲಕ್ಷಣಗಳು (features):

1. ಸಂಯುಕ್ತ ಬಂಡವಾಳ ಸಂಸ್ಥೆಯು ಜನರ ಸ್ವಪ್ರೇರಣೆಯಿಂದ ಕೂಡಿದ ಸಮೂಹವಾಗಿದೆ.
2. ಇದು ಒಂದು ನೋಂದಾಯಿಸಿದ ಸಂಸ್ಥೆಯಾಗಿದೆ. ಕಂಪನಿಗಳ ಕಾಯಿದೆಯಡಿಯಲ್ಲಿ ನೋಂದಣಿಯಾಗುವುದು ಅಗತ್ಯವಾಗಿದೆ.
3. ಇದು ನಿರಂತರವಾದ ಅಸ್ತಿತ್ವವನ್ನು ಹೊಂದಿದೆ. ಸದಸ್ಯರ ಮರಣ ಬುದ್ಧಿಮಾಂದ್ಯತೆ ಅಥವಾ ದಿವಾಳಿಗಳಿಂದ ಭಾದಿಸಲ್ಪಡುವುದಿಲ್ಲ.
4. ಇದು ಕಾನೂನಿನಿಂದ ಸೃಷ್ಟಿಸಲ್ಪಟ್ಟ ಕೃತಕವ್ಯಕ್ತಿಯಾಗಿದೆ.
5. ಕೂಡು ಬಂಡವಾಳ ಸಂಸ್ಥೆಯ ಸದಸ್ಯರ ಹೊಣೆಗಾರಿಕೆಯು ನಿಯಮಿತವಾಗಿರುತ್ತದೆ. ಅದು ಅವರು ಖರೀದಿಸಿದ ಶೇರುಗಳ ಮುಖಬೆಲೆಗೆ ಮಾತ್ರ ಸೀಮಿತವಾಗಿರುತ್ತದೆ.
6. ಕಂಪನಿಯ ಸದಸ್ಯರು ತಮ್ಮ ಸೇರುಗಳನ್ನು ಇತರರಿಗೆ ವರ್ಗಾಯಿಸಬಹುದು. ಖಾಸಗಿ ಕಂಪನಿಯು ಮಾತ್ರ ತನ್ನ ಶೇರುಗಳ ವರ್ಗಾವಣೆಯ ಮೇಲೆ ನಿರ್ಬಂಧ ಹಾಕುತ್ತದೆ.
7. ಕಂಪನಿಯು ತನ್ನದೇ ಆದ ಮುದ್ರೆಯನ್ನು ಹೊಂದಿರುವುದು ಅವಶ್ಯಕವಾಗಿದೆ. ಅದನ್ನು ಕಂಪನಿಯ ಅಧಿಕೃತ ಸಹಿಯನ್ನಾಗಿ ಉಪಯೋಗಿಸಲಾಗುತ್ತದೆ.

## 6.1.3. ಕಂಪನಿಯ ಶೇರುಬಂಡವಾಳ (Share Capital of a Company Meaning):

### ಅರ್ಥ (Meaning):

ಕಂಪನಿಯು ತನ್ನ ಶೇರುದಾರರಿಂದ ಶೇರುಗಳನ್ನು ನೀಡುವುದರ ಮೂಲಕ ಕೂಡಿಸಿದ ಹಣವು ಶೇರುಬಂಡವಾಳವಾಗಿದೆ.

## 6.1.4. ಶೇರು ಬಂಡವಾಳವನ್ನು ವಿವಿಧ ಹಂತಗಳಲ್ಲಿ ವಿವಿಧ ಪ್ರಕಾರವಾಗಿ ಈ ಕೆಳಗಿನಂತೆ ವಿಂಗಡಿಸಬಹುದು (Different phases of Share Capital) :

**1) ಅಧಿಕೃತ ಬಂಡವಾಳ Authorised capital :**

ಕಂಪನಿಯು ತನ್ನ ಮನವಿ ಪತ್ರದಲ್ಲಿ ಬಂಡವಾಳದ ಕಲುಮಿನಲ್ಲಿ ನಮೂದಿಸಲಾದ ಬಂಡವಾಳಕ್ಕೆ ಅಧಿಕೃತ ಬಂಡವಾಳವೆಂದು ಕರೆಯುತ್ತಾರೆ. ಇದಕ್ಕೆ ನೊಂದಾಯಿಸಿದ ಬಂಡವಾಳ ಅಥವಾ ನಾಮಮಾತ್ರ ಬಂಡವಾಳವೆಂದು ಕರೆಯುತ್ತಾರೆ. ಇದು ಕಂಪನಿಯು ಕೂಡಿಸಬಹುದಾದ ಗರಿಷ್ಠ ಬಂಡವಾಳವಾಗಿದೆ.

**2) ಬಿಡುಗಡೆಯಾದ ಅಥವಾ ನೀಡಿದ ಬಂಡವಾಳ Issued capital :**

ನೀಡಿದ ಬಂಡವಾಳವು ಅಧಿಕೃತ ಬಂಡವಾಳದ ಒಂದು ಭಾಗವಾಗಿದೆ. ಇದು ಕಂಪನಿಯು ಪ್ರತ್ಯಕ್ಷವಾಗಿ ಸಾರ್ವಜನಿಕರಿಗೆ ನೀಡಿದ ಬಂಡವಾಳವಾಗಿರುತ್ತದೆ.

**3) ವಂತಿಗೆಯಾದ ಬಂಡವಾಳ Subscribed capital :**

ಇದು ನೀಡಿದ ಬಂಡವಾಳದ ಭಾಗವಾಗಿದೆ. ಇದು ನೀಡಿದ ಶೇರುಗಳ ಪೈಕಿ ಪ್ರತ್ಯಕ್ಷವಾಗಿ ಸಾರ್ವಜನಿಕರಿಂದ ವಂತಿಗೆಯಾದ ಶೇರುಬಂಡವಾಳವಾಗಿದೆ.

**4) ಕರೆಯಲಾದ ಬಂಡವಾಳ Called up capital :**

ತನ್ನ ಶೇರುಗಳ ಮೇಲೆ ಕಂಪನಿಯು ಎಷ್ಟು ಹಣವನ್ನು ಶೇರುದಾರರು ಕೊಡಬೇಕೆಂದು ಸೂಚಿಸಿದೆಯೋ ಅದಕ್ಕೆ ಕರೆಯಲಾದ ಬಂಡವಾಳ ಎನ್ನುವರು. ಇದು ವಂತಿಗೆಯಾದ ಬಂಡವಾಳದ ಭಾಗವಾಗಿದೆ.

5) ಪಾವತಿಯಾದ ಬಂಡವಾಳ **Paid-up capital :**

ಇದು ಕರೆಯಲಾದ ಬಂಡವಾಳದ ಭಾಗವಾಗಿದೆ. ಶೇರುದಾರರು ವಾಸ್ತವವಾಗಿ ಪಾವತಿ ಮಾಡಿದ ಹಣಕ್ಕೆ ಪಾವತಿಯಾದ ಬಂಡವಾಳ ಎನ್ನುವರು.

## 6.1.5. ಶೇರುಗಳು Shares :

### ಶೇರುಗಳ ಅರ್ಥ Meaning of shares:

ಕಂಪನಿಯ ಬಂಡವಾಳವನ್ನು ನಿರ್ಧಿಷ್ಟ ಬೆಲೆಯ ಸಣ್ಣ ಸಣ್ಣ ಘಟಕಗಳಲ್ಲಿ ವಿಭಾಗಿಸಲಾಗುತ್ತದೆ. ಪ್ರತಿಯೊಂದು ಘಟಕಕ್ಕೆ ಶೇರು ಎಂದು ಕರೆಯುತ್ತಾರೆ.

1956ರ ಭಾರತೀಯ ಕಂಪನಿಯ ಕಾನೂನಿನ ಪ್ರಕಾರ 'ಶೇರು' ಎಂದರೆ ಕಂಪನಿಯ ಬಂಡವಾಳದ ಒಂದು ಭಾಗ. ಶೇರುಗಳನ್ನು ಕೊಂಡವರು ಕಂಪನಿಯ ಶೇರುದಾರರಾಗಿರುತ್ತಾರೆ.

### ಶೇರುಗಳ ಪ್ರಕಾರಗಳು (Types of shares) :

1956ರ ಕಂಪನಿಯ ಕಾನೂನಿನ 86ನೇಯ ಪರಿಚ್ಛೇಧದ ಪ್ರಕಾರ ಕಂಪನಿಯು ಈ ಕೆಳಗಿನ ಎರಡು ಪ್ರಕಾರದ ಶೇರುಗಳನ್ನು ನೀಡುತ್ತದೆ.

1. **ಪ್ರಾಶಸ್ತ್ಯದ ಶೇರುಗಳು (Preference shares) :**
2. **ಸಾಮಾನ್ಯ ಶೇರುಗಳು (Equity shares) :**

### 1. ಪ್ರಾಶಸ್ತ್ಯದ ಶೇರುಗಳು (Preference shares)

ಲಾಭದ ಹಂಚಿಕೆಯಲ್ಲಿ ಮತ್ತು ಬಂಡವಾಳದ ಮರುಪಾವತಿಯ ಸಂದರ್ಭದಲ್ಲಿ ಮೊದಲ ಪ್ರಾಶಸ್ತ್ಯ ನೀಡಲಾಗುವ ಶೇರುಗಳಿಗೆ ಪ್ರಾಶಸ್ತ್ಯದ ಅಥವಾ ಪ್ರಥಮ ಹಕ್ಕಿನ ಶೇರುಗಳೆನ್ನುವರು. ಇವರಿಗೆ ಹಂಚುವ ಲಾಭಾಂಶದ ದರವು ಮೊದಲೆ ನಿರ್ದಿಷ್ಟಪಡಿಸಲಾಗಿರುತ್ತದೆ.

### ಪ್ರಾಶಸ್ತ್ಯದ ಶೇರುಗಳ ವಿಧಗಳು:

### 1. ಸಂಯುಕ್ತ ಬಂಡವಾ

ಅ. ಸಂಚಯವಾಗುವ ಪ್ರಾಶಸ್ತ್ಯದ ಶೇರುಗಳು.

ಆ. ಸಂಚಯವಾಗದ ಪ್ರಾಶಸ್ತ್ಯದ ಶೇರುಗಳು.

ಇ. ಭಾಗವಹಿಸುವ ಪ್ರಾಶಸ್ತ್ಯದ ಶೇರುಗಳು

ಈ. ಭಾಗವಹಿಸದ ಪ್ರಾಶಸ್ತ್ಯದ ಶೇರುಗಳು

ಉ. ಪರಿವರ್ತನೀಯ ಪ್ರಾಶಸ್ತ್ಯದ ಶೇರುಗಳು

ಊ. ಪರಿವರ್ತನೀಯವಲ್ಲದ ಪ್ರಾಶಸ್ತ್ಯದ ಶೇರುಗಳು

ಋ. ವಿಮೋಚನೆಯಾಗುವ ಪ್ರಾಶಸ್ತ್ಯದ ಶೇರುಗಳು

ಎ. ವಿಮೋಚನೆಯಾಗದ ಪ್ರಾಶಸ್ತ್ಯದ ಶೇರುಗಳು

### 2. ಸಾಮಾನ್ಯ ಶೇರುಗಳು (Equity shares) :

1956ರ ಕಂಪನಿಯ ಕಾನೂನಿನಂತೆ ಪ್ರಾಶಸ್ತ್ಯದ ಶೇರುಗಳಲ್ಲದ ಶೇರುಗಳೇ ಸಾಮಾನ್ಯ ಶೇರುಗಳಾಗಿವೆ. ಲಾಭದ ಹಂಚಿಕೆಯಲ್ಲಾಗಲಿ ಅಥವಾ ಬಂಡವಾಳದ ಮರುಪಾವತಿಯಲ್ಲಾಗಲಿ ಯಾವುದೇ ಪ್ರಾಶಸ್ತ್ಯವನ್ನು ಪಡೆಯದಿರುವ ಶೇರುಗಳೇ ಸಾಮಾನ್ಯ ಶೇರುಗಳು

### 6.1.6. ಶೇರುಗಳ ನೀಡಿಕೆ (Issue of shares):

(ಕಂಪನಿ ತನ್ನ ಶೇರುಗಳನನ್ನು ಹಂಚಿಕೆ ಮಾಡಲು ಈ ಕೆಳಗಿನ ಕ್ರಮಗಳನು ಅನುಸರಿಸುತ್ತದೆ)

ಕಂಪನಿಯು ತನ್ನ ಶೇರುಗಳನ್ನು ನೀಡಲು ಈ ಕೆಳಗಿನ ಕ್ರಮಗಳನ್ನು ಅನುಸರಿಸುತ್ತದೆ.

#### ಎ. ಪ್ರಾಸ್ಪೆಕ್ಟರ್ಸ್ ಅಥವಾ ಪರಿಚಯ ಪತ್ರಿಕೆಯನ್ನು ಬಿಡುಗಡೆ ಮಾಡುವುದು (Issue of prospectus):

ಪರಿಚಯ ಪತ್ರಿಕೆಯು ಕಂಪನಿಯ ಶೇರುಗಳನ್ನು ಮತ್ತು ಸಾಲ ಪತ್ರಗಳನ್ನು ಕೊಳ್ಳಲು ಹೂಡಿಕೆ ದಾರರಿಗೆ ಅಥವಾ ಸಾರ್ವಜನಿಕರಿಗೆ ನೀಡುವ ಆಹ್ವಾನವಾಗಿದೆ. ಪರಿಚಯ ಪತ್ರಿಕೆಯು, ಕಂಪನಿಯು ನೀಡಲು ಉದ್ದೇಶಿಸಿರುವ ಶೇರುಗಳ ಪ್ರಕಾರಗಳು, ಶೇರುಗಳ ಸಂಖ್ಯೆ ಶೇರುಗಳ ಅರ್ಜಿ ಜೊತೆಗೆ ಮತ್ತು ಹಂಚಿಕೆಯ ಮೇಲೆ ಪಾವತಿಸಬೇಕಾದ ಹಣದ ವಿವರಗಳನ್ನು ಒಳಗೊಂಡಿರುತ್ತದೆ.

#### ಬಿ. ಕನಿಷ್ಠವಂತಿಗೆ (Minimum subscription):

ಕನಿಷ್ಠವಂತಿಗೆ ಎಂದರೆ, ಒಂದು ಕಂಪನಿಯು ಸಾರ್ವಜನಿಕರಿಗೆ ಶೇರುಗಳನ್ನು ಹಂಚುವ ಮೊದಲು, ಸಾರ್ವಜನಿಕರು ವಂತಿಗೆ ಸಲ್ಲಿಸಬೇಕಾದ ಕನಿಷ್ಠ ಬಂಡವಾಳದ ಮೊತ್ತವಾಗಿದೆ. ಇಷ್ಟು ಬಂಡವಾಳಕ್ಕಾಗಿ ಸಾರ್ವಜನಿಕರಿಂದ ಅರ್ಜಿಗಳ ಮೂಲಕ ವಂತಿಗೆಯ ಬೇಡಿಕೆ ಬಂದಿರಲೇಬೇಕು. ಇಲ್ಲವಾದರೆ ಕಂಪನಿಯು ತನ್ನ ಶೇರುಗಳನ್ನು ಅರ್ಜಿದಾರರಿಗೆ ಹಂಚಲಾಗುವುದಿಲ್ಲ.

ಇಂದು ಕನಿಷ್ಠವಂತಿಗೆಯು ನೀಡಿದ ಬಂಡವಾಳದ 90% ಇರಬೇಕಾಗುತ್ತದೆ.

#### ಸಿ. ಶೇರುಗಳಿಗಾಗಿ ಅರ್ಜಿಗಳನ್ನು ಸ್ವೀಕರಿಸುವುದು (Application for shares):

ಕಂಪನಿಯ ಪರಿಚಯ ಪತ್ರಿಕೆಯನ್ನು ಪಡೆದ ಅಥವಾ ಜಾಹಿರಾತಿನ ಮೂಲಕ ಕಂಪನಿಯ ಶೇರುಗಳ ನೀಡಿಕೆಯ ಬಗೆಗೆ ತಿಳಿದುಕೊಂಡ ಸಾರ್ವಜನಿಕರು, ಶೇರುಗಳಿಗಾಗಿ ಕಂಪನಿಗೆ ಅರ್ಜಿಗಳನ್ನು ಸಲ್ಲಿಸುತ್ತಾರೆ. ಪ್ರತಿ ಶೇರಿಗೆ ಇಂತಿಷ್ಟು ಹಣ ಕಳಿಸಿಕೊಡಬೇಕೆಂದು ಅರ್ಜಿಯಲ್ಲಿ ತಿಳಿಸುವುದರಿಂದ, ಅರ್ಜಿದಾರರು ತಮಗೆ ಬೇಕಾದರೆ ಶೇರುಗಳಿಗಾಗಿ ಅರ್ಜಿಯ ಹಣವನ್ನು ಕಂಪನಿಗೆ ಕಳಿಸಿಕೊಡುತ್ತಾರೆ.

#### ಡಿ. ಶೇರುಗಳ ಹಂಚಿಕೆ(Allotment of shares) :

ಸಾರ್ವಜನಿಕರಿಂದ ಕಂಪನಿಯ ಶೇರುಗಳಿಗಾಗಿ ಸಾಕಷ್ಟು ಬೇಡಿಕೆ ಬಂದಿದ್ದರೆ, ನಿಗದಿಡಪಸಿದ ಅವಧಿಯ ನಂತರ ಕಂಪನಿಯ ನಿರ್ದೇಶಕರು, ಅರ್ಜಿದಾರಿಗೆ ಶೇರುಗಳನ್ನು ಹಂಚಲು ಕ್ರಮಕ್ಕೈಗೊಳ್ಳುತ್ತಾರೆ. ಶೇರುಗಳಿಗಾಗಿ ಬಂದ ಬೇಡಿಕೆಯು ಕಂಪನಿಯು ನೀಡಬಯಸುವ ಶೇರುಗಳಷ್ಟೇ ಇದ್ದರೆ, ಪ್ರತಿಯೊಬ್ಬ ಅರ್ಜಿದಾರನಿಗೆ ಅವನು ಕೇಳಿದಷ್ಟು ಶೇರುಗಳನ್ನು ಹಂಚಲಾಗುತ್ತದೆ. ಒಂದು ವೇಳೆ ಬೇಡಿಕೆಯು ಬಹಳ ಅಧಿಕವಾಗಿದ್ದರೆ, ಹೆಚ್ಚು ಶೇರುಗಳನ್ನು ಕೇಳಿದ ಅರ್ಜಿದಾರರಿಗೆ ಕಡಿಮೆ ಶೇರುಗಳನ್ನು ಹಂಚುತ್ತಾರೆ. ಮತ್ತು ಕೇಲವು ಶೇರುಗಳ ಅರ್ಜಿಗಳನ್ನು ತಿರಸ್ಕರಿಸುತ್ತಾರೆ. ಶೇರುಗಳನ್ನು ಹಂಚಿಕೆ ಮಾಡಿದ ನಂತರ ಶೇರುಗಳನ್ನು ಹಂಚಿದವರಿಗೆ ಹಂಚಿಕೆಯ ಹಣದ ಕಂತನ್ನು ಪಾವತಿಸಬೇಕೆಂದು ಸೂಚಿಸುತ್ತಾರೆ.

#### ಇ. ಶೇರುಗಳ ಮೇಲಿನ ಕರೆ(Calls on Shares) :

ಕಂಪನಿಯು ಅರ್ಜಿದಾರರಿಗೆ ಶೇರುಗಳನ್ನು ವಿತರಣೆ ಮಾಡಿ ವಿತರಣೆ ಹಣ ಪಡೆದ ನಂತರ, ಉಳಿದ ಹಣವನ್ನು ಶೇರುದಾರರಿಂದ ತನಗೆ ಅಗತ್ಯವೇನಿಸಿದಾಗ ಎರಡು ಮೂರು ಕಂತುಗಳಲ್ಲಿ ಪಡೆದುಕೊಳ್ಳುತ್ತದೆ. ಅವುಗಳಿಗೆ "ಶೇರುಗಳ ಮೇಲಿನ ಕರೆ" ಗಳೆಂದು ಕರೆಯುತ್ತಾರೆ. ಇವುಗಳಲ್ಲಿ ಮೊದಲನೆ ಕರೆಗೆ "ಪ್ರಥಮ ಕರೆ" ಎಂದು ಎರಡನೇಯ ಕರೆಗೆ "ದ್ವಿತೀಯ ಕರೆ" ಎಂದು ಮತ್ತು ಕೊನೆಯ ಕರೆಗೆ "ಕೊನೆಯ ಕರೆ" ಎಂದು ಕರೆಯುತ್ತಾರೆ.

### 6.1.7 ಶೇರುಗಳ ನೀಡಿಕೆಗೆ ಸಂಭಂದಿಸಿದ ಜಮಾ ಖರ್ಚು Journal entries relating to issue of shares :

### ಮುಖಬೆಲೆಗೆ ಶೇರುಗಳ ನೀಡಿಕೆ (Issue of shares at par ) :

ಕಂಪನಿಯು ತನ್ನ ಶೇರುಗಳನ್ನು ಮೂರು ಬಗೆಯಾಗಿ ಸಾರ್ವಜನಿಕರಿಗೆ ನೀಡಬಹುದು. ಅದು ತನ್ನ ಶೇರುಗಳನ್ನು ಮುಖಬೆಲೆಗೆ ಅಥವಾ ಅಧಿಕ ಬೆಲೆಗೆ ಅಥವಾ ಸೋಡಿಗೆ ನೀಡಬಹುದು.

ಕಂಪನಿಯು ತನ್ನ ಶೇರುಗಳನ್ನು ಅದರ ಮುಖಬೆಲೆಗೆ ನೀಡುವುದಕ್ಕೆ ಶೇರುಗಳನ್ನು ಮುಖಬೆಲೆಗೆ ನೀಡಿಕೆ ಎಂದು ಕರೆಯುತ್ತಾರೆ.

ಉದಾ: ₹ 10 ಮುಖಬೆಲೆಯ ಶೇರುಗಳನ್ನು ಸಾರ್ವಜನಿಕರಿಗೆ ₹ 10 ಗಳಿಗೆ ನೀಡುವುದು.

ಶೇರುಗಳನ್ನು ಅದರ ಮುಖಬೆಲೆಗೆ ನೀಡಿದಾಗ ಮಾಡಬೇಕಾದ ಜಮಾ ಖರ್ಚು

1. ಅರ್ಜಿದಾರರಿಂದ ಶೇರುಗಳಿಗಾಗಿ ಅರ್ಜಿಯ ಜೊತೆಗೆ ಅರ್ಜಿಯ ಹಣ ಸ್ವೀಕರಿಸಿದಾಗ

| |
|---|
| ಬ್ಯಾಂಕಿನ ಖಾತೆಗೆ ಖರ್ಚು<br>ಶೇರುಗಳ ಅರ್ಜಿಯ ಖಾತೆಗೆ ಜಮಾ |

2. ಅರ್ಜಿಗಳನ್ನು ಪರಿಶೀಲಿಸಿ, ಅರ್ಜಿದಾರರಿಗೆ ಶೇರುಗಳನ್ನು ಹಂಚಿಕೆ ಮಾಡಿದ ನಂತರ ಶೇರುಗಳ ಅರ್ಜಿಯ ಹಣವು ಶೇರು ಬಂಡವಾಳವಾಗುವುದರಿಂದ, ಅರ್ಜಿಹಣವನ್ನು ಶೇರು ಬಂಡವಾಳ ಖಾತೆಗೆ ಜಮಾ ಬರೆಯಲಾಗುತ್ತದೆ.

| |
|---|
| ಶೇರುಗಳ ಅರ್ಜಿಯ ಖಾತೆಗೆ ಖರ್ಚು<br>ಶೇರು ಬಂಡವಾಳ ಖಾತೆಗೆ ಜಮಾ |

3. ಕೆಲವು ಅರ್ಜಿದಾರರಿಗೆ ಶೇರುಗಳನ್ನು ಹಂಚಿಕೆ ಮಾಡದಿದ್ದಾಗ, ಅಂತಹವರ ಅರ್ಜಿಯ ಹಣವನ್ನು ಅವರಿಗೆ ಹಿಂತಿರುಗಿಸಬೇಕಾಗುತ್ತದೆ. ಆಗ ಈ ಕೆಳಗಿನ ದಾಖಲೆಯನ್ನು ಮಾಡಬೇಕು.

| |
|---|
| ಶೇರುಗಳ ಅರ್ಜಿಯ ಖಾತೆಗೆ ಖರ್ಚು<br>ಬ್ಯಾಂಕಿನ ಖಾತೆಗೆ ಜಮಾ |

4. ಕಂಪನಿಯ ನಿರ್ದೇಶಕರು, ಅರ್ಜಿದಾರರಿಗೆ ಶೇರುಗಳನ್ನು ಹಂಚಿಕೆ ಮಾಡಿ ಪ್ರತಿ ಶೇರಿಗೆ ಇಂತಿಷ್ಟು ಹಂಚಿಕೆ ಹಣ ಕಳುಹಿಸಿಕೊಡಬೇಕೆಂದು ಕೇಳಿಕೊಳ್ಳುತ್ತಾರೆ. ಆಗ ಈ ಕೆಳಗಿನ ದಾಖಲೆಗಳನ್ನು ಮಾಡಬೇಕು.

| |
|---|
| ಶೇರುಗಳ ವಿತರಣೆ ಖಾತೆಗೆ ಖರ್ಚು<br>ಶೇರು ಬಂಡವಾಳ ಖಾತೆಗೆ ಜಮಾ |

ಈ ದಾಖಲೆಯಿಂದ ಶೇರು ವಿತರಣೆ ಖಾತೆಯು ತೆರೆಯಲ್ಪಡುತ್ತದೆ. ಅದು ಖರ್ಚಿನ ಬಾಕಿಯನ್ನು ತೋರಿಸುತ್ತದೆ. ಇದರಿಂದ ಶೇರುಗಳನ್ನು ಪಡೆದುಕೊಂಡವರಿಂದ ಶೇರುಗಳ ವಿತರಣೆ ಹಣ ಎಷ್ಟು ಬರಬೇಕಾಗಿದೆಯೆಂಬುದು ಗೊತ್ತಾಗುತ್ತದೆ. ಮತ್ತು ಶೇರುಗಳ ವಿತರಣೆಯ ಹಣವು ಶೇರು ಬಂಡವಾಳವಾಗಿರುವುದರಿಂದ ಅದನ್ನು ಶೇರುಬಂಡವಾಳ ಖಾತೆಗೆ ಜಮಾ ಬರೆಯಲಾಗುತ್ತದೆ.

5. ಕೆಲವು ಅರ್ಜಿದಾರರಿಗೆ ಅವರು ಕೇಳಿದಕ್ಕಿಂತಲೂ ಕಡಿಮೆ ಶೇರುಗಳನ್ನು ಹಂಚಿಕೆ ಮಾಡಿದಾಗ ಅವರು ಅರ್ಜಿಯೊಂದಿಗೆ ಕಳುಹಿಸಿಕೊಟ್ಟ ಅಧಿಕ ಹಣವನ್ನು ಅವರು ಶೇರುಗಳ ವಿತರಣೆಯ ಮೇಲೆ ಕೊಡಬೇಕಾಗಿರುವ ಹಣಕ್ಕೆ ಹೊಂದಾಣಿಕೆ ಮಾಡಲಾಗುತ್ತದೆ. ಇದಕ್ಕಾಗಿ ಈ ಕೆಳಗಿನ ದಾಖಲೆ ಮಾಡಬೇಕಾಗುತ್ತದೆ.

| |
|---|
| ಶೇರುಗಳ ಅರ್ಜಿಯ ಖಾತೆಗೆ ಖರ್ಚು<br>ಶೇರುಗಳ ವಿತರಣೆ ಖಾತೆಗೆ ಜಮಾ |

6. ಅರ್ಜಿದಾರರು ಅರ್ಜಿಯೊಂದಿಗೆ ಕಳುಹಿಸಿಕೊಟ್ಟ ಹೆಚ್ಚಿನ ಹಣವನ್ನು ಶೇರುಗಳ ವಿತರಣೆ ಖಾತೆಗೆ ವರ್ಗಾಯಿಸಿದ ನಂತರವೂ ಇನ್ನೂ ಹೆಚ್ಚು ಹಣ ಉಳಿದರೆ, ಆ ಹೆಚ್ಚಿನ ಹಣವನ್ನು ಮುಂಗಡ ಕರೆಗಳ ಖಾತೆಗೆ ವರ್ಗಾಯಿಸಬೇಕಾಗುತ್ತದೆ. ಇದಕ್ಕಾಗಿ ಈ ಕೆಳಗಿನ ದಾಖಲೆ ಮಾಡಬೇಕಾಗುತ್ತದೆ.

| |
|---|
| ಶೇರುಗಳ ಅರ್ಜಿಯ ಖಾತೆಗೆ ಖರ್ಚು<br>ಮುಂಗಡ ಕರೆಗಳ ಖಾತೆಗೆ ಜಮಾ |

ಮುಂಗಡ ಕರೆಗಳ ಖಾತೆಯು ಶೇರುಗಳ ಮೇಲೆ ಮುಂಗಡವಾಗಿ ಬಂದ ಕರೆಗಳನ್ನು ತೋರಿಸುತ್ತದೆ. ಮುಂದೆ ಕಂಪನಿಯು ಶೇರುಗಳ ಮೇಲೆ ಕರೆಗಳನ್ನು ಮಾಡಿದಾಗ ಅದಕ್ಕೆ ಈ ಮುಂಗಡವಾಗಿ ಬಂದ ಹಣವನ್ನು ವರ್ಗಾಯಿಸಲಾಗುತ್ತದೆ.

7. ಶೇರುದಾರರು ಶೇರುಗಳ ವಿತರಣೆ ಹಣವನ್ನು ಕಳುಹಿಸಿಕೊಟ್ಟ ನಂತರ, ಕೆಳಗೆ ಕೊಟ್ಟ ದಾಖಲೆಯನ್ನು ಮಾಡಬೇಕು.

| |
|---|
| ಬ್ಯಾಂಕಿನ ಖಾತೆಗೆ ಖರ್ಚು<br>ವಿತರಣೆ ಖಾತೆಗೆ ಜಮಾ |

ಶೇರುಗಳ ವಿತರಣೆಯ ಎಲ್ಲಾ ಹಣ ಬಂದರೆ, ಶೇರುಗಳ ವಿತರಣೆ ಖಾತೆಯು ಮುಚ್ಚಲ್ಪಡುತ್ತದೆ. ಯಾರಾದರೂ ಹಣಕೊಡದಿದ್ದರೆ ಈ ಖಾತೆಯು ಬಾಕಿಯನ್ನು ತೋರಿಸುತ್ತದೆ.

8. ನಿರ್ದೇಶಕರು ಕರೆಯನ್ನು ಮಾಡಿದಾಗ ಕೆಳಗೆ ಕೊಟ್ಟ ದಾಖಲೆಯನ್ನು ಮಾಡಬೇಕು.

| |
|---|
| ಶೇರುಗಳ ಪ್ರಥಮ ಕರೆಯ ಖಾತೆಗೆ ಖರ್ಚು<br>ಶೇರು ಬಂಡವಾಳ ಖಾತೆಗೆ ಜಮಾ |

ಈ ದಾಖಲೆಯಿಂದ ಶೇರುಗಳ ಕರೆಯ ಕಾತೆಯು ತೆರೆಯಲ್ಪಡುತ್ತದೆ. ಕರೆಯ ಹಣವು ಬಂಡವಾಳಗಿರುವುದರಿಂದ ಅದನ್ನು ಶೇರುಬಂಡವಾಳ ಖಾತೆಗೆ ಜಮಾ ಬರೆಯಲಾಗುತ್ತದೆ.

9. ಶೇರುದಾರರಿಂದ ಶೇರುಗಳ ಕರೆಯ ಹಣವು ಬಂದಾಗ ಈ ಕೆಳಗಿನ ದಾಖಲೆಯನ್ನು ಮಾಡಬೇಕು.

| |
|---|
| ಬ್ಯಾಂಕಿನ ಖಾತೆಗೆ ಖರ್ಚು<br>ಶೇರುಗಳ ಕರೆ ಖಾತೆಗೆ ಜಮಾ |

ಎಲ್ಲಾ ಶೇರುದಾರರು ಕರೆಯ ಹಣವನ್ನು ಕೊಟ್ಟರೆ ಕರೆಯ ಖಾತೆ ಮುಚ್ಚಲ್ಪಡುತ್ತದೆ. ಕರೆಯ ಹಣ ಕೊಟ್ಟಿರದಿದ್ದರೆ ಆಗ ಈ ಖಾತೆಯು ಬಾಕಿಯನ್ನು ತೋರಿಸುತ್ತದೆ. ಇಂತಹ ಬಾಕಿಗೆ, ಬಾಕಿ ನಿಂತಿರುವ ಕರೆಗಳು ಎಂದು ಕರೆಯುತ್ತಾರೆ.

10. ಕೆಲವು ಶೇರುದಾರರು ಮುಂಗಡವಾಗಿ ಕರೆ ಹಣವನ್ನು ಕೊಟ್ಟಿದರೆ ಆ ಹಣವನ್ನು ಶೇರುಗಳ ಕರೆಯ ಖಾತೆಗೆ ವರ್ಗಾಯಿಸಲಾಗುತ್ತದೆ. ಆಗ ಈ ಕೆಳಗಿನ ದಾಖಲೆಯನ್ನು ಬರೆಯಬೇಕು.

| |
|---|
| ಮುಂಗಡ ಕರೆಗಳ ಖಾತೆಗೆ ಖರ್ಚು<br>ಶೇರುಗಳ ಕರೆ ಖಾತೆಗೆ ಜಮಾ |

### ಬಾಕಿನಿಂತಿರುವ ಕರೆಗಳು (Calls-in-arrears):

ಶೇರುದಾರರು, ತಾವು ಹೊಂದಿದ ಶೇರುಗಳ ಮೇಲಿನ ಹಂಚಿಕೆ ಹಣ ಅಥವಾ ಕರೆಯ ಹಣ ಅಥವಾ ಎರಡನ್ನು ನಿಗದಿಪಡಿಸಿದ ದಿನಾಂಕದೊಳಗೆ ಸಂದಾಯ ಮಾಡದಿದ್ದಾಗ ಇಂತಹ ಬಾಕಿಗೆ ಬಾಕಿ ನಿಂತಿರುವ ಕರೆಗಳು ಎಂದು ಕರೆಯುತ್ತಾರೆ.

### ಮುಂಗಡ ಕರೆಗಳು (Calls in advance):

ಕೆಲವು ಶೇರುದಾರರು, ಕಂಪನಿಯು ಕರೆಯ ಹಣವನ್ನು ಪಾವತಿಸಲು ಸೂಚಿಸದಿದ್ದರೂ ₹ ತಾವು ಹೊಂದಿದ ಶೇರುಗಳ ಮೇಲಿನ ಕರೆಯ ಹಣವನ್ನು ಮುಂಗಡವಾಗಿ ಕೊಡುತ್ತಾರೆ. ಹೀಗೆ ಮುಂಗಡವಾಗಿ ಪಾವತಿಸಿದ ಹಣಕ್ಕೆ "ಮುಂಗಡ ಕರೆ" ಎಂದು ಕರೆಯುತ್ತಾರೆ. ಇದಕ್ಕಾಗಿ ಈ ಕೆಳಗಿನ ದಾಖಲೆ ಮಾಡಬೇಕಾಗುತ್ತದೆ.

| |
|---|
| ಬ್ಯಾಂಕಿನ ಖಾತೆಗೆ ಖರ್ಚು<br>ಮುಂಗಡ ಕರೆಗಳ ಖಾತೆಗೆ ಜಮಾ |

ಕಂಪನಿಯು ಕರೆಯನ್ನು ಮಾಡಿದಾಗ, ಮುಂಗಡ ಕರೆಗಳ ಖಾತೆಯಲ್ಲಿರುವ ಹಣವನ್ನು ಶೇರುಗಳ ಕರೆಯ ಖಾತೆಗೆ ವರ್ಗಾಯಿಸಲಾಗುತ್ತದೆ. ಇದನ್ನು ಈ ಕೆಳಗಿನಂತೆ ದಾಖಲೆ ಮಾಡಬೇಕಾತ್ತದೆ.

| |
|---|
| ಮುಂಗಡ ಕರೆಗಳ ಖಾತೆಗೆ ಖರ್ಚು<br>ಶೇರುಗಳ ಖಾತೆಗೆ ಜಮಾ ಕರೆಯ |

ಮುಂಗಡವಾಗಿ ಬಂದ ಎಲ್ಲಾ ಹಣವನ್ನು ಕರೆಗಳ ಖಾತೆಗೆ ವರ್ಗಾಯಿಸಿದ ನಂತರ ಮುಂಗಡ ಕರೆಗಳ ಖಾತೆಯು ಮುಚ್ಚಲ್ಪಡುತ್ತದೆ.

## 6.1.8 ಕಂಪನಿಯ ಅಢಾವೆ ಪತ್ರಿಕೆಯಲ್ಲಿ ಶೇರು ಬಂಡವಾಳದ ಮಂಡನೆ Presentation of Share Capital in Position statement (balance sheet)

**XYZ** ಕಂಪನಿಯು 10,00,000 ರೂ ಬಂಡವಾಳದೊಂದಿಗೆ ನೋಂದಾಯಿಸಲ್ಪಟ್ಟಿದೆ ಇದನ್ನು 10 ರೂ ಮೌಲ್ಯದ 1,00,000 ಶೇರುಗಳಲ್ಲಿ ವಿಂಗಡಿಸಲಾಗಿದೆ. ಇವುಗಳಲ್ಲಿ 50,000 ಶೇರುಗಳನ್ನು ಸಾರ್ವಜನಿಕರಿಗೆ ನೀಡಲಾಯಿತು. 45,000 ಶೇರುಗಳು ಸಾರ್ವಜನಿಕರಿಂದ ಕೊಳ್ಳಲ್ಪಟ್ಟವು. ಎಲ್ಲಾ ಶೇರುಗಳನ್ನು ಹಂಚಿಕೆ ಮಾಡಲಾಯಿತು. ಕಂಪನಿಯು ಇದುವರೆಗೆ ಪ್ರತಿ ಶೇರಿಗೆ 8 ರೂಗಳಂತೆ ಕರೆಮಾಡಿತು.

ಪ್ರತಿ ಶೇರಿಗೆ ರೂ 2ರಂತೆ 1000 ಶೇರುಗಳ ಮೇಲಿನ ಮೊದಲ ಕರೆಯ ಹಣ ಹೊರತುಪಡಿಸಿ ಉಳಿದೆಲ್ಲ ಹಣವು ಸಂದಾಯವಾಯಿತು.

ಮೇಲಿನ ವ್ಯವಹಾರವನ್ನು ಕಂಪನಿಯ ಅಡಾವೆ ಪತ್ರಿಕೆಯಲ್ಲಿ ತೋರಿಸಿ.

**ನಿರೂಪಣೆ :**

**XYZ ಕಂಪನಿ ನಿಯಮಿತ ದಿನವಹಿ**

**ಅಢಾವೆ ಪತ್ರಿಕೆಯಲ್ಲಿ ಮಂಡಿಸಲಾಗಿರುವ ಶೇರುಬಂಡವಾಳ**

| | | |
|---|---|---|
| **ಶೇರು ಬಂಡವಾಳ :** | | |
| **ಅಧಿಕೃತ ಬಂಡವಾಳ :** | | |
| 10 ರೂಗಳ 1,00,000 ಶೇರುಗಳು | | 10,00,000 |
| **ನೀಡಿದ ಬಂಡವಾಳ** | | |
| 10 ರೂಗಳ 50,000 ಶೇರುಗಳು | | 5,00,000 |
| **ಕೊಂಡಬಂಡವಾಳ** | | |
| 10 ರೂಗಳ 45,000 ಶೇರುಗಳು | | 4,50,000 |
| **ಕರೆದ ಬಂಡವಾಳ** | | |
| 10 ರೂಗಳ 45,000 ಶೇರುಗಳು | 4,50,000 | |
| **ವಜಾ: ಬಾಕಿನಿಂತ ಕರೆಗಳು** | | |
| 2 ರೂ ನಂತೆ 1000 ಶೇರುಗಳು | 2,000 | |
| **ಸಂದಾಯವಾದ ಬಂಡವಾಳ** | | |
| | | 4,48,000 |

## ನಿದರ್ಶನ 1.

ಬೆಂಗಳೂರು ಸ್ಟಾಫ್ಟ್‌ವೇರ್ ಕಂಪನಿ ನಿಯಮಿತವು ₹ 10 ಮುಖಬೆಲೆಯ 5000/– ಸಾಮಾನ್ಯ ಶೇರುಗಳನ್ನು ಸಾರ್ವಜನಿಕರಿಗೆ ನೀಡಿತು. ಅವುಗಳ ಮೇಲೆ ಕೆಳಗೆ ತೋರಿಸಿದಂತೆ ಹಣ ಕೊಡಬೇಕೆಂದು ಪ್ರಕಟಿಸಿತು.

₹ 2 ಅರ್ಜಿಯ ಜೊತೆಗೆ

₹ 2 ವಿತರಣೆಯಾದ ನಂತರ

₹ 3 ಪ್ರಥಮ ಕರೆ

₹ 3 ಕೊನೆಯ ಕರೆ

ಎಲ್ಲಾ ಶೇರುಗಳು ಸಾರ್ವಜನಿಕರಿಂದ ಕೊಳ್ಳಲ್ಪಟ್ಟವು. ಈ ವ್ಯವಹಾರಗಳನ್ನು ಕಂಪನಿಯ ದಿನವಹಿಯಲ್ಲಿ ಬರೆಯಿರಿ.

**ನಿರೂಪಣೆ :**

**ಬೆಂಗಳೂರು ಸ್ಟಾಫ್ಟ್‌ವೇರಿನ ದಿನವಹಿ**

| | ವಿವರಣೆ | ಪಾ.ಖಾ | ಖರ್ಚು | ಜಮಾ |
|---|---|---|---|---|
| 1 | ಬ್ಯಾಂಕಿನ ಖಾತೆಗೆ ಖರ್ಚು<br>ಸಾಮಾನ್ಯ ಶೇರುಗಳ ಅರ್ಜಿಯ ಖಾತೆಗೆ ಜಮಾ<br>(5000 ಶೇರುಗಳ ಮೇಲೆ ಪ್ರತಿ ಶೇರಿಗೆ ₹ 2ರಂತೆ ಅರ್ಜಿದಾರರಿಂದ ಅರ್ಜಿ ಹಣ ಪಡೆಯಲಾಯಿತು) | | 10,000 | 10,000 |
| 2 | ಸಾಮಾನ್ಯ ಶೇರುಗಳ ಅರ್ಜಿಯ ಖಾತೆಗೆ ಖರ್ಚು<br>ಸಾಮಾನ್ಯ ಶೇರು ಬಂಡವಾಳ ಖಾತೆಗೆ ಜಮಾ<br>(ಸಾಮಾನ್ಯ ಶೇರುಗಳ ಅರ್ಜಿಯ ಹಣವನ್ನು ಶೇರು ಬಂಡವಾಳ ಖಾತೆಗೆ ವರ್ಗಾಹಿಸಲಾಯಿತು.) | | 10,000 | 10,000 |
| 3 | ಸಾಮಾನ್ಯ ಶೇರುಗಳ ವಿತರಣೆ ಖಾತೆಗೆ ಖರ್ಚು<br>ಸಾಮಾನ್ಯ ಶೇರುಗಳ ಬಂಡವಾಳ ಖಾತೆಗೆ ಜಮಾ<br>(5,000 ಸಾಮಾನ್ಯ ಶೇರುಗಳನ್ನು ಹಂಚಿದ ನಂತರ ಪ್ರತಿ ಶೇರಿಗೆ ₹ 2ರಂತೆ ಹಂಚಿಕೆ ಹಣ ಕಳಿಸಿಕೊಡಲು ಶೇರುದಾರರಿಗೆ ಕೇಳಿಕೊಂಡ ಬಗ್ಗೆ) | | 10,000 | 10,000 |
| 4 | ಬ್ಯಾಂಕಿನ ಖಾತೆಗೆ ಖರ್ಚು<br>ಸಾಮಾನ್ಯ ಶೇರುಗಳ ವಿತರಣೆ ಖಾತೆಗೆ ಜಮಾ<br>(5,000 ಸಾಮಾನ್ಯ ಶೇರುಗಳ ಮೇಲೆ ಪ್ರತಿ ಶೇರಿಗೆ ₹ 2ರಂತೆ ಹಂಚಿಕೆ ಹಣ ಪಡೆಯಲಾಯಿತು.) | | 10,000 | 10,000 |
| 5 | ಸಾಮಾನ್ಯ ಶೇರುಗಳ ಪ್ರಥಮ ಕರೆಯ ಖಾತೆಗೆ ಖರ್ಚು<br>ಸಾಮಾನ್ಯ ಶೇರುಗಳ ಬಂಡವಾಳ ಖಾತೆಗೆ ಜಮಾ<br>(5,000 ಸಾಮಾನ್ಯ ಶೇರುಗಳ ಮೇಲೆ ಪ್ರತಿ ಶೇರಿಗೆ 3 ರೂಗಳಂತೆ ಶೇರುದಾರರಿಗೆ ಪ್ರಥಮ ಕರೆಯ ಹಣ ಕಳಿಸಿಕೊಡಬೇಕೆಂದು ಕೇಳಿಕೊಳ್ಳಲಾಯಿತು.) | | 15,000 | 15,000 |

| | | | | |
|---|---|---|---|---|
| 6 | ಬ್ಯಾಂಕಿನ ಖಾತೆಗೆ ಖರ್ಚು<br>ಸಾಮಾನ್ಯ ಶೇರುಗಳ ಪ್ರಥಮ ಕರೆಯ ಖಾತೆಗೆ ಜಮಾ<br>(5,000 ಸಾಮಾನ್ಯ ಶೇರುಗಳ ಮೇಲೆ ಶೇರಿಗೆ 3 ರೂಗಳಂತೆ ಪ್ರಥಮ ಕರೆಯ ಹಣ ಪಡೆಯಲಾಯಿತು.) | | 15,000 | 15,000 |
| 7 | ಸಾಮಾನ್ಯ ಶೇರುಗಳ ಅಂತಿಮ ಕರೆಯ ಖಾತೆಗೆ ಖರ್ಚು<br>ಸಾಮಾನ್ಯ ಶೇರುಗಳ ಬಂಡವಾಳ ಖಾತೆಗೆ ಜಮಾ<br>(5,000 ಸಾಮಾನ್ಯ ಶೇರುಗಳ ಮೇಲೆ ಪ್ರತಿ ಶೇರಿಗೆ 3 ರೂಗಳಂತೆ ಶೇರುದಾರರಿಗೆ ಅಂತಿಮ ಕರೆಯ ಹಣ ಕಳಿಸಿಕೊಡಬೇಕೆಂದು ಕೇಳಿಕೊಳ್ಳಲಾಯಿತು.) | | 15,000 | 15,000 |
| 8 | ಬ್ಯಾಂಕಿನ ಖಾತೆಗೆ ಖರ್ಚು<br>ಸಾಮಾನ್ಯ ಶೇರುಗಳ ಅಂತಿಮ ಕರೆಯ ಖಾತೆಗೆ ಜಮಾ<br>(5,000 ಸಾಮಾನ್ಯ ಶೇರುಗಳ ಮೇಲೆ ಶೇರಿಗೆ 3 ರೂಗಳಂತೆ ಅಂತಿಮ ಕರೆಯ ಹಣ ಪಡೆಯಲಾಯಿತು.) | | 15,000 | 15,000 |

**ನಿದರ್ಶನ 2.**

ಸನ್‌ರೈಸ್ ಕಂಪನಿ ನಿಯಮಿತವು ₹ 100 ಮುಖಬೆಲೆಯ 20,000/– ಪ್ರಥಮ ಹಕ್ಕಿನ ಶೇರುಗಳನ್ನು ಸಾರ್ವಜನಿಕರಿಗೆ ನೀಡಿತು. ಅವುಗಳ ಮೇಲೆ ಕೆಳಗೆ ತೋರಿಸಿದಂತೆ ಹಣ ಕೊಡಬೇಕೆಂದು ಕೇಳಿಕೊಂಡಿತು.

₹ 10 ಅರ್ಜಿಯ ಜೊತೆಗೆ

₹ 50 ವಿತರಣೆಯಾದ ನಂತರ

₹ 40 ಪ್ರಥಮ ಹಾಗೂ ಅಂತಿಮ ಕರೆ

ಎಲ್ಲಾ ಶೇರುಗಳು ಸಾರ್ವಜನಿಕರಿಂದ ಕೊಳ್ಳಲ್ಪಟ್ಟವು. ಈ ವ್ಯವಹಾರಗಳನ್ನು ಕಂಪನಿಯ ದಿನವಹಿಯಲ್ಲಿ ಬರೆಯಿರಿ.

**ನಿರೂಪಣೆ :**

**ಸನ್‌ರೈಸ್ ಕಂಪನಿ ನಿಯಮಿತ ದಿನವಹಿ**

| | ವಿವರಣೆ | ಪಾ.ಖಾ | ಖರ್ಚು | ಜಮಾ |
|---|---|---|---|---|
| 1 | ಬ್ಯಾಂಕಿನ ಖಾತೆಗೆ ಖರ್ಚು<br>ಪ್ರಥಮ ಹಕ್ಕಿನ ಶೇರುಗಳ ಅರ್ಜಿಯ ಖಾತೆಗೆ ಜಮಾ<br>(20,000 ಶೇರುಗಳ ಮೇಲೆ ಶೇರಿಗೆ ₹ 10ರಂತೆ ಅರ್ಜಿದಾರರಿಂದ ಅರ್ಜಿ ಹಣ ಪಡೆಯಲಾಯಿತು) | | 2,00,000 | 2,00,000 |
| 2 | ಪ್ರಥಮ ಹಕ್ಕಿನ ಶೇರುಗಳ ಅರ್ಜಿಯ ಖಾತೆಗೆ ಖರ್ಚು<br>ಪ್ರಥಮ ಹಕ್ಕಿನ ಶೇರು ಬಂಡವಾಳ ಖಾತೆಗೆ ಜಮಾ<br>(ಪ್ರಥಮ ಹಕ್ಕಿನ ಶೇರುಗಳ ಅರ್ಜಿಯ ಹಣವನ್ನು ಶೇರು ಬಂಡವಾಳ ಖಾತೆಗೆ ವರ್ಗಾಯಿಸಲಾಯಿತು.) | | 2,00,000 | 2,00,000 |
| 3 | ಪ್ರಥಮ ಹಕ್ಕಿನ ಶೇರುಗಳ ವಿತರಣೆ ಖಾತೆಗೆ ಖರ್ಚು<br>ಪ್ರಥಮ ಹಕ್ಕಿನ ಶೇರುಗಳ ಬಂಡವಾಳ ಖಾತೆಗೆ ಜಮಾ<br>(20,000 ಪ್ರಥಮ ಹಕ್ಕಿನ ಶೇರುಗಳನ್ನು ಹಂಚಿದ ನಂತರ ಪ್ರತಿ ಶೇರಿಗೆ ₹ 50ರಂತೆ ಹಂಚಿಕೆ ಹಣ ಸಂದಾಯ ಮಾಡಲು ಶೇರುದಾರರಿಗೆ ಕೇಳಿಕೊಂಡ ಬಗ್ಗೆ) | | 10,00,000 | 10,00,00 |

| | | | | |
|---|---|---|---|---|
| 4 | ಬ್ಯಾಂಕಿನ ಖಾತೆಗೆ ಖರ್ಚು<br>ಪ್ರಥಮ ಹಕ್ಕಿನ ಶೇರುಗಳ ವಿತರಣೆ ಖಾತೆಗೆ ಜಮಾ<br>(20,000 ಪ್ರಥಮ ಹಕ್ಕಿನ ಶೇರುಗಳ ಮೇಲೆ ಪ್ರತಿ ಶೇರಿಗೆ ₹ 50ರಂತೆ ಹಂಚಿಕೆ ಹಣ ಪಡೆಯಲಾಯಿತು.) | | 10,00,000 | 10,00,00 |
| 5 | ಪ್ರಥಮ ಹಕ್ಕಿನ ಶೇರುಗಳ ಪ್ರಥಮ ಹಾಗೂ ಅಂತಿಮ ಕರೆಯ ಖಾತೆಗೆ ಖರ್ಚು<br>ಪ್ರಥಮ ಹಕ್ಕಿನ ಶೇರುಗಳ ಬಂಡವಾಳ ಖಾತೆಗೆ ಜಮಾ<br>(20,000 ಪ್ರಥಮ ಹಕ್ಕಿನ ಶೇರುಗಳ ಮೇಲೆ ಶೇರಿಗೆ 40 ರೂಗಳಂತೆ ಶೇರುದಾರರಿಗೆ ಪ್ರಥಮ ಹಾಗೂ ಅಂತಿಮ ಕರೆಯ ಹಣ ಕಳಿಸಿಕೊಡಬೇಕೆಂದು ಕೇಳಿಕೊಳ್ಳಲಾಯಿತು.) | | 8,00,000 | 8,00,000 |
| 6 | ಬ್ಯಾಂಕಿನ ಖಾತೆಗೆ ಖರ್ಚು<br>ಪ್ರಥಮ ಹಕ್ಕಿನ ಶೇರುಗಳ ಪ್ರಥಮ ಹಾಗೂ ಅಂತಿಮ ಕರೆಯ ಖಾತೆಗೆ ಜಮಾ<br>(20,000 ಪ್ರಥಮ ಹಕ್ಕಿನ ಶೇರುಗಳ ಮೇಲೆ ಶೇರಿಗೆ 40 ರೂಗಳಂತೆ ಪ್ರಥಮ ಅಂತಿಮ ಕರೆಯ ಹಣ ಪಡೆಯಲಾಯಿತು.) | | 8,00,000 | 8,00,000 |

**ನಿದರ್ಶನ 3.**

ವಿಜಯಲಕ್ಷ್ಮಿ ಕಂಪನಿ ನಿಯಮಿತವು 10 ರೂಗಳ ಮುಖಬೆಲೆಯ 50,000 ಶೇರುಗಳಲ್ಲಿ ವಿಭಾಗಿಸಲ್ಪಟ್ಟ 5,00,000 ರೂಗಳ ಅಧಿಕೃತ ಬಂಡವಾಳವನ್ನು ಹೊಂದಿದೆ. ಅವುಗಳಲ್ಲಿ 20,000 ಶೇರುಗಳನ್ನು ಸಾರ್ವಜನಿಕರಿಗೆ ಕೊಳ್ಳಲು ಕಂಪನಿಯು ನೀಡಿತು. ಪ್ರತಿ ಶೇರಿಗೆ ₹ 2 ಅರ್ಜಿಯ ಜೊತೆಗೆ, ₹ 3 ವಿತರಣೆಯಾದ ಕೂಡಲೆ ಮತ್ತು ₹ 5 ಪ್ರಥಮ ಮತ್ತು ಅಂತಿಮ ಕರೆ ಮಾಡಿದಾಗ ಕೊಡಬೇಕೆಂದು ಪ್ರಕಟಿಸಿತು. ಎಲ್ಲಾ ಶೇರುಗಳು ಸಾರ್ವಜನಿಕರಿಂದ ಕೊಳ್ಳಲ್ಪಟ್ಟವು. ಮತ್ತು 1000/– ಶೇರುಗಳ ಮೇಲಿನ ಪ್ರಥಮ ಹಾಗೂ ಅಂತಿಮ ಕರೆಯ ಹಣ ಹೊರತುಪಡಿಸಿ ಉಳಿದೆಲ್ಲ ಹಣವು ಸಂದಾಯವಾಯಿತು.

ಈ ವ್ಯವಹಾರಗಳನ್ನು ಕಂಪನಿಯ ದಿನವಹಿಯಲ್ಲಿ ಬರೆಯಿರಿ.

**ನಿರೂಪಣೆ :**

**ವಿಜಯಲಕ್ಷ್ಮೀ ಕಂಪನಿ ನಿಯಮಿತ ದಿನವಹಿ**

| | ವಿವರಣೆ | ಪಾ.ಖಾ | ಖರ್ಚು | ಜಮಾ |
|---|---|---|---|---|
| 1 | ಬ್ಯಾಂಕಿನ ಖಾತೆಗೆ ಖರ್ಚು<br>ಶೇರುಗಳ ಅರ್ಜಿಯ ಖಾತೆಗೆ ಜಮಾ<br>(20,000 ಶೇರುಗಳ ಮೇಲೆ ಶೇರಿಗೆ ₹ 2ರಂತೆ ಅರ್ಜಿದಾರರಿಂದ ಅರ್ಜಿ ಹಣ ಪಡೆಯಲಾಯಿತು) | | 40,000 | 40,000 |
| 2 | ಶೇರುಗಳ ಅರ್ಜಿಯ ಖಾತೆಗೆ ಖರ್ಚು<br>ಶೇರು ಬಂಡವಾಳ ಖಾತೆಗೆ ಜಮಾ<br>(ಶೇರುಗಳ ಅರ್ಜಿಯ ಹಣವನ್ನು ಶೇರು ಬಂಡವಾಳ ಖಾತೆಗೆ ವರ್ಗಾಯಿಸಲಾಯಿತು.) | | 40,000 | 40,000 |

| | | | | |
|---|---|---|---|---|
| 3 | ಶೇರುಗಳ ವಿತರಣೆ ಖಾತೆಗೆ ಖರ್ಚು<br>ಶೇರುಗಳ ಬಂಡವಾಳ ಖಾತೆಗೆ ಜಮಾ<br>(20,000 ಶೇರುಗಳನ್ನು ಹಂಚಿದ ನಂತರ ಪ್ರತಿ ಶೇರಿಗೆ ₹ 3ರಂತೆ ಹಂಚಿಕೆ ಹಣ ಸಂದಾಯ ಮಾಡಲು ಶೇರುದಾರರಿಗೆ ಕೇಳಿಕೊಂಡ ಬಗೆ) | | 60,000 | 60,000 |
| 4 | ಬ್ಯಾಂಕಿನ ಖಾತೆಗೆ ಖರ್ಚು<br>ಶೇರುಗಳ ವಿತರಣೆ ಖಾತೆಗೆ ಜಮಾ<br>(20,000 ಶೇರುಗಳ ಮೇಲೆ ಪ್ರತಿ ಶೇರಿಗೆ ₹ 2ರಂತೆ ಹಂಚಿಕೆ ಹಣ ಪಡೆಯಲಾಯಿತು.) | | 60,000 | 60,000 |
| 5 | ಶೇರುಗಳ ಪ್ರಥಮ ಹಾಗೂ ಅಂತಿಮ ಕರೆಯ ಖಾತೆಗೆ ಖರ್ಚು<br>ಶೇರುಗಳ ಬಂಡವಾಳ ಖಾತೆಗೆ ಜಮಾ<br>(20,000ಶೇರುಗಳ ಮೇಲೆ ಶೇರಿಗೆ 5 ರೂಗಳಂತೆ ಶೇರುದಾರರಿಗೆ ಪ್ರಥಮ ಹಾಗೂ ಅಂತಿಮ ಕರೆಯ ಹಣ ಕಳಿಸಿಕೊಡಬೇಕೆಂದು ಕೇಳಿಕೊಳ್ಳಲಾಯಿತು.) | | 1,00,000 | 8,00,000 |
| 6 | ಬ್ಯಾಂಕಿನ ಖಾತೆಗೆ ಖರ್ಚು<br>ಶೇರುಗಳ ಪ್ರಥಮ ಹಾಗೂ ಅಂತಿಮ ಕರೆಯ ಖಾತೆಗೆ ಜಮಾ<br>(19,000 ಶೇರುಗಳ ಮೇಲೆ ಶೇರಿಗೆ 5 ರೂಗಳಂತೆ ಪ್ರಥಮ ಹಾಗೂ ಅಂತಿಮ ಕರೆಯ ಹಣ ಪಡೆಯಲಾಯಿತು.) | | 950000 | 950000 |

## ಅಧಿಕ ಬೆಲೆಗೆ ಶೇರುಗಳ ನೀಡಿಕೆ (Issue of Shares at Premium):

ಕಂಪನಿಯು ತನ್ನ ಶೇರುಗಳನ್ನು ಅದರ ಮುಖಬೆಲೆಗಿಂತ ಹೆಚ್ಚಿನ ಬೆಲೆಗೆ (ಪ್ರಿಮಿಯಂ) ನೀಡುವದಕ್ಕೆ ಶೇರುಗಳನ್ನು ಅಧಿಕ ಬೆಲೆಗೆ ನೀಡಿಕೆ ಎಂದು ಕರೆಯುತ್ತಾರೆ.

ಉದಾ : 10ರೂ ಮುಖಬೆಲೆಯ ಶೇರುಗಳನ್ನು ಸಾರ್ವಜನಿಕರಿಗೆ ₹ 12ಕ್ಕೆ ನೀಡುವುದು. ಶೇರುಗಳನ್ನು ನೀಡಿದ ಬೆಲೆ ಮತ್ತು ಮುಖಬೆಲೆಯ ವ್ಯತ್ಯಾಸಕ್ಕೆ ಅಧಿಕ ಬೆಲೆ (ಪ್ರಿಮಿಯಂ) ಎಂದು ಕರೆಯುತ್ತಾರೆ.

ಕಂಪನಿಯು ಪ್ರಿಮಿಯಂ ಹಣವನ್ನು ಅರ್ಜಿಯ ಜೊತೆಗೆ ಅಥವಾ ಹಂಚಿಕೆಯ ಸಮಯದಲ್ಲಿ ಅಥವಾ ಕರೆಗಳ ಸಮಯದಲ್ಲಿ ಸಂಗ್ರಹಿಸಬಹುದು. ಸಾಮಾನ್ಯವಾಗಿ ಇದನ್ನು ಹಂಚಿಕೆಯ ಸಮಯಲ್ಲಿ ಸಂಗ್ರಹಿಸಲಾಗುತ್ತದೆ.

1. ಪ್ರಿಮಿಯಂ ಹಣವನ್ನು ಅರ್ಜಿಯ ಜೊತೆಗೆ ಸಂಗ್ರಹಿಸಿದಾಗ ಮಾಡಬೇಕಾದ ದಾಖಲೆ.

| |
|---|
| ಶೇರುಗಳ ಅರ್ಜಿಯ ಖಾತೆಗೆ ಖರ್ಚು<br>ಶೇರು ಬಂಡವಾಳ ಖಾತೆ ಜಮಾ<br>ಪ್ರಿಮಿಯಂ ಖಾತೆಗೆ ಜಮಾ |

2. ಪ್ರಿಮಿಯಂ ಹಣವನ್ನು ಹಂಚಿಕೆಯ ಜೊತೆಗೆ ಸಂಗ್ರಹಿಸಿದಾಗ ಮಾಡಬೇಕಾದ ದಾಖಲೆ.

| |
|---|
| ಶೇರುಗಳ ಹಂಚಿಕೆಯ ಖಾತೆಗೆ ಖರ್ಚು<br>ಶೇರು ಬಂಡವಾಳ ಖಾತೆ ಜಮಾ<br>ಪ್ರಿಮಿಯಂ ಖಾತೆಗೆ ಜಮಾ |

3. ಪ್ರಿಮಿಯಂ ಹಣವನ್ನು ಕರೆಯ ಜೊತೆಗೆ ಸಂಗ್ರಹಿಸಿದಾಗ ಮಾಡಬೇಕಾದ ದಾಖಲೆ.

ಶೇರುಗಳ ಕರೆಯ ಖಾತೆಗೆ ಖರ್ಚು
    ಶೇರು ಬಂಡವಾಳ ಖಾತೆಗೆ ಜಮಾ
    ಪ್ರಿಮಿಯಂ ಖಾತೆಗೆ ಜಮಾ

## ನಿದರ್ಶನ 4.

ಕೃಷ್ಣ ಕಂಪನಿ ನಿಯಮಿತವು 100 ರೂಗಳ ಮುಖಬೆಲೆಯ 10,000 ಶೇರುಗಳನ್ನು ರೂ 10 ಪ್ರಿಮಿಯಂ ದರಕ್ಕೆ ಸಾರ್ವಜನಿಕರಿಗೆ ನೀಡಿತು. ಶೇರಿನ ಹಣವನ್ನು ಕೆಳಗೆ ತೋರಿಸಿದಂತೆ ಕೊಡಬೇಕೆಂದು ಪ್ರಕಟಿಸಿತು.

ಅರ್ಜಿಯ ಜೊತೆಗೆ ₹ 20

ವಿತರಣೆಯಾದ ನಂತರ ₹ 40 (ಪ್ರೀಮಿಯಂ ಹಣ ಕೂಡಿಸಿ)

ಪ್ರಥಮ ಹಾಗೂ ಅಂತಿಮ ಕರೆ ₹ 50

ಸಾರ್ವಜನಿಕರಿಂದ ಎಲ್ಲಾ ಶೇರುಗಳು ಕೊಳ್ಳಲ್ಪಟ್ಟವು ಹಾಗೂ ಎಲ್ಲಾ ಹಣ ಸಂದಾಯವಾಯಿತು.

ಈ ವ್ಯವಹಾರಗಳನ್ನು ಕಂಪನಿಯ ದಿನವಹಿಯಲ್ಲಿ ಬರೆಯಿರಿ.

**ನಿರೂಪಣೆ :**

### ಕೃಷ್ಣ ಕಂಪನಿ ನಿಯಮಿತ ದಿನವಹಿ

| | ವಿವರಣೆ | ಪಾ.ಖಾ | ಖರ್ಚು | ಜಮಾ |
|---|---|---|---|---|
| 1 | ಬ್ಯಾಂಕಿನ ಖಾತೆಗೆ ಖರ್ಚು<br>ಶೇರುಗಳ ಅರ್ಜಿಯ ಖಾತೆಗೆ ಜಮಾ<br>(10,000 ಶೇರುಗಳ ಮೇಲೆ ಶೇರಿಗೆ ₹ 20ರಂತೆ ಅರ್ಜಿದಾರರಿಂದ ಅರ್ಜಿ ಹಣ ಪಡೆಯಲಾಯಿತು) | | 2,00,000 | 2,00,000 |
| 2 | ಶೇರುಗಳ ಅರ್ಜಿಯ ಖಾತೆಗೆ ಖರ್ಚು<br>ಶೇರು ಬಂಡವಾಳ ಖಾತೆಗೆ ಜಮಾ<br>(ಶೇರುಗಳ ಅರ್ಜಿಯ ಹಣವನ್ನು ಶೇರು ಬಂಡವಾಳ ಖಾತೆಗೆ ವರ್ಗಾಹಿಸಲಾಯಿತು.) | | 2,00,000 | 2,00,000 |
| 3 | ಶೇರುಗಳ ವಿತರಣೆ ಖಾತೆಗೆ ಖರ್ಚು<br>ಶೇರುಗಳ ಬಂಡವಾಳ ಖಾತೆಗೆ ಜಮಾ<br>ಶೇರು ಪ್ರೀಮಿಯಂ ಖಾತೆಗೆ ಜಮಾ<br>(10,000 ಶೇರುಗಳನ್ನು ಹಂಚಿದ ನಂತರ ಪ್ರತಿ ಶೇರಿಗೆ ₹ 10 ಪ್ರಿಮಿಯಂ ಸೇರಿಸಿ ₹ 40 ಗಳನ್ನು ಕಳಿಸಿಕೊಡಲು ಶೇರುದಾರರಿಗೆ ಕೇಳಿಕೊಡಲಾಯಿತು.) | | 4,00,000 | 3,00,000<br>1,00,000 |
| 4 | ಬ್ಯಾಂಕಿನ ಖಾತೆಗೆ ಖರ್ಚು<br>ಶೇರುಗಳ ವಿತರಣೆ ಖಾತೆಗೆ ಜಮಾ<br>(10,000 ಶೇರುಗಳ ಮೇಲೆ ಸೇರಿಗೆ ₹ 40ರಂತೆ ಹಂಚಿಕೆ ಹಣ ಪಡೆಯಲಾಯಿತು) | | 4,00,000 | 4,00,000 |

| | | | | |
|---|---|---|---|---|
| 5 | ಶೇರುಗಳ ಪ್ರಥಮ ಹಾಗೂ ಅಂತಿಮ ಕರೆಯ ಖಾತೆಗೆ ಖರ್ಚು<br>ಶೇರುಗಳ ಬಂಡವಾಳ ಖಾತೆಗೆ ಜಮಾ<br>(20,000ಶೇರುಗಳ ಮೇಲೆ ಶೇರಿಗೆ 5 ರೂಗಳಂತೆ ಶೇರುದಾರರಿಗೆ ಪ್ರಥಮ ಹಾಗೂ ಅಂತಿಮ ಕರೆ ಮಾಡಿದ್ದು) | | 5,00,000 | 5,00,000 |
| 6 | ಬ್ಯಾಂಕಿನ ಖಾತೆಗೆ ಖರ್ಚು<br>ಶೇರುಗಳ ಪ್ರಥಮ ಹಾಗೂ ಅಂತಿಮ ಕರೆಯ ಖಾತೆಗೆ ಜಮಾ<br>(10,000 ಶೇರುಗಳ ಮೇಲೆ ಶೇರಿಗೆ 50 ರೂಗಳಂತೆ ಪ್ರಥಮ ಹಾಗೂ ಅಂತಿಮ ಕರೆಯ ಹಣ ಪಡೆಯಲಾಯಿತು.) | | 5,00,000 | 5,00,000 |

### ನಿದರ್ಶನ 5.

ದಾವಣಗೇರೆ ಗಿರಣಿ ನಿಯಮಿತವು 10 ರೂಗಳ ಮುಖಬೆಲೆಯ 5,000 ಶೇರುಗಳನ್ನು ₹ 5 ಪ್ರಿಮಿಯಂ ದರಕ್ಕೆ ಸಾರ್ವಜನಿಕರಿಗೆ ನೀಡಿತು. ಶೇರಿನ ಹಣವನ್ನು ಕೆಳಗೆ ತೋರಿಸಿದಂತೆ ಕೊಡಬೇಕೆಂದು ಪ್ರಕಟಿಸಿತು.

ಅರ್ಜಿಯ ಜೊತೆಗೆ ₹ 2

ವಿತರಣೆಯಾದ ನಂತರ ₹ 5 (ಪ್ರೀಮಿಯಂ ಹಣ ಕೂಡಿಸಿ)

ಪ್ರಥಮ ಹಾಗೂ ಅಂತಿಮ ಕರೆ ₹ 5

ಸಾರ್ವಜನಿಕರಿಂದ ಎಲ್ಲಾ ಶೇರುಗಳು ಕೊಳ್ಳಲ್ಪಟ್ಟವು. ಮತ್ತು 1000 ಶೇರುಗಳ ಮೇಲಿನ ಪ್ರಥಮ ಹಾಗೂ ಅಂತಿಮ ಕರೆಯ ಹಣ ಹೊರತು ಪಡಿಸಿ ಉಳಿದೆಲ್ಲ ಹಣವು ಸಂದಾಯವಾಯಿತು.

ಈ ವ್ಯವಹಾರಗಳನ್ನು ಕಂಪನಿಯ ದಿನವಹಿಯಲ್ಲಿ ಬರೆಯಿರಿ.

**ನಿರೂಪಣೆ :**

**ದಾವಣಗೇರೆ ಗಿರಣಿ ನಿಯಮಿತ ದಿನವಹಿ**

| | ವಿವರಣೆ | ಪಾ.ಖಾ | ಖರ್ಚು | ಜಮಾ |
|---|---|---|---|---|
| 1 | ಬ್ಯಾಂಕಿನ ಖಾತೆಗೆ ಖರ್ಚು<br>ಶೇರುಗಳ ಅರ್ಜಿಯ ಖಾತೆಗೆ ಜಮಾ<br>(5,000 ಶೇರುಗಳ ಮೇಲೆ ಶೇರಿಗೆ ₹ 2ರಂತೆ ಅರ್ಜಿದಾರರಿಂದ ಅರ್ಜಿ ಹಣ ಪಡೆಯಲಾಯಿತು) | | 10,000 | 10,000 |
| 2 | ಶೇರುಗಳ ಅರ್ಜಿಯ ಖಾತೆಗೆ ಖರ್ಚು<br>ಶೇರು ಬಂಡವಾಳ ಖಾತೆಗೆ ಜಮಾ<br>(ಶೇರುಗಳ ಅರ್ಜಿಯ ಹಣವನ್ನು ಶೇರು ಬಂಡವಾಳ ಖಾತೆಗೆ ವರ್ಗಾಯಿಸಲಾಯಿತು.) | | 10,000 | 10,000 |
| 3 | ಶೇರುಗಳ ವಿತರಣೆ ಖಾತೆಗೆ ಖರ್ಚು<br>ಶೇರುಗಳ ಬಂಡವಾಳ ಖಾತೆಗೆ ಜಮಾ<br>ಶೇರು ಪ್ರೀಮಿಯಂ ಖಾತೆಗೆ ಜಮಾ | | 25,000 | 15,000<br>10,000 |
| | (5,000 ಶೇರುಗಳ ಮೇಲೆ ಶೇರಿಗೆ ₹ 2 ಪ್ರಿಮಿಯಂ ಸೇರಿಸಿ ಪ್ರತಿ ಶೇರಿಗೆ ₹ 5 ಹಂಚಿಕೆ ಹಣ ಕಳಿಸಿಕೊಡಲು ಶೇರುದಾರಿಗೆ ಕೇಳಿಕೊಂಡ ಬಗೆ) | | | |

| | | | | |
|---|---|---|---|---|
| 4 | ಬ್ಯಾಂಕಿನ ಖಾತೆಗೆ ಖರ್ಚು<br>ಶೇರುಗಳ ವಿತರಣೆ ಖಾತೆಗೆ ಜಮಾ<br>( ಶೇರುಗಳ ಹಂಚಿಕೆ ಹಣ ಪಡೆದ ಬಗೆ) | | 25,000 | 25,000 |
| 5 | ಶೇರುಗಳ ಪ್ರಥಮ ಹಾಗೂ ಅಂತಿಮ ಕರೆಯ ಖಾತೆಗೆ ಖರ್ಚು<br>ಶೇರುಗಳ ಬಂಡವಾಳ ಖಾತೆಗೆ ಜಮಾ<br>(20,000 ಶೇರುಗಳ ಮೇಲೆ ಪ್ರತಿ ಶೇರಿಗೆ 5 ರೂಗಳಂತೆ ಪ್ರಥಮ ಹಾಗೂ ಅಂತಿಮ ಕರೆ ಮಾಡಿದ್ದು) | | 25,000 | 25,000 |
| 6 | ಬ್ಯಾಂಕಿನ ಖಾತೆಗೆ ಖರ್ಚು<br>ಶೇರುಗಳ ಪ್ರಥಮ ಹಾಗೂ ಅಂತಿಮ ಕರೆಯ ಖಾತೆಗೆ ಜಮಾ<br>(5,000 ಶೇರುಗಳ ಮೇಲೆ ಶೇರಿಗೆ 5 ರೂಗಳಂತೆ ಪ್ರಥಮ ಹಾಗೂ ಅಂತಿಮ ಕರೆಯ ಹಣ ಪಡೆಯಲಾಯಿತು. | | 20,000 | 20,000 |

## ಸೋಡಿಗೆ ಶೇರುಗಳ ನೀಡಿಕೆ (Issue of shares at a discount ):

ಕಂಪನಿಯು ತನ್ನ ಶೇರುಗಳನ್ನು ಅದರ ಮುಖಬೆಲೆಗಿಂತ ಕಡಿಮೆ ಬೆಲೆಗೆ ಸಾರ್ವಜನಿಕರಿಗೆ ನೀಡುವುದಕ್ಕೆ, ಸೋಡಿಗೆ ಶೇರುಗಳ ನೀಡಿಕೆ ಎಂದು ಕರೆಯುತ್ತಾರೆ.

ಉದಾ: ರೂ 10 ಮುಖಬೆಲೆಯ ಶೇರುಗಳನ್ನು ರೂ 8ಕ್ಕೆ ಸಾರ್ವಜನಿಕರಿಗೆ ನೀಡುವುದು. ಶೇರುಗಳ ಮುಖಬೆಲೆ ಹಾಗೂ ಶೇರುಗಳ ನೀಡಿದ ಬೆಲೆಯ ವ್ಯತ್ಯಾಸವೇ ಸೋಡಿಯಾಗಿದೆ.

ಶೇರುಗಳ ಮೇಲೆ ನೀಡಿದ ಸೋಡಿಯನ್ನು ಸಾಮಾನ್ಯವಾಗಿ ಶೇರುಗಳ ಹಂಚಿಕೆಯ ಸಮಯದಲ್ಲಿ ದಾಖಲಿಸಲಾಗುತ್ತದೆ.

ಸೋಡಿಗೆ ಶೇರುಗಳನ್ನು ನೀಡಿದಾಗ ಈ ಕೆಳಗಿನಂತೆ ದಾಖಲೆ ಮಾಡಬೇಕಾಗುತ್ತದೆ.

| |
|---|
| ಶೇರುಗಳ ಹಂಚಿಕೆ ಖಾತೆಗೆ ಖರ್ಚು<br>ಶೇರುಗಳ ಸೋಡಿ ಖಾತೆಗೆ ಖರ್ಚು<br>ಶೇರು ಬಂಡವಾಳ ಖಾತೆಗೆ ಜಮಾ |

### ನಿದರ್ಶನ 6.

ಈಸ್ಟರ್ನ್ ಕಂಪನಿ ನಿಯಮಿತವು 100 ರೂಗಳ ಮುಖಬೆಲೆಯ 20,000 ಸಾಮಾನ್ಯ ಶೇರುಗಳನ್ನು ಸಾರ್ವಜನಿಕರಿಗೆ ₹ 5 ಸೋಡಿಗೆ ನೀಡಿತು. ಶೇರಿಗೆ 20 ರೂಗಳನ್ನು ಅರ್ಜಿಯ ಜೊತೆಗೆ, 35 ರೂಗಳನ್ನು ವಿತರಣೆ ಆದ ನಂತರ ಮತ್ತು 40ರೂಗಳನ್ನು ಪ್ರಥಮ ಹಾಗೂ ಕೊನೆಯ ಕರೆಯ ಹಣವೆಂದು ಕೊಡಬೇಕೆಂದು ಪ್ರಕಟಿಸಿತು.

ಸಾರ್ವಜನಿಕರಿಂದ ಎಲ್ಲಾ ಶೇರುಗಳು ಕೊಳಲ್ಪಟ್ಟವು. ಮತ್ತು 2000 ಶೇರುಗಳ ಮೇಲಿನ ಪ್ರಥಮ ಹಾಗೂ ಅಂತಿಮ ಕರೆಯ ಹಣ ಹೊರತು ಪಡಿಸಿ ಉಳಿದೆಲ್ಲ ಹಣವು ಸಂದಾಯವಾಯಿತು.

ಈ ವ್ಯವಹಾರಗಳನ್ನು ಕಂಪನಿಯ ದಿನವಹಿಯಲ್ಲಿ ಬರೆಯಿರಿ.

**ನಿರೂಪಣೆ :**

ಈಸ್ಟರ್ನ್ ಕಂಪನಿ ನಿಯಮಿತ ದಿನವಹಿ

| | ವಿವರಣೆ | ಪಾ.ಖಾ | ಖರ್ಚು | ಜಮಾ |
|---|---|---|---|---|
| 1 | ಬ್ಯಾಂಕಿನ ಖಾತೆಗೆ ಖರ್ಚು<br>ಸಾಮಾನ್ಯ ಶೇರುಗಳ ಅರ್ಜಿಯ ಖಾತೆಗೆ ಜಮಾ<br>(20,000 ಶೇರುಗಳ ಮೇಲೆ ಶೇರಿಗೆ ₹ 20ರಂತೆ ಅರ್ಜಿದಾರರಿಂದ ಅರ್ಜಿ ಹಣ ಪಡೆಯಲಾಯಿತು) | | 4,00,000 | 4,00,000 |
| 2 | ಸಾಮಾನ್ಯ ಶೇರುಗಳ ಅರ್ಜಿಯ ಖಾತೆಗೆ ಖರ್ಚು<br>ಸಾಮಾನ್ಯ ಶೇರು ಬಂಡವಾಳ ಖಾತೆಗೆ ಜಮಾ<br>(ಸಾಮಾನ್ಯ ಶೇರುಗಳ ಅರ್ಜಿಯ ಹಣವನ್ನು ಶೇರು ಬಂಡವಾಳ ಖಾತೆಗೆ ವರ್ಗಾಹಿಸಲಾಯಿತು.) | | 4,00,000 | 4,00,000 |
| 3 | ಸಾಮಾನ್ಯ ಶೇರುಗಳ ವಿತರಣೆ ಖಾತೆಗೆ ಖರ್ಚು<br>ಶೇರುಗಳ ಸೋಡಿಯ ಖಾತೆಗೆ ಖರ್ಚು<br>ಸಾಮಾನ್ಯ ಶೇರುಗಳ ಬಂಡವಾಳ ಖಾತೆಗೆ ಜಮಾ<br>(20,000 ಸಾಮಾನ್ಯ ಶೇರುಗಳನ್ನು ಹಂಚಿದ ನಂತರ ಪ್ರತಿ ಶೇರಿಗೆ ₹ 35ರಂತೆ ಹಂಚಿಕೆ ಹಣ ಕಳಿಸಿಕೊಡಲು ಶೇರುದಾರರಿಗೆ ಕೇಳಿಕೊಂಡ ಬಗ್ಗೆ) | | 7,00,000<br>1,00,000 | 8,00,000 |
| 4 | ಬ್ಯಾಂಕಿನ ಖಾತೆಗೆ ಖರ್ಚು<br>ಸಾಮಾನ್ಯ ಶೇರುಗಳ ವಿತರಣೆ ಖಾತೆಗೆ ಜಮಾ<br>(20,000 ಸಾಮಾನ್ಯ ಶೇರುಗಳ ಮೇಲೆ ಪ್ರತಿ ಶೇರಿಗೆ ₹ 35ರಂತೆ ಹಂಚಿಕೆ ಹಣ ಪಡೆಯಲಾಯಿತು.) | | 7,00,000 | 7,00,000 |
| 5 | ಸಾಮಾನ್ಯ ಶೇರುಗಳ ಪ್ರಥಮ ಹಾಗೂ ಅಂತಿಮ ಕರೆಯ ಖಾತೆಗೆ ಖರ್ಚು<br>ಸಾಮಾನ್ಯ ಶೇರುಗಳ ಬಂಡವಾಳ ಖಾತೆಗೆ ಜಮಾ<br>(20,000 ಸಾಮಾನ್ಯ ಶೇರುಗಳ ಮೇಲೆ ಶೇರಿಗೆ 40 ರೂಗಳಂತೆ ಶೇರುದಾರರಿಗೆ ಪ್ರಥಮ ಹಾಗೂ ಅಂತಿಮ ಕರೆಯ ಹಣ ಕಳಿಸಿಕೊಡಬೇಕೆಂದು ಕೇಳಿಕೊಳ್ಳಲಾಯಿತು.) | | 8,00,000 | 8,00,000 |
| 6 | ಬ್ಯಾಂಕಿನ ಖಾತೆಗೆ ಖರ್ಚು<br>ಸಾಮಾನ್ಯ ಶೇರುಗಳ ಪ್ರಥಮ ಹಾಗೂ ಅಂತಿಮ ಕರೆಯ ಖಾತೆಗೆ ಜಮಾ<br>(18,000 ಸಾಮಾನ್ಯ ಶೇರುಗಳ ಮೇಲೆ ಶೇರಿಗೆ 40 ರೂಗಳಂತೆ ಪ್ರಥಮ ಹಾಗೂ ಅಂತಿಮ ಕರೆಯ ಹಣ ಪಡೆಯಲಾಯಿತು.) | | 7,20,000 | 7,20,000 |

## ನಿದರ್ಶನ 7.

ಆದರ್ಶ ಕಂಟ್ರೋಲ್ ಡಿವೈಸಸ್ ನಿಯಮಿತ ಕಂಪನಿಯು ₹ 10 ಮುಖಬೆಲೆಯ 10,000 ಶೇರುಗಳನ್ನು 10% ಸೋಡಿಗೆ ಸಾರ್ವಜನಿಕರಿಗೆ ಕೊಳ್ಳಲು ಆಹ್ವಾನಿಸಿತು. ಸೇರಿಗೆ 4 ರೂಗಳನ್ನು ಅರ್ಜಿಯ ಜೊತೆಗೆ, 3 ರೂಗಳನ್ನು ಹಂಚಿಕೆಯಾದ ನಂತರ ಹಾಗೂ 2 ರೂಗಳನ್ನು ಪ್ರಥಮ ಹಾಗೂ ಅಂತಿಮ ಕರೆ ಹಣವೆಂದು ಕೊಡಬೇಕೆಂದು ಪ್ರಕಟಿಸಿತು. ಎಲ್ಲಾ ಶೇರುಗಳು ಸಾರ್ವಜನಿಕರಿಂದ ಕೊಳ್ಳಲ್ಪಟ್ಟವು. ಮತ್ತು ಎಲ್ಲಾ ಹಣವು ಸಂಗ್ರಹಿಸಲ್ಪಟ್ಟಿತ್ತು.

ಮೇಲಿನ ವ್ಯವಹಾರಗಳನ್ನು ಕಂಪನಿಯ ದಿನವಹಿಯಲ್ಲಿ ಬರೆಯಿರಿ.

**ನಿರೂಪಣೆ :**

**ಆದರ್ಶ ಕಂಟ್ರೋಲ್ ಡಿವೈಸಸ್ ನಿಯಮಿತ ದಿನವಹಿ**

| | ವಿವರಣೆ | ಪಾ.ಖಾ | ಖರ್ಚು | ಜಮಾ |
|---|---|---|---|---|
| 1 | ಬ್ಯಾಂಕಿನ ಖಾತೆಗೆ ಖರ್ಚು<br>ಶೇರುಗಳ ಅರ್ಜಿಯ ಖಾತೆಗೆ ಜಮಾ<br>(10,000 ಶೇರುಗಳ ಮೇಲೆ ಶೇರಿಗೆ ₹ 4ರಂತೆ ಅರ್ಜಿದಾರರಿಂದ ಅರ್ಜಿ ಹಣ ಪಡೆಯಲಾಯಿತು) | | 40,000 | 40,000 |
| 2 | ಶೇರುಗಳ ಅರ್ಜಿಯ ಖಾತೆಗೆ ಖರ್ಚು<br>ಶೇರು ಬಂಡವಾಳ ಖಾತೆಗೆ ಜಮಾ<br>(ಶೇರುಗಳ ಅರ್ಜಿಯ ಹಣವನ್ನು ಶೇರು ಬಂಡವಾಳ ಖಾತೆಗೆ ವರ್ಗಾಹಿಸಲಾಯಿತು.) | | 40,000 | 40,000 |
| 3 | ಶೇರುಗಳ ವಿತರಣೆ ಖಾತೆಗೆ ಖರ್ಚು<br>ಶೇರುಗಳ ಸೋಡಿಯ ಖಾತೆಗೆ ಖರ್ಚು<br>ಶೇರುಗಳ ಬಂಡವಾಳ ಖಾತೆಗೆ ಜಮಾ<br>(10,000 ಶೇರುಗಳನ್ನು ಹಂಚಿದ ನಂತರ ಪ್ರತಿ ಶೇರಿಗೆ ₹ 3ಗಳಂತೆ ಹಂಚಿಕೆ ಹಣ ಕಳಿಸಿಕೊಡಲು ಶೇರುದಾರರಿಗೆ ಕೇಳಿಕೊಂಡ ಬಗ್ಗೆ) | | 30,000<br>10,000 | 40,000 |
| 4 | ಬ್ಯಾಂಕಿನ ಖಾತೆಗೆ ಖರ್ಚು<br>ಶೇರುಗಳ ವಿತರಣೆ ಖಾತೆಗೆ ಜಮಾ<br>(10,000 ಸಾಮಾನ್ಯ ಶೇರುಗಳ ಮೇಲೆ ಪ್ರತಿ ಶೇರಿಗೆ ₹ 3ರಂತೆ ಹಂಚಿಕೆ ಹಣ ಪಡೆಯಲಾಯಿತು.) | | 30,000 | 30,000 |
| 5 | ಶೇರುಗಳ ಪ್ರಥಮ ಹಾಗೂ ಅಂತಿಮ ಕರೆಯ ಖಾತೆಗೆ ಖರ್ಚು<br>ಶೇರುಗಳ ಬಂಡವಾಳ ಖಾತೆಗೆ ಜಮಾ<br>(10,000 ಶೇರುಗಳ ಮೇಲೆ ಶೇರಿಗೆ 2 ರೂಗಳಂತೆ ಶೇರುದಾರರಿಗೆ ಪ್ರಥಮ ಹಾಗೂ ಅಂತಿಮ ಕರೆಯ ಹಣ ಕಳಿಸಿಕೊಡಬೇಕೆಂದು ಕೇಳಿಕೊಳ್ಳಲಾಯಿತು.) | | 20,000 | 20,000 |
| 6 | ಬ್ಯಾಂಕಿನ ಖಾತೆಗೆ ಖರ್ಚು<br>ಶೇರುಗಳ ಪ್ರಥಮ ಹಾಗೂ ಅಂತಿಮ ಕರೆಯ ಖಾತೆಗೆ ಜಮಾ<br>(ಪ್ರಥಮ ಹಾಗೂ ಅಂತಿಮ ಕರೆಯ ಹಣ ಪಡೆಯಲಾಯಿತು.) | | 20,000 | 20,000 |

## ನಿದರ್ಶನ 8.

ರಾಕೇಶ್ ಮೋಟಾರ್ಸ್ ನಿಯಮಿತ ಕಂಪನಿಯ ಬಂಡವಾಳವು 5,00,000 ₹ಗಳಷ್ಟು ಇದೆ. ಅದನ್ನು 10 ₹ ಮುಖಬೆಲೆಯ 50,000 ಶೇರುಗಳಲ್ಲಿ ವಿಭಜಿಸಲಾಗಿದೆ. ಅವುಗಳಲ್ಲಿ 22,000 ಶೇರುಗಳನ್ನು ಸಾರ್ವಜನಿಕರಿಗೆ ಕೊಳ್ಳಲ್ಲು ನೀಡಲಾಗಿತು. ಮತ್ತು ಪ್ರತಿ ಶೇರಿಗೆ ಕೆಳಗೆ ತೋರಿಸಿದಂತೆ ಹಣ ಕಳಿಸಿಕೊಡಬೇಕೆಂದು ಪ್ರಕಟಿಸಲಾಗಿತು.

₹ 2 ಅರ್ಜಿಯ ಜೊತೆಗೆ

₹ 3 ಹಂಚಿಕೆಯ ಸಮಯದಲ್ಲಿ

₹ 3 ಪ್ರಥಮ ಕರೆ ಹಾಗೂ

₹ 2 ಅಂತಿಮ ಕರೆ

ಸಾರ್ವಜನಿಕರಿಂದ 20,000 ಶೇರುಗಳು ಕೊಳ್ಳಲ್ಪಟ್ಟವು. ಹಾಗೂ ಪ್ರಥಮ ಕರೆಯ 500 ಶೇರುಗಳ ಮತ್ತು ಕೊನೆಯ ಕರೆಯ 1,000 ಶೇರುಗಳ ಹಣವನ್ನು ಹೊರತುಪಡಿಸಿ ಉಳಿದೆಲ್ಲ ಹಣವು ಸಂದಾಯವಾಯಿತು. ಈ ವ್ಯವಹಾರಗಳನ್ನು ಕಂಪನಿಯ ದಿನವಹಿಯಲ್ಲಿ ದಾಖಲಿಸಿ.

### ನಿರೂಪಣೆ :

**ರಾಕೇಶ್ ಮೋಟಾರ್ಸ್ ನಿಯಮಿತ ದಿನವಹಿ**

| | ವಿವರಣೆ | ಪಾ.ಖಾ | ಖರ್ಚು | ಜಮಾ |
|---|---|---|---|---|
| 1 | ಬ್ಯಾಂಕಿನ ಖಾತೆಗೆ ಖರ್ಚು<br>ಶೇರುಗಳ ಅರ್ಜಿಯ ಖಾತೆಗೆ ಜಮಾ<br>(20,000 ಶೇರುಗಳ ಮೇಲೆ ಶೇರಿಗೆ ₹ 2ರಂತೆ ಅರ್ಜಿದಾರರಿಂದ ಅರ್ಜಿ ಹಣ ಪಡೆಯಲಾಯಿತು) | | 40,000 | 40,000 |
| 2 | ಶೇರುಗಳ ಅರ್ಜಿಯ ಖಾತೆಗೆ ಖರ್ಚು<br>ಶೇರು ಬಂಡವಾಳ ಖಾತೆಗೆ ಜಮಾ<br>(ಶೇರುಗಳ ಅರ್ಜಿಯ ಹಣವನ್ನು ಶೇರು ಬಂಡವಾಳ ಖಾತೆಗೆ ವರ್ಗಾಹಿಸಲಾಯಿತು.) | | 40,000 | 40,000 |
| 3 | ಶೇರುಗಳ ವಿತರಣೆ ಖಾತೆಗೆ ಖರ್ಚು<br>ಶೇರುಗಳ ಬಂಡವಾಳ ಖಾತೆಗೆ ಜಮಾ<br>(20,000 ಶೇರುಗಳನ್ನು ಹಂಚಿದ ನಂತರ ಪ್ರತಿ ಶೇರಿಗೆ ₹ 3ರಂತೆ ಹಂಚಿಕೆ ಹಣ ಕಳಿಸಿಕೊಡಲು ಶೇರುದಾರರಿಗೆ ಕೇಳಿಕೊಂಡ ಬಗ್ಗೆ) | | 60,000 | 60,000 |
| 4 | ಬ್ಯಾಂಕಿನ ಖಾತೆಗೆ ಖರ್ಚು<br>ಶೇರುಗಳ ವಿತರಣೆ ಖಾತೆಗೆ ಜಮಾ<br>(20,000 ಶೇರುಗಳ ಮೇಲೆ ಪ್ರತಿ ಶೇರಿಗೆ ₹ 3ರಂತೆ ಹಂಚಿಕೆ ಹಣ ಪಡೆಯಲಾಯಿತು.) | | 60,000 | 60,000 |

| | | | | |
|---|---|---|---|---|
| 5 | ಶೇರುಗಳ ಪ್ರಥಮ ಕರೆಯ ಖಾತೆಗೆ ಖರ್ಚು<br>ಶೇರುಗಳ ಬಂಡವಾಳ ಖಾತೆಗೆ ಜಮಾ<br>(20,000 ಶೇರುಗಳ ಮೇಲೆ ಶೇರಿಗೆ 3 ರೂಗಳಂತೆ ಶೇರುದಾರರಿಗೆ ಪ್ರಥಮ ಕರೆಯ ಹಣ ಕಳಿಸಿಕೊಡಬೇಕೆಂದು ಕೇಳಿಕೊಳ್ಳಲಾಯಿತು.) | | 60,000 | 60,000 |
| 6 | ಬ್ಯಾಂಕಿನ ಖಾತೆಗೆ ಖರ್ಚು<br>ಶೇರುಗಳ ಪ್ರಥಮ ಕರೆಯ ಖಾತೆಗೆ ಜಮಾ<br>(19,500 ಶೇರುಗಳ ಮೇಲೆ ಶೇರಿಗೆ 3 ರೂಗಳಂತೆ ಪ್ರಥಮ ಕರೆಯ ಹಣ ಪಡೆಯಲಾಯಿತು.) | | 58,500 | 58,500 |
| 7 | ಶೇರುಗಳ ಅಂತಿಮ ಕರೆಯ ಖಾತೆಗೆ ಖರ್ಚು<br>ಶೇರುಗಳ ಬಂಡವಾಳ ಖಾತೆಗೆ ಜಮಾ<br>(20,000 ಶೇರುಗಳ ಮೇಲೆ ಶೇರಿಗೆ 2 ರೂಗಳಂತೆ ಶೇರುದಾರರಿಗೆ ಅಂತಿಮ ಕರೆಯ ಹಣ ಕಳಿಸಿಕೊಡಬೇಕೆಂದು ಕೇಳಿಕೊಳ್ಳಲಾಯಿತು.) | | 40,000 | 40,000 |
| 8 | ಬ್ಯಾಂಕಿನ ಖಾತೆಗೆ ಖರ್ಚು<br>ಶೇರುಗಳ ಅಂತಿಮ ಕರೆಯ ಖಾತೆಗೆ ಜಮಾ<br>(19,000 ಶೇರುಗಳ ಮೇಲೆ ಶೇರಿಗೆ 2 ರೂಗಳಂತೆ ಅಂತಿಮ ಕರೆಯ ಹಣ ಪಡೆಯಲಾಯಿತು.) | | 38,000 | 38,000 |

## ನಿದರ್ಶನ 9.

**XYZ** ಕಂಪನಿಯು 3,00,000 ರೂ ಬಂಡವಾಳದೊಂದಿಗೆ ನೋಂದಾಯಿಸಲ್ಪಟ್ಟಿದೆ ಇದನ್ನು 10 ರೂ ಮೌಲ್ಯದ 30,000 ಶೇರುಗಳಲ್ಲಿ ವಿಂಗಡಿಸಲಾಗಿದೆ. ಇವುಗಳಲ್ಲಿ 17,000 ಶೇರುಗಳನ್ನು ಸಾರ್ವಜನಿಕರಿಗೆ ನೀಡಲಾಯಿತು.

ಪ್ರತಿ ಶೇರಿಗೆ ಕೆಳಗೆ ತೋರಿಸಿದಂತೆ ಹಣ ಕಳಿಸಿಕೊಡಬೇಕೆಂದು ಪ್ರಕಟಿಸಲಾಗಿತು.

₹ 1 ಅರ್ಜಿಯ ಜೊತೆಗೆ

₹ 2 ಹಂಚಿಕೆಯ ಸಮಯದಲ್ಲಿ

₹ 3 ಪ್ರಥಮ ಕರೆ ಹಾಗೂ

₹ 4 ಅಂತಿಮ ಕರೆ

ಸಾರ್ವಜನಿಕರಿಂದ 16,000 ಶೇರುಗಳು ಕೊಳ್ಳಲ್ಪಟ್ಟವು. ಹಾಗೂ ಪ್ರಥಮ ಕರೆಯ 300 ಶೇರುಗಳ ಮತ್ತು ಕೊನೆಯ ಕರೆಯ 800 ಶೇರುಗಳ ಹಣ ಬಾಕಿ ನಿಂತಿತು. ಉಳಿದೆಲ್ಲ ಹಣವು ಸಂದಾಯವಾಯಿತು. ಈ ವ್ಯವಹಾರಗಳನ್ನು ಕಂಪನಿಯ ದಿನವಹಿಯಲ್ಲಿ ದಾಖಲಿಸಿ.

**ನಿರೂಪಣೆ :**

## XYZ ಕಂಪನಿ ನಿಯಮಿತ ದಿನವಹಿ

| | ವಿವರಣೆ | ಪಾ.ಖಾ | ಖರ್ಚು | ಜಮಾ |
|---|---|---|---|---|
| 1 | ಬ್ಯಾಂಕಿನ ಖಾತೆಗೆ ಖರ್ಚು<br>ಶೇರುಗಳ ಅರ್ಜಿಯ ಖಾತೆಗೆ ಜಮಾ<br>(16,000 ಶೇರುಗಳ ಮೇಲೆ ಶೇರಿಗೆ ₹ 1ರಂತೆ ಅರ್ಜಿದಾರರಿಂದ ಅರ್ಜಿ ಹಣ ಪಡೆಯಲಾಯಿತು) | | 16,000 | 16,000 |
| 2 | ಶೇರುಗಳ ಅರ್ಜಿಯ ಖಾತೆಗೆ ಖರ್ಚು<br>ಶೇರು ಬಂಡವಾಳ ಖಾತೆಗೆ ಜಮಾ<br>(ಶೇರುಗಳ ಅರ್ಜಿಯ ಹಣವನ್ನು ಶೇರು ಬಂಡವಾಳ ಖಾತೆಗೆ ವರ್ಗಾಹಿಸಲಾಯಿತು.) | | 16,000 | 16,000 |
| 3 | ಶೇರುಗಳ ವಿತರಣೆ ಖಾತೆಗೆ ಖರ್ಚು<br>ಶೇರುಗಳ ಬಂಡವಾಳ ಖಾತೆಗೆ ಜಮಾ<br>(16,000 ಶೇರುಗಳನ್ನು ಹಂಚಿದ ನಂತರ ಪ್ರತಿ ಶೇರಿಗೆ ₹ 2ರಂತೆ ಹಂಚಿಕೆ ಹಣ ಕಳಿಸಿಕೊಡಲು ಶೇರುದಾರರಿಗೆ ಕೇಳಿಕೊಂಡ ಬಗೆ) | | 32,000 | 32,000 |
| 4 | ಬ್ಯಾಂಕಿನ ಖಾತೆಗೆ ಖರ್ಚು<br>ಶೇರುಗಳ ವಿತರಣೆ ಖಾತೆಗೆ ಜಮಾ<br>(16,000 ಶೇರುಗಳ ಮೇಲೆ ಪ್ರತಿ ಶೇರಿಗೆ ₹ 2ರಂತೆ ಹಂಚಿಕೆ ಹಣ ಪಡೆಯಲಾಯಿತು.) | | 32,000 | 32,000 |
| 5 | ಶೇರುಗಳ ಪ್ರಥಮ ಕರೆಯ ಖಾತೆಗೆ ಖರ್ಚು<br>ಶೇರುಗಳ ಬಂಡವಾಳ ಖಾತೆಗೆ ಜಮಾ<br>(16,000 ಶೇರುಗಳ ಮೇಲೆ ಶೇರಿಗೆ 3 ರೂಗಳಂತೆ ಶೇರುದಾರರಿಗೆ ಪ್ರಥಮ ಕರೆಯ ಹಣ ಕಳಿಸಿಕೊಡಬೇಕೆಂದು ಕೇಳಿಕೊಳ್ಳಲಾಯಿತು.) | | 48,000 | 48,000 |
| 6 | ಬ್ಯಾಂಕಿನ ಖಾತೆಗೆ ಖರ್ಚು<br>ಶೇರುಗಳ ಪ್ರಥಮ ಕರೆಯ ಖಾತೆಗೆ ಜಮಾ<br>(15,700 ಶೇರುಗಳ ಮೇಲೆ ಶೇರಿಗೆ 3 ರೂಗಳಂತೆ ಪ್ರಥಮ ಕರೆಯ ಹಣ ಪಡೆಯಲಾಯಿತು.) | | 47,100 | 47,100 |
| 7 | ಶೇರುಗಳ ಅಂತಿಮ ಕರೆಯ ಖಾತೆಗೆ ಖರ್ಚು<br>ಶೇರುಗಳ ಬಂಡವಾಳ ಖಾತೆಗೆ ಜಮಾ<br>(16,000 ಶೇರುಗಳ ಮೇಲೆ ಶೇರಿಗೆ 4 ರೂಗಳಂತೆ ಶೇರುದಾರರಿಗೆ ಅಂತಿಮ ಕರೆಯ ಹಣ ಕಳಿಸಿಕೊಡಬೇಕೆಂದು ಕೇಳಿಕೊಳ್ಳಲಾಯಿತು.) | | 64,000 | 64,000 |
| 8 | ಬ್ಯಾಂಕಿನ ಖಾತೆಗೆ ಖರ್ಚು<br>ಶೇರುಗಳ ಅಂತಿಮ ಕರೆಯ ಖಾತೆಗೆ ಜಮಾ<br>(15,200 ಶೇರುಗಳ ಮೇಲೆ ಶೇರಿಗೆ 4 ರೂಗಳಂತೆ ಅಂತಿಮ ಕರೆಯ ಹಣ ಪಡೆಯಲಾಯಿತು.) | | 60,800 | 60,800 |

## ನಿದರ್ಶನ 10.

ಅನುರಾಗ ಎರೋನಾಟಿಕಲ್ಸ್ ನಿಯಮಿತವು ₹ 10 ಮೌಲ್ಯದ 10,000 ಮೌಲ್ಯಗಳನ್ನು ಸಾರ್ವಜನಿಕರಿಗೆ ಕೊಳ್ಳಲು ಆಹ್ವಾನಿಸಿತು. ಕಂಪನಿಯ ನಿರ್ದೇಶಕರು ಕೇಳಗಿನಂತೆ ಶೇರುಗಳ ಹಣವನ್ನು ಕೊಡಬೇಕೆಂದು ಸೂಚಿಸಿದರು.

₹ 3 ಅರ್ಜಿಯ ಜೊತೆಗೆ

₹ 4 ಹಂಚಿಕೆ ಆದ ನಂತರ

₹ 3 ಪ್ರಥಮ ಹಾಗೂ ಕೊನೆಯ ಕರೆ

ಸಾರ್ವಜನಿಕರಿಂದ 12,000 ಶೇರುಗಳಿಗೆ ಬೇಡಿಕೆ ಬಂದಿತು. ಕಂಪನಿಯು 2,000 ಶೇರುಗಳ ಅರ್ಜಿಗಳನ್ನು ತಿರಸ್ಕರಿಸಿ ಅವುಗಳಲ್ಲಿ 1000 ಶೇರುಗಳ ಅರ್ಜಿಯ ಹಣವನ್ನು ಅರ್ಜಿದಾರರಿಗೆ ವಾಪಾಸ್ ಮಾಡಿತು. 1000 ಅರ್ಜಿಯ ಹಣವನ್ನು ಹಂಚಿಕೆಯ ಹಣಕ್ಕೆ ಹೊಂದಿಸಿಕೊಳ್ಳಲು ನಿರ್ಧರಿಸಿತು.

2000 ಶೇರುಗಳ ಪ್ರಥಮ ಹಾಗು ಅಂತಿಮ ಕರೆಯ ಹಣವನ್ನು ಹೊರತುಪಡಿಸಿ ಉಳಿದೆಲ್ಲ ಶೇರುಗಳ ಹಣವನ್ನು ಪಡೆಯಲಾಯಿತು. ಈ ವ್ಯವಹಾರಗಳನ್ನು ಕಂಪನಿಯ ರೋಜು ಪುಸ್ತಕದಲ್ಲಿ ದಾಖಲಿಸಿ.

**ನಿರೂಪಣೆ :**

**ಅನುರಾಗ ಎರೋನಾಟಿಕಲ್ಸ್ ನಿಯಮಿತ ದಿನವಹಿ**

| | ವಿವರಣೆ | ಪಾ.ಖಾ | ಖರ್ಚು | ಜಮಾ |
|---|---|---|---|---|
| 1 | ಬ್ಯಾಂಕಿನ ಖಾತೆಗೆ ಖರ್ಚು<br>ಶೇರುಗಳ ಅರ್ಜಿಯ ಖಾತೆಗೆ ಜಮಾ<br>(12,000 ಶೇರುಗಳ ಮೇಲೆ ಶೇರಿಗೆ ₹ 3ರಂತೆ ಅರ್ಜಿದಾರರಿಂದ ಅರ್ಜಿ ಹಣ ಪಡೆಯಲಾಯಿತು) | | 36,000 | 36,000 |
| 2 | ಶೇರುಗಳ ಅರ್ಜಿಯ ಖಾತೆಗೆ ಖರ್ಚು<br>ಶೇರು ಬಂಡವಾಳ ಖಾತೆಗೆ ಜಮಾ<br>(10,000 ಶೇರುಗಳ ಅರ್ಜಿಯ ಹಣವನ್ನು ಶೇರು ಬಂಡವಾಳ ಖಾತೆಗೆ ವರ್ಗಾಯಿಸಲಾಯಿತು.) | | 30,000 | 30,000 |
| 3 | ಶೇರುಗಳ ವಿತರಣೆ ಖಾತೆಗೆ ಖರ್ಚು<br>ಶೇರುಗಳ ಬಂಡವಾಳ ಖಾತೆಗೆ ಜಮಾ<br>(10,000 ಶೇರುಗಳನ್ನು ಹಂಚಿದ ನಂತರ ಪ್ರತಿ ಶೇರಿಗೆ ₹ 4ರಂತೆ ಹಂಚಿಕೆ ಹಣ ಕಳಿಸಿಕೊಡಲು ಶೇರುದಾರರಿಗೆ ಕೇಳಿಕೊಂಡ ಬಗ್ಗೆ) | | 40,000 | 40,000 |
| 4 | ಶೇರುಗಳ ಅರ್ಜಿಯ ಖಾತೆಗೆ ಖರ್ಚು<br>ಬ್ಯಾಂಕಿನ ಖಾತೆಗೆ ಜಮಾ<br>(1000 ಶೇರುಗಳ ತಿರಸ್ಕೃತ ಅರ್ಜಿಯ ಹಣವನ್ನು ಅರ್ಜಿದಾರರಿಗೆ ಹಿಂದಿರುಗಿಸಲಾಯಿತು.) | | 3,000 | 3,000 |

| | | | | |
|---|---|---|---|---|
| 5 | ಶೇರುಗಳ ಅರ್ಜಿಯ ಖಾತೆಗೆ ಖರ್ಚು<br>ಶೇರುಗಳ ಹಂಚಿಕೆ ಖಾತೆಗೆ ಜಮಾ<br>(ಭಾಗಶಃ ಅಂಗೀಕರಿಸಿದ ಶೇರುಗಳ ಅರ್ಜಿಯ ಹಣವನ್ನು ಹಂಚಿಕೆಯ ಖಾತೆಗೆ ವರ್ಗಾಯಿಸಲಾಯಿತು.) | | 3,000 | 3,000 |
| 6 | ಬ್ಯಾಂಕಿನ ಖಾತೆಗೆ ಖರ್ಚು<br>ಶೇರುಗಳ ಹಂಚಿಕೆ ಖಾತೆಗೆ ಜಮಾ<br>(ಶೇರುಗಳ ಹಂಚಿಕೆಯ ಹಣ ಪಡೆಯಲಾಯಿತು) | | 37,000 | 37,000 |
| 7 | ಶೇರುಗಳ ಪ್ರಥಮ ಹಾಗೂ ಅಂತಿಮ ಕರೆಯ ಖಾತೆಗೆ ಖರ್ಚು<br>ಶೇರುಗಳ ಬಂಡವಾಳ ಖಾತೆಗೆ ಜಮಾ<br>(10,000 ಮೇಲೆ ಶೇರಿಗೆ 3 ₹ಗಳಂತೆ ಪ್ರಥಮ ಹಾಗೂ ಅಂತಿಮ ಕರೆಯ ಹಣ ನೀಡಬೇಕೆಂದು ಸೂಚಿಸಲಾಯಿತು.) | | 30,000 | 30,000 |
| 8 | ಬ್ಯಾಂಕಿನ ಖಾತೆಗೆ ಖರ್ಚು<br>ಶೇರುಗಳ ಪ್ರಥಮ ಹಾಗೂ ಅಂತಿಮ ಕರೆಯ ಖಾತೆಗೆ ಜಮಾ<br>(8,000 ಶೇರುಗಳ ಮೇಲೆ ಶೇರಿಗೆ 3 ರೂಗಳಂತೆ ಪ್ರಥಮ ಹಾಗೂ ಅಂತಿಮ ಕರೆಯ ಹಣ ಪಡೆಯಲಾಯಿತು.) | | 24,000 | 24,000 |

**ನಿದರ್ಶನ 11.**

ರೋಚ್ ಕಂಪನಿ ನಿಯಮಿತ ಇದರ ಅಧಿಕೃತ ಶೇರು ಬಂಡವಾಳವು ₹ 10 ಮೌಲ್ಯದ 75,000 ಶೇರುಗಳನ್ನು ಹೊಂದಿತು. 50,000 ಶೇರುಗಳನ್ನು ವಂತಿಗೆಗಾಗಿ ಬಿಡುಗಡೆ ಮಾಡಿತು.

ವಿವಿಧ ದಿನಾಂಕಗಳಂದು ಕಂಪನಿಯು ಸಂಗ್ರಹಿಸಿದ ವಂತಿಗೆ ಹಣದ ವಿವರಗಳು ಈ ಕೆಳಗಿನಂತಿವೆ.

2014

ಮೇ 1 ಸಾರ್ವಜನಿಕರಿಂದ 65,000 ಶೇರುಗಳಿಗಾಗಿ ಅರ್ಜಿಗಳು ಬಂದವು. ಅರ್ಜಿಯ ಜೊತೆಗೆ ಪ್ರತಿ ಶೇರಿಗೆ 1 ₹ ಬಂದಿದೆ.

ಮೇ 17 ಅರ್ಜಿದಾರರಿಗೆ 50,000 ಶೇರುಗಳನ್ನು ಹಂಚಲಾಯಿತು. ಮತ್ತು ಪ್ರತಿ ಶೇರಿಗೆ ₹ 1ರಂತೆ ಕರೆಯನ್ನು ಮಾಡಲಾಯಿತು.

ಮೇ 18 ಶೇರುಗಳನ್ನು ಹಂಚದ ಅರ್ಜಿದಾರರಿಗೆ ₹ 10,000ಗಳನ್ನು ಹಿಂದಿರುಗಿಸಲಾಯಿತು. ಮತ್ತು ಉಳಿದ ₹ 5000 ಗಳನ್ನು ವಿತರಣೆಯ ಹಣಕ್ಕೆ ಹೊಂದಾಣಿಕೆ ಮಾಡಲಾಯಿತು.

ಜೂನ್ 2 ಶೇರುಗಳ ಮೇಲಿನ ವಿತರಣೆಯ ಹಣ ₹ 45,000 ಬಂದಿತು.

ಜೂನ್ 17 ಶೇರುಗಳ ಮೇಲೆ ₹ 2ರಂತೆ ಪ್ರಥಮ ಕರೆಯನ್ನು ಮಾಡಲಾಯಿತು. ಮತ್ತು ಹಣವನ್ನು ಜುಲೈ 5 ರೊಳಗೆ ಪಾವತಿಸಲು ಸೂಚಿಸಿತು.

ಜುಲೈ 5 ಪ್ರಥಮ ಕರೆಯ ಹಣ ₹ 99,000 ಗಳನ್ನು ಪಡೆಯಲಾಯಿತು.

ಈ ಮೇಲಿನ ವ್ಯವಹಾರಗಳನ್ನು ಕಂಪನಿಯ ದಿನವಹಿಯಲ್ಲಿ ದಾಖಲಿಸಿ.

**ನಿರೂಪಣೆ :**

## ರೋಜ್ ಕಂಪನಿಯ ನಿಯಮಿತ ದಿನವಹಿ

| | ವಿವರಣೆ | ಪಾ.ಖಾ | ಖರ್ಚು | ಜಮಾ |
|---|---|---|---|---|
| 2014<br>ಮೇ 1 | ಬ್ಯಾಂಕಿನ ಖಾತೆಗೆ ಖರ್ಚು<br>ಶೇರುಗಳ ಅರ್ಜಿಯ ಖಾತೆಗೆ ಜಮಾ<br>(65,000 ಶೇರುಗಳ ಮೇಲೆ ಶೇರಿಗೆ ₹ 1ರಂತೆ ಅರ್ಜಿದಾರರಿಂದ ಅರ್ಜಿ ಹಣ ಪಡೆಯಲಾಯಿತು) | | 65,000 | 65,000 |
| ಮೇ 17 | ಶೇರುಗಳ ಅರ್ಜಿಯ ಖಾತೆಗೆ ಖರ್ಚು<br>ಶೇರು ಬಂಡವಾಳ ಖಾತೆಗೆ ಜಮಾ<br>(50,000 ಶೇರುಗಳ ಅರ್ಜಿಯ ಹಣವನ್ನು ಶೇರು ಬಂಡವಾಳ ಖಾತೆಗೆ ವರ್ಗಾಹಿಸಲಾಯಿತು.) | | 50,000 | 50,000 |
| ಮೇ 17 | ಶೇರುಗಳ ವಿತರಣೆ ಖಾತೆಗೆ ಖರ್ಚು<br>ಶೇರುಗಳ ಬಂಡವಾಳ ಖಾತೆಗೆ ಜಮಾ<br>(50,000 ಶೇರುಗಳನ್ನು ಹಂಚಿದ ನಂತರ ಪ್ರತಿ ಶೇರಿಗೆ ₹ 1ರಂತೆ ಹಂಚಿಕೆ ಹಣ ಕಳಿಸಿಕೊಡಲು ಶೇರುದಾರರಿಗೆ ಕೇಳಿಕೊಂಡ ಬಗೆ) | | 50,000 | 50,000 |
| ಮೇ 18 | ಶೇರುಗಳ ಅರ್ಜಿಯ ಖಾತೆಗೆ ಖರ್ಚು<br>ಬ್ಯಾಂಕಿನ ಖಾತೆಗೆ ಜಮಾ<br>(ಶೇರುಗಳ ತಿರಸ್ಕೃತ ಅರ್ಜಿಯ ಹಣವನ್ನು ಅರ್ಜಿದಾರರಿಗೆ ಹಿಂದಿರುಗಿಸಲಾಯಿತು.) | | 10,000 | 10,000 |
| ಮೇ 18 | ಶೇರುಗಳ ಅರ್ಜಿಯ ಖಾತೆಗೆ ಖರ್ಚು<br>ಶೇರುಗಳ ಹಂಚಿಕೆ ಖಾತೆಗೆ ಜಮಾ<br>(ಭಾಗಶಃ ಅಂಗೀಕರಿಸಿದ ಶೇರುಗಳ ಅರ್ಜಿಯ ಹಣವನ್ನು ಹಂಚಿಕೆಯ ಖಾತೆಗೆ ವರ್ಗಾಯಿಸಲಾಯಿತು.) | | 5,000 | 5,000 |
| ಜೂನ್ 2 | ಬ್ಯಾಂಕಿನ ಖಾತೆಗೆ ಖರ್ಚು<br>ಶೇರುಗಳ ಹಂಚಿಕೆ ಖಾತೆಗೆ ಜಮಾ<br>(ಶೇರುಗಳ ಹಂಚಿಕೆಯ ಹಣ ಪಡೆಯಲಾಯಿತು) | | 45,000 | 45,000 |
| ಜೂನ್ 17 | ಶೇರುಗಳ ಪ್ರಥಮ ಕರೆಯ ಖಾತೆಗೆ ಖರ್ಚು<br>ಶೇರುಗಳ ಬಂಡವಾಳ ಖಾತೆಗೆ ಜಮಾ<br>(50,000 ಶೇರುಗಳ ಮೇಲೆ ಶೇರಿಗೆ 2 ₹ಗಳಂತೆ ಪ್ರಥಮ ಕರೆಯ ಹಣ ನೀಡಬೇಕೆಂದು ಸೂಚಿಸಲಾಯಿತು.) | | 1,00,000 | 1,00,000 |
| ಜುಲೈ 5 | ಬ್ಯಾಂಕಿನ ಖಾತೆಗೆ ಖರ್ಚು<br>ಶೇರುಗಳ ಪ್ರಥಮ ಕರೆಯ ಖಾತೆಗೆ ಜಮಾ<br>(ಪ್ರಥಮ ಕರೆಯ ಹಣ ಪಡೆಯಲಾಯಿತಿ) | | 99,000 | 99,000 |

## ನಿದರ್ಶನ 12.

ದಾಂಡೇಲಿ ಕಾಗದ ಕಾರ್ಖಾನೆ ನಿಯಮಿತ ಇದರ ಅಧೀಕೃತ ಶೇರುಬಂಡವಾಳವು ₹ 10 ಮೌಲ್ಯದ 50,000 ಶೇರುಗಳನ್ನು ಹೊಂದಿದೆ. ಅವುಗಳಲ್ಲಿ 20,000 ಶೇರುಗಳನ್ನು ಸಾರ್ವಜನಿಕರಿಗೆ ನೀಡಲು ನಿರ್ಣಯಿಸಿತು. ಶೇರುಗಳ ಹಣವನ್ನು ಈ ಕೆಳಗಿನಂತೆ ಪಾವತಿಸಲು ಸೂಚಿಸಿತು

₹ 1 ಅರ್ಜಿಯ ಜೊತೆಗೆ ₹ 2 ಹಂಚಿಕೆ ಆದ ನಂತರ ₹ 3 ಪ್ರಥಮ ಕರೆ

ಹಂಚಿಕೆಯ ಎಲ್ಲಾ ಹಣವನ್ನ ಪಡೆಯಲಾಯಿತು. ಪ್ರಥಮ ಕರೆ ಮಾಡಿದಾಗ 5 ಜನ ಶೇರುದಾರರು ತಾವು ಹೊಂದಿದ 1,000 ಶೇರಿನ ಹಣವನ್ನು ಪಾವತಿಸಲಿಲ್ಲ. ಹಾಗೂ ಒಬ್ಬ ಶೇರುದಾರ ತಾನು ಹೊಂದಿದ 300 ಶೇರುಗಳ ಮೇಲೆ ಪ್ರಥಮ ಕರೆಯ ಜೊತೆಗೆ ಉಳಿದೆಲ್ಲ ಹಣವನ್ನು ಪಾವತಿಸಿದನು.

ಈ ಮೇಲಿನ ವ್ಯವಹಾರಗಳನ್ನು ಕಂಪನಿಯ ದಿನವಹಿಯಲ್ಲಿ ಬರೆಯಿರಿ.

**ನಿರೂಪಣೆ :** **ದಾಂಡೇಲಿ ಕಾಗದ ಕಾರ್ಖಾನೆ ನಿಯಮಿತ ದಿನವಹಿ**

| | ವಿವರಣೆ | ಪಾ.ಖಾ | ಖರ್ಚು | ಜಮಾ |
|---|---|---|---|---|
| 1 | ಬ್ಯಾಂಕಿನ ಖಾತೆಗೆ ಖರ್ಚು<br>ಶೇರುಗಳ ಅರ್ಜಿಯ ಖಾತೆಗೆ ಜಮಾ<br>(20,000 ಶೇರುಗಳ ಮೇಲೆ ಶೇರಿಗೆ ₹ 1ರಂತೆ ಅರ್ಜಿದಾರರಿಂದ ಅರ್ಜಿ ಹಣ ಪಡೆಯಲಾಯಿತು) | | 20,000 | <br>20,000 |
| 2 | ಶೇರುಗಳ ಅರ್ಜಿಯ ಖಾತೆಗೆ ಖರ್ಚು<br>ಶೇರು ಬಂಡವಾಳ ಖಾತೆಗೆ ಜಮಾ<br>(20,000 ಶೇರುಗಳ ಅರ್ಜಿಯ ಹಣವನ್ನು ಶೇರು ಬಂಡವಾಳ ಖಾತೆಗೆ ವರ್ಗಾಹಿಸಲಾಯಿತು.) | | 20,000 | <br>20,000 |
| 3 | ಶೇರುಗಳ ವಿತರಣೆ ಖಾತೆಗೆ ಖರ್ಚು<br>ಶೇರುಗಳ ಬಂಡವಾಳ ಖಾತೆಗೆ ಜಮಾ<br>(20,000 ಶೇರುಗಳನ್ನು ಹಂಚಿದ ನಂತರ ಪ್ರತಿ ಶೇರಿಗೆ ₹ 2ರಂತೆ ಹಂಚಿಕೆ ಹಣ ಕಳಿಸಿಕೊಡಲು ಶೇರುದಾರರಿಗೆ ಕೇಳಿಕೊಂಡ ಬಗೆ) | | 40,000 | <br>40,000 |
| 4 | ಬ್ಯಾಂಕಿನ ಖಾತೆಗೆ ಖರ್ಚು<br>ಶೇರುಗಳ ಹಂಚಿಕೆ ಖಾತೆಗೆ ಜಮಾ<br>(ಶೇರುಗಳ ಹಂಚಿಕೆಯ ಹಣ ಪಡೆಯಲಾಯಿತು) | | 40,000 | <br>40,000 |
| 5 | ಶೇರುಗಳ ಪ್ರಥಮ ಕರೆಯ ಖಾತೆಗೆ ಖರ್ಚು<br>ಶೇರು ಬಂಡವಾಳ ಖಾತೆಗೆ ಜಮಾ<br>(20,000 ಶೇರುಗಳ ಮೇಲೆ ಶೇರಿಗೆ ₹ 3 ಪ್ರಥಮ ಹಾಗೂ ಅಂತಿಮ ಕರೆಯ ಹಣ ನೀಡಬೇಕೆಂದು ಸೂಚಿಸಲಾಯಿತು) | | 60,000 | <br>60,000 |
| 6 | ಬ್ಯಾಂಕಿನ ಖಾತೆಗೆ ಖರ್ಚು<br>(19,000×3+300×4)<br>ಶೇರುಗಳ ಪ್ರಥಮ ಕರೆ ಖಾತೆಗೆ ಜಮಾ (19,000×3)<br>ಶೇರುಗಳ ಮುಂಗಡ ಖಾತೆಗೆ ಜಮಾ (300×4)<br>(19,000 ಶೇರುಗಳ ಮೇಲೆ ಪ್ರಥಮ ಕರೆಯ ಹಣ ಹಾಗೂ 300 ಶೇರುಗಳ ಮೇಲೆ ಶೇರಿಗೆ 4ರಂತೆ ಕರೆಯ ಮುಂಗಡ ಹಣ ಪಡೆಯಲಾಯಿತು.) | | 58,200 | <br><br>57,000<br>1,200 |

## ಶೇರುಗಳ ಮುಟ್ಟುಗೋಲು (Forfeiture of shares):

ಶೇರುದಾರರು ಶೇರುಗಳ ಮೇಲಿನ ಬಾಕಿ ಉಳಿದಿರುವ ಹಂಚಿಕೆಯ ಹಣ ಹಾಗೂ ಕರೆಗಳ ಹಣವನ್ನು ಪಾವತಿಸದಿದ್ದರೆ ಅವರ ಶೇರುಗಳನ್ನು ರದ್ದುಪಡಿಸಿ ಹಿಂದಕ್ಕೆ ಪಡೆದುಕೊಳ್ಳುವದಕ್ಕೆ ಶೇರುಗಳ ಮುಟ್ಟುಗೋಲು ಎಂದು ಕರೆಯುತ್ತಾರೆ.

ಶೇರುಗಳನ್ನು ಮುಟ್ಟುಗೋಲು ಹಾಕಿದ ನಂತರ ಅವು ಕಂಪನಿಯ ಸ್ವತ್ತು ಆಗುತ್ತವೆ.

ಶೇರುದಾರನು ತನ್ನ ಈ ಶೇರುಗಳ ಮೇಲಿನ ಹಕ್ಕನ್ನು ಕಳೆದುಕೊಳ್ಳುವುದಲ್ಲದೆ ಅವುಗಳ ಮೇಲೆ ಈ ವರೆಗೆ ಕೊಟ್ಟಿರುವ ಹಣವನ್ನು ಕಳೆದುಕೊಳ್ಳುತ್ತಾನೆ.

ಮುಟ್ಟಗೋಲಾದ ಶೇರುಗಳ ಬಗ್ಗೆ ಮಾಡುವ ಜಮಾ ಖರ್ಚು

| |
|---|
| ಶೇರು ಬಂಡವಾಳ ಖಾತೆ ಖರ್ಚು (ಕರೆ ಮಾಡಿದ ಹಣ)<br>ಮುಟ್ಟುಗೋಲಾದ ಶೇರುಗಳ ಖಾತೆ ಜಮಾ (ಪಾವತಿಯಾದ ಹಣ)<br>ಶೇರುಗಳ ಹಂಚಿಕೆ ಖಾತೆ ಜಮಾ (ಪಾವತಿಯಾಗದ ಬಾಕಿ ಹಣ)<br>ಶೇರುಗಳ ಕರೆಯ ಖಾತೆ ಜಮಾ (ಪಾವತಿಯಾಗದ ಬಾಕಿ ಹಣ) |

### ನಿದರ್ಶನ 13.

ಒಂದು ನಿಯಮಿತ ಕಂಪನಿಯು ₹ 10 ಮುಖಬೆಲೆಯ 10,000 ಶೇರುಗಳನ್ನು ಸಾರ್ವಜನಿಕರಿಗೆ ನೀಡಿತು. ಅವುಗಳಲ್ಲಿ ಪ್ರಥಮ ಹಾಗೂ ಅಂತಿಮ ಕರೆಯ ಹಣ ಪ್ರತಿ ಶೇರಿಗೆ ₹ 3ರಂತೆ 100 ಶೇರಿನ ಹಣ ಬಾಕಿ ನಿಂತಿತು. ಆ ಶೇರುಗಳನ್ನು ಕಂಪನಿಯು ಮುಟ್ಟಗೋಲು ಹಾಕಿ ಕೊಂಡಿತು.

ಮುಟ್ಟಗೋಲಿಗೆ ಸಂಬಂಧಿಸಿದಂತೆ ರೋಜು ದಾಖಲೆ ಬರೆಯಿರಿ.

**ನಿರೂಪಣೆ :**

**ರೋಜು ದಾಖಲೆ**

| | ವಿವರಣೆ | ಪಾ.ಖಾ | ಖರ್ಚು | ಜಮಾ |
|---|---|---|---|---|
| | ಶೇರು ಬಂಡವಾಳ ಖಾತೆ ಖರ್ಚು (100×10) | | 1,000 | |
| | ಮುಟ್ಟುಗೋಲಾದ ಶೇರುಗಳ ಖಾತೆ ಜಮಾ (100×7) | | | 700 |
| | ಶೇರುಗಳ ಪ್ರಥಮ ಹಾಗೂ ಅಂತಿಮ ಕರೆಯ ಖಾತೆ ಜಮಾ (100× 3) | | | 300 |
| | (100 ಶೇರುಗಳ ಪ್ರಥಮ ಹಾಗೂ ಅಂತಿಮ ಕರೆಯ ಹಣ ಸಂದಾಯವಾದುದೇ ಇದ್ದುದಕ್ಕೆ ಅವುಗಳನ್ನು ಮುಟ್ಟುಗೋಲು ಹಾಕಿದ ಬಗ್ಗೆ) | | | |

**ಅಧಿಕ ಮೌಲ್ಯಕ್ಕೆ ನೀಡಿದ ಶೇರುಗಳ ಮುಟ್ಟುಗೋಲು**

ಮುಟ್ಟುಗೋಲು ಹಾಕಿಕೊಳ್ಳಲಾದ ಶೇರುಗಳ ಮೇಲಿನ ಪ್ರಿಮಿಯಂ ಹಣವನ್ನು ಕಂಪನಿಯು ಪಡೆದುಕೊಂಡಿದ್ದರೆ, ಶೇರು ಪ್ರಿಮಿಯಂ ಖಾತೆಗೆ ಖರ್ಚು ಹಾಕಬಾರದು. ಒಂದು ವೇಳೆ ಮುಟ್ಟುಗೋಲು ಹಾಕಿಕೊಳ್ಳಲಾದ ಶೇರುಗಳ ಮೇಲಿನ ಪ್ರಿಮಿಯಂ ಹಣ ಪಡೆಯದಿದ್ದರೆ, ಶೇರು ಪ್ರಿಮಿಯಂ ಖಾತೆಗೆ ಖರ್ಚು ಬರೆಯಬೇಕು. ಆಗ ಈ ಕೆಳಗಿನಂತೆ ರೋಜು ದಾಖಲೆ ಮಾಡಬೇಕು.

ಶೇರು ಬಂಡವಾಳ ಖಾತೆ ಖರ್ಚು (ಕರೆ ಮಾಡಿದ ಹಣ)

ಶೇರು ಪ್ರಿಮಿಯಂ ಖಾತೆ ಖರ್ಚು (ಸಂದಾಯವಾಗದ ಪ್ರಿಮಿಯಂ ಹಣ)

## ನಿದರ್ಶನ 14.

ಒಂದು ನಿಯಮಿತ ಕಂಪನಿಯು ₹ 10 ಮುಖಬೆಲೆಯ 5,000 ಶೇರುಗಳನ್ನು ₹ 2 ಅಧಿಕ ಮೌಲ್ಯಕ್ಕೆ ಸಾರ್ವಜನಿಕರಿಗೆ ನೀಡಿತು. ಶೇರುಗಳ ಹಣವನ್ನು ಕೆಳಗಿನಂತೆ ಪಾವತಿಸಲು ಸೂಚಿಸಿತು. ಅರ್ಜಿಯೊಂದಿಗೆ ₹ 2 ವಿತರಣೆಯ ಮೇಲೆ ಅಧಿಕ ಮೌಲ್ಯ ಸೇರಿ ₹ 5 ಪ್ರಥಮ ಹಾಗೂ ಅಂತಿಮ ಕರೆಯ ಹಣ ಪ್ರತಿ ಶೇರಿಗೆ ₹ 5ರಂತೆ 200 ಶೇರುಗಳ ಮೇಲಿನ ಪ್ರಥಮ ಹಾಗೂ ಅಂತಿಮ ಹಣವನ್ನು ಹೊರತು ಪಡಿಸಿ ಉಳಿದೆಲ್ಲ ಹಣವನ್ನು ವಸೂಲಿ ಮಾಡಲಾಯಿತು. ಕಂಪನಿಯು ಈ 200 ಶೇರಿಗಳನ್ನು ಮುಟ್ಟುಗೋಲು ಹಾಕಿಕೊಂಡಿತು.

ಮುಟ್ಟುಗೋಲಿಗೆ ಸಂಬಂಧಿಸಿದಂತೆ ರೋಜು ದಾಖಲೆ ಬರೆಯಿರಿ.

**ನಿರೂಪಣೆ :**

**ರೋಜು ದಾಖಲೆ**

| ವಿವರಣೆ | ಪಾ.ಖಾ | ಖರ್ಚು | ಜಮಾ |
|---|---|---|---|
| ಶೇರು ಬಂಡವಾಳ ಖಾತೆ ಖರ್ಚು (200×10) | | 2,000 | |
| ಮುಟ್ಟುಗೋಲಾದ ಶೇರುಗಳ ಖಾತೆ ಜಮಾ (200×5) | | | 1,000 |
| ಶೇರುಗಳ ಪ್ರಥಮ ಹಾಗೂ ಅಂತಿಮ ಕರೆಯ ಖಾತೆ ಜಮಾ (200×5) | | | 1,000 |
| (200 ಶೇರುಗಳ ಪ್ರಥಮ ಹಾಗೂ ಅಂತಿಮ ಕರೆಯ ಹಣ ಸಂದಾಯವಾದುದೇ ಇದ್ದುದಕ್ಕೆ ಅವುಗಳನ್ನು ಮುಟ್ಟುಗೋಲು ಹಾಕಿದ ಬಗ್ಗೆ) | | | |

ಟಿಪ್ಪಣಿ : ಶೇರು ಪ್ರಿಮಿಯಂ ಸಂದಾಯವಾದುದರಿಂದ ಶೇರು ಪ್ರಿಮಿಯಂ ಖಾತೆ ಖರ್ಚು ಹಾಕಲಾಗಿಲ್ಲ.

## ನಿದರ್ಶನ 15

ಒಂದು ಕಂಪನಿ ನಿಯಮಿತವು ₹ 10 ಮುಖಬೆಲೆಯ ಶೇರುಗಳನ್ನು ₹ 2 ಅಧಿಕ ಮೌಲ್ಯಕ್ಕೆ ಸಾರ್ವಜನಿಕರಿಗೆ ನೀಡಿತು. ಶೇರುಗಳ ಮೇಲಿನ ಹಣವನ್ನು ಈ ಕೇಳಗಿನಂತೆ ಪಡೆದುಕೊಳ್ಳಲಾಗಿತು. ₹ 2 ಅರ್ಜಿಯೊಂದಿಗೆ ₹ 5 ವಿತರಣೆಯ ಮೇಲೆ (ಅಧಿಕ ಮೌಲ್ಯ ಸೇರಿಸಿ) ₹ 5 ಮೊದಲ ಹಾಗೂ ಅಂತಿಮ ಕರೆ.

ಬಾಲು ಎಂಬುವವರು ತಾವು ಹೊಂದಿದ 300 ಶೇರುಗಳ ಮೇಲಿನ ಹಂಚಿಕೆಯ ಹಣ ಮತ್ತು ಪ್ರಥಮ ಹಾಗೂ ಅಂತಿಮ ಕರೆಯ ಹಣವನು ಸಂದಾಯ ಮಾಡದೆ ಇದ್ದುದರಿಂದ ಅವರ ಶೇರುಗಳನ್ನು ಮುಟ್ಟುಗೋಲು ಹಾಕಿಕೊಳ್ಳಲಾಗಿಯಿತು.

ಮುಟ್ಟುಗೋಲಿಗೆ ಸಂಬಂಧಿಸಿದಂತೆ ರೋಜು ದಾಖಲೆ ಬರೆಯಿರಿ.

**ನಿರೂಪಣೆ :**

**ರೋಜು ದಾಖಲೆ**

| ವಿವರಣೆ | ಪಾ.ಖಾ | ಖರ್ಚು | ಜಮಾ |
|---|---|---|---|
| ಶೇರು ಬಂಡವಾಳ ಖಾತೆ ಖರ್ಚು (300×10) | | 3,000 | |
| ಶೇರು ಪ್ರಿಮಿಯಂ ಖಾತೆ ಖರ್ಚು (300×2) | | 600 | |
| ಮುಟ್ಟುಗೋಲಾದ ಶೇರುಗಳ ಖಾತೆ ಜಮಾ (300×2) | | | 600 |
| ಶೇರು ಹಂಚಿಕೆಯ ಖಾತೆ ಜಮಾ (300×5) | | | 1,500 |
| ಶೇರುಗಳ ಪ್ರಥಮ ಹಾಗೂ ಅಂತಿಮ ಕರೆಯ ಖಾತೆ ಜಮಾ (300× 5) | | | 1,500 |
| (300 ಶೇರುಗಳ ಮೇಲೆ ಹಂಚಿಕೆ ಹಾಗೂ ಪ್ರಥಮ ಹಾಗೂ ಅಂತಿಮ ಕರೆಯ ಹಣ ಸಂದಾಯವಾದುದೇ ಇದ್ದುದಕ್ಕೆ ಅವುಗಳನ್ನು ಮುಟ್ಟುಗೋಲು ಹಾಕಿದ ಬಗ್ಗೆ) | | | |

ಟಿಪ್ಪಣಿ : ಶೇರು ಪ್ರೀಮಿಯಂದ ಹಣ ಸಂದಾಯವಾಗದಿದ್ದುದರಿಂದ ಶೇರು ಪ್ರಿಮಿಯಂ ಖಾತೆ ಖರ್ಚು ಹಾಕಲಾಗಿದೆ.

**ಸೋಡಿಗೆ ನೀಡಿದ ಶೇರುಗಳ ಮುಟ್ಟುಗೋಲು**

ಸೋಡಿಗೆ ನೀಡಿದ ಶೇರುಗಳನ್ನು ಮುಟ್ಟುಗೋಲು ಹಾಕಿಕೊಂಡಾಗ, ಮುಟ್ಟುಗೋಲು ಹಾಕಿಕೊಂಡ ಶೇರುಗಳ ಮೇಲಿನ ಸೋಡಿಯನ್ನು ರದ್ದು ಪಡಿಸಬೇಕು ಅಂದರೆ ಶೇರು ಸೋಡಿ ಖಾತೆಗೆ ಜಮಾ ಬರೆಯಬೇಕು. ಆಗ ಈ ಕೆಳಗಿನಂತೆ ರೋಜು ದಾಖಲೆ ಮಾಡಬೇಕು.

ಶೇರು ಬಂಡವಾಳ ಖಾತೆ ಖರ್ಚು
(ಕರೆ ಮಾಡಿದ ಹಣ)
ಶೇರು ಸೋಡಿ ಖಾತೆ ಜಮಾ
ಶೇರುಗಳ ಮುಟ್ಟುಗೋಲು ಖಾತೆ ಜಮಾ
ಶೇರು ಹಂಚಿಕೆ ಖಾತೆ ಜಮಾ
ಶೇರು ಕರೆಯ ಖಾತೆ ಜಮಾ

## ನಿದರ್ಶನ 16.

ವಿಜಯ್ ಎಂಬುವವರಿಗೆ ₹ 10 ಮುಖಬೆಲೆಯ 200 ₹ 10% ಸೋಡಿಗೆ ಮಾರಾಟ ಮಾಡಿತು. ವಿಜಯ್ ಅವರು ಅರ್ಜಿಯ ಹಣ ₹ 2 ಗಳನ್ನು ಸಂದಾಯ ಮಾಡಿದ್ದರು. ಆದರೆ ಹಂಚಿಕೆಯ ಹಣ ₹ 4 ಪ್ರಥಮ ಹಾಗೂ ಅಂತಿಮ ಕರೆಯ ₹ 3 ಸಂದಾಯ ಮಾಡಿರಲಿಲ್ಲ. ಕಂಪನಿಯು ಅವರ ಶೇರುಗಳನ್ನು ಮುಟ್ಟುಗೋಲು ಹಾಕಿಕೊಂಡಿತು.

ಮುಟ್ಟುಗೋಲಿಗೆ ಸಂಬಂಧಿಸಿದ ರೋಜು ದಾಖಲೆ ಬರೆಯಿರಿ.

ನಿರೂಪಣೆ : ರೋಜು ದಾಖಲೆ

| | ವಿವರಣೆ | ಪಾ.ಖಾ | ಖರ್ಚು | ಜಮಾ |
|---|---|---|---|---|
| | ಶೇರು ಬಂಡವಾಳ ಖಾತೆ ಖರ್ಚು (200×10) | | 2,000 | |
| | ಶೇರು ಸೋಡಿ ಖಾತೆ ಜಮಾ (200×1) | | | 200 |
| | ಶೇರುಗಳ ಮುಟ್ಟುಗೋಲು ಖಾತೆ ಜಮಾ (200×2) | | | 400 |
| | ಶೇರು ಹಂಚಿಕೆ ಖಾತೆ ಜಮಾ (200×4) | | | 800 |
| | ಶೇರು ಕರೆಯ ಖಾತೆ ಜಮಾ (200×3) | | | 600 |
| | (200 ಶೇರುಗಳ ಮೇಲೆ ಹಂಚಿಕೆ ಹಾಗೂ ಪ್ರಥಮ ಹಾಗೂ ಅಂತಿಮ ಕರೆಯ ಹಣ ಸಂದಾಯವಾದುದೇ ಇದ್ದುದಕ್ಕೆ ಅವುಗಳನ್ನು ಮುಟ್ಟುಗೋಲು ಹಾಕಿದ ಬಗ್ಗೆ) | | | |

**ಮುಟ್ಟುಗೋಲು ಶೇರುಗಳ ಪುನರ್ ಮಾರಾಟ**

ಮುಟ್ಟುಗೋಲಾದ ಶೇರುಗಳನ್ನು ಅವುಗಳ ಮುಖಬೆಲೆಗೆ ಮಾರಾಟ ಮಾಡಬಹುದು. ಅಥವಾ ಸೋಡಿಗೆ ಮಾರಾಟ ಮಾಡಬಹುದು. ಆದರೆ ಅವುಗಳ ಬೆಲೆಯಲ್ಲಿನ ಕಡಿತವು ಅಥವಾ ಸೋಡಿಯು ಈಗಾಗಲೇ ಪಾವತಿಯಾದ ಹಣಕ್ಕಿಂತಲು ಹೆಚ್ಚಾಗಿರಬಾರದು.

**1. ಮುಟ್ಟುಗೋಲಾದ ಶೇರುಗಳನ್ನು ಸೋಡಿಗೆ ಮರುಮಾರಾಟ ಮಾಡಿದಾಗ ಮಾಡಬೇಕಾದ ದಾಖಲೆ.**

ಬ್ಯಾಂಕಿನ ಖಾತೆ ಖರ್ಚು (ಮಾರಿದ ಹಣ)
ಮುಟ್ಟುಗೋಲಾದ ಶೇರುಗಳ ಖಾತೆ (ಸೋಡಿ)
ಶೇರು ಬಂಡವಾಳ ಖಾತೆ ಜಮಾ

2. ಮುಟ್ಟುಗೋಲಾದ ಶೇರುಗಳನ್ನು ಮುಖಬೆಲೆಗೆ ಪುನರ್ ಮಾರಾಟ ಮಾಡಿದಾಗ ಮಾಡಬೇಕಾದ ದಾಖಲೆ.

| |
|---|
| ಬ್ಯಾಂಕಿನ ಖಾತೆ ಖರ್ಚು |
| ಶೇರು ಬಂಡವಾಳ ಖಾತೆ ಜಮಾ |

3. ಮುಟ್ಟುಗೋಲಾದ ಶೇರುಗಳನ್ನು ಅಧಿಕ ಮೌಲ್ಯಕ್ಕೆ ಮಾರಾಟ ಮಾಡಿದಾಗ ಮಾಡುವ ದಾಖಲೆ.

| |
|---|
| ಬ್ಯಾಂಕಿನ ಖಾತೆ ಖರ್ಚು |
| ಶೇರು ಬಂಡವಾಳ ಖಾತೆ ಜಮಾ |
| ಶೇರು ಪ್ರಿಮಿಯಂ ಖಾತೆ ಜಮಾ |

ಟಿಪ್ಪಣಿ : ಮುಟ್ಟುಗೋಲಾದ ಶೇರುಗಳನ್ನು ಪುನರ್ ಮಾರಾಟ ಮಾಡಿದ ನಂತರ, ಮುಟ್ಟುಗೋಲಾದ ಶೇರುಗಳ ಖಾತೆಯ ಜಮೆಯ ಸಿಲ್ಕನ್ನು ಬಂಡವಾಳ ನಿಧಿಯ ಖಾತೆಗೆ ವರ್ಗಾಹಿಸಲಾಗುತ್ತದೆ. ಆಗ ಈ ಕೆಳಗಿನಂತೆ ದಾಖಲೆ ಬರೆಯಬೇಕಾಗುತ್ತದೆ.

| |
|---|
| ಮುಟ್ಟುಗೋಲಾದ ಶೇರುಗಳ ಖಾತೆ ಖರ್ಚು |
| ಬಂಡವಾಳ ನಿಧಿ ಖಾತೆ ಜಮಾ |

## ನಿದರ್ಶನ 17.

ಒಂದು ಕಂಪನಿಯು ₹ 100 ಮುಖಬೆಲೆಯ 5,000 ಶೇರುಗಳನ್ನು ಸಾರ್ವಜನಿಕರಿಗೆ ನೀಡಿತು. ಎ ಎಂಬುವವರು ತಾವು ಖರೀದಿಸಿದ 50 ಶೇರುಗಳ ಮೇಲಿನ ಅಂತಿಮ ಕರೆಯ ಹಣ ₹ 20ಗಳನ್ನು ಸಂದಾಯ ಮಾಡಲಿಲ್ಲ. ಕಂಪನಿಯು ಈ ಶೇರುಗಳನ್ನು ಮುಟ್ಟುಗೋಲು ಹಾಕಿಕೊಂಡು ಪ್ರತಿ ಶೇರಿಗೆ ₹ 70 ರಂತೆ ಪೂರ್ಣ ಸಂದಾಯವೆಂದು ಮರು ಬಿಡುಗಡೆ ಮಾಡಿತು.

ಮುಟ್ಟುಗೋಲು ಹಾಗೂ ಮರು ಮಾರಾಟಕ್ಕೆ ಸಂಬಂಧಿಸಿದ ರೋಜು ದಾಖಲೆ ಬರೆಯಿರಿ.

**ನಿರೂಪಣೆ :** **ರೋಜು ದಾಖಲೆ**

| | ವಿವರಣೆ | ಪಾ.ಖಾ | ಖರ್ಚು | ಜಮಾ |
|---|---|---|---|---|
| 1. | ಶೇರು ಬಂಡವಾಳ ಖಾತೆ ಖರ್ಚು (50×100) | | 5,000 | |
| | ಶೇರುಗಳ ಮುಟ್ಟುಗೋಲು ಖಾತೆ ಜಮಾ (50×80) | | | 4,000 |
| | ಶೇರು ಕೊನೆಯ ಕರೆಯ ಖಾತೆಯ ಜಮಾ (500×20) | | | 1,000 |
| | (500 ಶೇರುಗಳ ಮೇಲೆ ಅಂತಿಮ ಕರೆಯ ಹಣ ಸಂದಾಯವಾಗದೇ ಇದ್ದುದಕ್ಕೆ ಅವುಗಳನ್ನು ಮುಟ್ಟುಗೋಲು ಹಾಕಿದ ಬಗ್ಗೆ) | | | |
| 2. | ಬ್ಯಾಂಕಿನ ಖಾತೆ ಖರ್ಚು (50×70) | | 3,500 | |
| | ಮುಟ್ಟುಗೋಲಾದ ಶೇರುಗಳ ಖಾತೆ ಖರ್ಚು(50×30) | | 1,500 | |
| | ಶೇರು ಬಂಡವಾಳ ಖಾತೆ ಜಮಾ (50×100) | | | 5,000 |
| | (ಮುಟ್ಟುಗೋಲಾದ 50 ಶೇರುಗಳನ್ನು ಶೇರಿಗೆ ₹ 70ರಂತೆ ಪೂರ್ಣ ಸಂದಾಯವೆಂದು ಮರು ಮಾರಾಟ ಮಾಡಲಾಯಿತು. | | | |
| 3. | ಮುಟ್ಟುಗೋಲಾದ ಶೇರುಗಳ ಖಾತೆ ಖರ್ಚು | | 2,500 | |
| | ಬಂಡವಾಳ ನಿಧಿ ಖಾತೆ ಜಮಾ | | | 2,500 |
| | (ಮುಟ್ಟುಗೋಲಾದ ಶೇರುಗಳ ಖಾತೆಯ ಜಮೆಯ ಸಿಲ್ಕ್‌ನ್ನು ಬಂಡವಾಳ ನಿಧಿಯ ಖಾತೆಗೆ ವರ್ಗಾಯಿಸಿದ್ದು.) | | | |

## ನಿದರ್ಶನ 18.

ದಿನಾಂಕ 1-1-2014ರಂದು ಅಪರ್ಣ ಕಂಪನಿ ನಿಯಮಿತ ಇದರ ನಿರ್ದೇಶಕರು ₹ 100 ಮುಖಬೆಲೆಯ 600 ಶೇರುಗಳನ್ನು ಪ್ರತಿ ಶೇರಿಗೆ ಮೊದಲ ಕರೆಯಾದ ₹ 40 ಮತ್ತು ಅಂತಿಮ ಕರೆಯಾದ ₹ 10 ಸಂದಾಯ ಮಾಡದಿದ್ದಕ್ಕಾಗಿ ಮುಟ್ಟುಗೋಲು ಹಾಕಿತು.

ದಿನಾಂಕ 1-2-2014ರಂದು ಈ ಶೇರುಗಳನ್ನು ಪ್ರತಿ ಶೇರಿಗೆ ₹ 80ರಂತೆ ಪೂರ್ಣ ಸಂದಾಯವೆಂದು ಮರುಬಿಡುಗಡೆ ಮಾಡಿತು. ಈ ವಿಷಯಗಳಿಗೆ ಸಂಬಂಧಿಸಿದಂತೆ ರೋಜು ದಾಖಲೆಗಳನ್ನು ಬರೆಯಿರಿ.

ಮುಟ್ಟುಗೋಲು ಹಾಗೂ ಮರು ಮಾರಾಟಕ್ಕೆ ಸಂಬಂಧಿಸಿದ ರೋಜು ದಾಖಲೆ ಬರೆಯಿರಿ.

**ನಿರೂಪಣೆ :**

**ರೋಜು ದಾಖಲೆ**

| ದಿನಾಂಕ | ವಿವರಣೆ | ಪಾ.ಖಾ | ಖರ್ಚು | ಜಮಾ |
|---|---|---|---|---|
| 1-1-14 | ಶೇರು ಬಂಡವಾಳ ಖಾತೆ ಖರ್ಚು (600×100) | | 60,000 | |
| | ಶೇರುಗಳ ಮುಟ್ಟುಗೋಲು ಖಾತೆ ಜಮಾ (600×50) | | | 30,000 |
| | ಶೇರು ಪ್ರಥಮ ಕರೆಯ ಖಾತೆಯ ಜಮಾ (600×40) | | | 24,000 |
| | ಶೇರು ಅಂತಿಮ ಕರೆಯ ಖಾತೆ ಜಮಾ (600×10) | | | 6,000 |
| | (600 ಶೇರುಗಳ ಮೇಲೆ ಪ್ರಥಮ ಹಾಗೂ ಅಂತಿಮ ಕರೆಯ ಹಣ ಸಂದಾಯವಾದುದೇ ಇದ್ದುದಕ್ಕೆ ಅವುಗಳನ್ನು ಮುಟ್ಟುಗೋಲು ಹಾಕಿದ ಬಗ್ಗೆ) | | | |
| 1-1-14 | ಬ್ಯಾಂಕಿನ ಖಾತೆ ಖರ್ಚು (600×80) | | 48,000 | |
| | ಮುಟ್ಟುಗೋಲಾದ ಶೇರುಗಳ ಖಾತೆ ಖರ್ಚು(600×20) | | 12,000 | |
| | ಶೇರು ಬಂಡವಾಳ ಖಾತೆ ಜಮಾ (600×100) | | | 60,000 |
| | (ಮುಟ್ಟುಗೋಲಾದ 600 ಶೇರುಗಳನ್ನು ಶೇರಿಗೆ ₹ 80ರಂತೆ ಪೂರ್ಣ ಸಂದಾಯವೆಂದು ಮರು ಮಾರಾಟ ಮಾಡಲಾಯಿತು. | | | |
| 1-2-14 | ಮುಟ್ಟುಗೋಲಾದ ಶೇರುಗಳ ಖಾತೆ ಖರ್ಚು | | 1,8000 | |
| | ಬಂಡವಾಳ ನಿಧಿ ಖಾತೆ ಜಮಾ | | | 1,800 |
| | (ಮುಟ್ಟುಗೋಲಾದ ಶೇರುಗಳ ಖಾತೆಯ ಜಮೆಯ ಶಿಲ್ಕನ್ನು ಬಂಡವಾಳ ನಿಧಿಯ ಖಾತೆಗೆ ವರ್ಗಾಯಿಸಿದ್ದು, 30,000 – 12,000) | | | |

## ನಿದರ್ಶನ 19.

ಅಲ್ಪಾ ಕಂಪನಿ ನಿಯಮಿತವು ₹ 10 ಮುಖಬೆಲೆಯ 10,000 ಸಾಮಾನ್ಯ ಶೇರುಗಳನ್ನು 10% ಸೋಡಿಗೆ ಸಾರ್ವಜನಿಕರಿಗೆ ಕೊಳ್ಳಲು ನೀಡಿತು. ಶೇರುಗಳ ಮೇಲಿನ ಹಣವನ್ನು ₹ 2 ಅರ್ಜಿಯ ಜೊತೆಗೆ, ₹3 ಹಂಚಿಕೆ ಆದ ನಂತರ, ₹ 4 ಮೊದಲ ಹಾಗೂ ಅಂತಿಮ ಕರೆ ಹಣ ಪಾವತಿಸಲು ಸೂಚಿಸಿತು.

ರಾಜು ಎಂಬುವವರು ತಾವು ಹೊಂದಿದ ಒಂದು ಸಾವಿರ ಶೇರುಗಳ ಮೇಲಿನ ಮೊದಲ ಹಾಗೂ ಕೊನೆಯ ಕರೆಯ ಹಣವನ್ನು ಸಂದಾಯ ಮಾಡದಿದ್ದುದಕ್ಕಾಗಿ ಅವರ ಶೇರುಗಳನ್ನು ಮುಟ್ಟುಗೋಲು ಹಾಕಿಕೊಳ್ಳಲಾಯಿತು. ಈ ಶೇರುಗಳನ್ನು ಶೇರಿಗೆ ₹ 9 ರಂತೆ ಪೂರ್ಣ ಸಂದಾಯವೆಂದು ಮರು ಬಿಡುಗಡೆ ಮಾಡಿತು.

ಮುಟ್ಟುಗೋಲು ಹಾಗೂ ಮರು ಬಿಡುಗಡೆಗೆ ಸಂಬಂಧಿಸಿದಂತೆ ರೋಜು ದಾಖಲೆ ಬರೆಯಿರಿ.

**ನಿರೂಪಣೆ :**

| | ವಿವರಣೆ | ಪಾ.ಖಾ | ಖರ್ಚು | ಜಮಾ |
|---|---|---|---|---|
| 1. | ಶೇರು ಬಂಡವಾಳ ಖಾತೆ ಖರ್ಚು (1000×10) | | 10,000 | |
| | ಶೇರುಗಳ ಸೋಡಿ ಖಾತೆ ಜಮಾ (1000×1) | | | 1,000 |
| | ಶೇರುಗಳ ಮುಟ್ಟುಗೋಲು ಖಾತೆ ಜಮಾ (1000×5) | | | 5,000 |
| | ಶೇರು ಮೊದಲ ಹಾಗೂ ಕೊನೆಯ ಕರೆಯ ಖಾತೆಯ ಜಮಾ (1000×4) | | | 4,000 |
| | (1000 ಶೇರುಗಳ ಮೇಲೆ ಮೊದಲ ಹಾಗೂ ಅಂತಿಮ ಕರೆಯ ಹಣ ಸಂದಾಯವಾದುದೇ ಇದ್ದುದಕ್ಕೆ ಅವುಗಳನ್ನು ಮುಟ್ಟುಗೋಲು ಹಾಕಿದ ಬಗ್ಗೆ) | | | |
| 2. | ಬ್ಯಾಂಕಿನ ಖಾತೆ ಖರ್ಚು (1000×9) | | 9,000 | |
| | ಮುಟ್ಟುಗೋಲಾದ ಶೇರುಗಳ ಖಾತೆ ಖರ್ಚು(1000×1) | | 1,000 | |
| | ಶೇರು ಬಂಡವಾಳ ಖಾತೆ ಜಮಾ (1000×10) | | | 10,000 |
| | (ಮುಟ್ಟುಗೋಲಾದ 1000 ಶೇರುಗಳನ್ನು ಶೇರಿಗೆ ₹ 9ರಂತೆ ಪೂರ್ಣ ಸಂದಾಯವೆಂದು ಮರು ಮಾರಾಟ ಮಾಡಲಾಯಿತು) | | | |
| 3. | ಮುಟ್ಟುಗೋಲಾದ ಶೇರುಗಳ ಖಾತೆ ಖರ್ಚು | | 4,000 | |
| | ಬಂಡವಾಳ ನಿಧಿ ಖಾತೆ ಜಮಾ | | | 4,000 |
| | (ಮುಟ್ಟುಗೋಲಾದ ಶೇರುಗಳ ಖಾತೆಯ ಜಮೆಯ ಶಿಲ್ಕನ್ನು ಬಂಡವಾಳ ನಿಧಿಯ ಖಾತೆಗೆ ವರ್ಗಾಯಿಸಿದ್ದು.) | | | |

**ನಿದರ್ಶನ 20.**

**X** ನಿಯಮಿತ ಕಂಪನಿಯು ಆನಂದ ಎಂಬುವವರು ಹೊಂದಿದ ₹ 50 ಮುಖಬೆಲೆಯ 10 ಸಾಮಾನ್ಯ ಶೇರುಗಳನ್ನು ಮುಟ್ಟುಗೋಲು ಹಾಕಿಕೊಂಡಿತು. ಕಂಪನಿಯು ಈ ಶೇರುಗಳನ್ನು ₹ 10 ಅಧಿಕ ಮೌಲ್ಯಕ್ಕೆ ಮಾರಾಟ ಮಾಡಿತು. ಶೇರುಗಳ ಮೇಲಿನ ಹಣವನ್ನು ಅರ್ಜಿಯ ಜೊತೆಗೆ ₹10 ಹಂಚಿಕೆ ಆದ ನಂತರ, ₹ 15 ಮೊದಲ ಹಾಗೂ ಅಂತಿಮ ಕರೆ ₹ 35 (ಪ್ರಿಮಿಯಂ ಸೇರಿಸಿ)ನೀಡಬೇಕೆಂದು ಸೂಚಿಸಿತು.

**ನಿರೂಪಣೆ :**

| | ವಿವರಣೆ | ಪಾ.ಖಾ | ಖರ್ಚು | ಜಮಾ |
|---|---|---|---|---|
| 1. | ಶೇರು ಬಂಡವಾಳ ಖಾತೆ ಖರ್ಚು (10×50) | | 500 | |
| | ಶೇರು ಪ್ರಿಮಿಯಂ ಖಾತೆ ಖರ್ಚು (10×10) | | 100 | |
| | ಶೇರುಗಳ ಮುಟ್ಟುಗೋಲು ಖಾತೆ ಜಮಾ (10×25) | | | 250 |
| | ಶೇರು ಮೊದಲ ಹಾಗೂ ಕೊನೆಯ ಕರೆಯ ಖಾತೆಯ ಜಮಾ (10×35) | | | 350 |
| | (10 ಶೇರುಗಳ ಮೇಲೆ ಮೊದಲ ಹಾಗೂ ಅಂತಿಮ ಕರೆಯ ಹಣ ಸಂದಾಯವಾಗದೇ ಇದ್ದುದಕ್ಕೆ ಅವುಗಳನ್ನು ಮುಟ್ಟುಗೋಲು ಹಾಕಿದ ಬಗ್ಗೆ) | | | |

| | | | | |
|---|---|---|---|---|
| 2. | ಬ್ಯಾಂಕಿನ ಖಾತೆ ಖರ್ಚು (10×40)<br>ಮುಟ್ಟುಗೋಲಾದ ಶೇರುಗಳ ಖಾತೆ ಖರ್ಚು(10×10)<br>ಶೇರು ಬಂಡವಾಳ ಖಾತೆ ಜಮಾ (500×10)<br>(ಮುಟ್ಟುಗೋಲಾದ 10 ಶೇರುಗಳನ್ನು ಶೇರಿಗೆ ₹ 40ರಂತೆ ಪೂರ್ಣ ಸಂದಾಯವೆಂದು ಮರು ಮಾರಾಟ ಮಾಡಲಾಯಿತು) | | 400<br>100 | <br><br>500 |
| 3. | ಮುಟ್ಟುಗೋಲಾದ ಶೇರುಗಳ ಖಾತೆ ಖರ್ಚು<br>ಬಂಡವಾಳ ನಿಧಿ ಖಾತೆ ಜಮಾ<br>(ಮುಟ್ಟುಗೋಲಾದ ಶೇರುಗಳ ಖಾತೆಯ ಜಮೆಯ ಸಿಲ್ಕನ್ನು ಬಂಡವಾಳ ನಿಧಿಯ ಖಾತೆಗೆ ವರ್ಗಾಯಿಸಲಾಯಿತು 250–100) | | 150 | <br>150 |

## ನಿದರ್ಶನ 21.

ಮೂನ್‌ಲೈಟ್ ಕಂಪನಿ ನಿಯಮಿತವು ₹ 10 ಮುಖಬೆಲೆಯ 40,000 ಸಾಮಾನ್ಯ ಶೇರುಗಳಲ್ಲಿ ವಿಭಾಗಿಸಲ್ಪಟ್ಟ ₹ 4,00,000 ಅಧಿಕೃತ ಬಂಡವಾಳವನ್ನು ಹೊಂದಿದೆ. ಅವುಗಳಲ್ಲಿ 30,000 ಶೇರುಗಳನ್ನು ಸಾರ್ವಜನಿಕರಿಗೆ ನೀಡಿತು. ಶೇರಿನ ಹಣವನ್ನು ಈ ಕೆಳಗಿನಂತೆ ಪಾವತಿಸಲು ಸೂಚಿಸಿತು.

₹ 3 ಅರ್ಜಿಯೊಂದಿಗೆ — ₹ 2 ಹಂಚಿಕೆಯಾದ ನಂತರ

₹ 3 ಮೊದಲ ಕರೆ — ₹ 2 ಅಂತಿಮ ಕರೆ

ಎಲ್ಲಾ ಶೇರುಗಳು ಕೊಳ್ಳಲ್ಪಟ್ಟವು. 2,000 ಶೇರುಗಳ ಮೇಲಿನ ಕೊನೆಯ ಕರೆಯ ಹಣ ಹೊರತುಪಡಿಸಿ, ಉಳಿದೆಲ್ಲ ಹಣವು ಸಂದಾಯವಾಯಿತು. ಕಂಪನಿಯು ಈ ಶೇರುಗಳನ್ನು ಮುಟ್ಟಗೋಲು ಹಾಕಿಕೊಂಡು ಶೇರಿಗೆ ₹ 7 ರಂತೆ ಪೂರ್ಣ ಸಂದಾಯವೆಂದು ಮರು ಬಿಡುಗಡೆ ಮಾಡಿತು.

ಈ ವ್ಯವಹಾರಗಳನ್ನು ಕಂಪನಿಯ ದಿನವಹಿಯಲ್ಲಿ ಬರೆಯಿರಿ.

**ನಿರೂಪಣೆ :** ಮೂನ್‌ಲೈಟ್ ಕಂಪನಿ ನಿಯಮಿತ ದಿನವಹಿ

| | ವಿವರಣೆ | ಪಾ.ಖಾ | ಖರ್ಚು | ಜಮಾ |
|---|---|---|---|---|
| 1 | ಬ್ಯಾಂಕಿನ ಖಾತೆಗೆ ಖರ್ಚು<br>ಸಾಮಾನ್ಯ ಶೇರುಗಳ ಅರ್ಜಿಯ ಖಾತೆಗೆ ಜಮಾ<br>(30,000 ಶೇರುಗಳ ಮೇಲೆ ಶೇರಿಗೆ ₹ 3ರಂತೆ ಅರ್ಜಿದಾರರಿಂದ ಅರ್ಜಿ ಹಣ ಪಡೆಯಲಾಯಿತು) | | 90,000 | <br>90,000 |
| 2 | ಸಾಮಾನ್ಯ ಶೇರುಗಳ ಅರ್ಜಿಯ ಖಾತೆಗೆ ಖರ್ಚು<br>ಸಾಮಾನ್ಯ ಶೇರು ಬಂಡವಾಳ ಖಾತೆಗೆ ಜಮಾ<br>(ಸಾಮಾನ್ಯ ಶೇರುಗಳ ಅರ್ಜಿಯ ಹಣವನ್ನು ಶೇರು ಬಂಡವಾಳ ಖಾತೆಗೆ ವರ್ಗಾಹಿಸಲಾಯಿತು.) | | 90,000 | <br>90,000 |
| 3 | ಸಾಮಾನ್ಯ ಶೇರುಗಳ ವಿತರಣೆ ಖಾತೆಗೆ ಖರ್ಚು<br>ಸಾಮಾನ್ಯ ಶೇರುಗಳ ಬಂಡವಾಳ ಖಾತೆಗೆ ಜಮಾ<br>(30,000 ಸಾಮಾನ್ಯ ಶೇರುಗಳನ್ನು ಹಂಚಿದ ನಂತರ ಪ್ರತಿ ಶೇರಿಗೆ ₹ 2ರಂತೆ ಹಂಚಿಕೆ ಹಣ ಕಳಿಸಿಕೊಡಲು ಶೇರುದಾರರಿಗೆ ಕೇಳಿಕೊಂಡ ಬಗೆ) | | 60,000 | <br>60,000 |

| | | | | |
|---|---|---|---|---|
| 4 | ಬ್ಯಾಂಕಿನ ಖಾತೆಗೆ ಖರ್ಚು<br>ಸಾಮಾನ್ಯ ಶೇರುಗಳ ವಿತರಣೆ ಖಾತೆಗೆ ಜಮಾ<br>(30,000 ಸಾಮಾನ್ಯ ಶೇರುಗಳ ಮೇಲೆ ಪ್ರತಿ ಶೇರಿಗೆ ₹ 2ರಂತೆ ಹಂಚಿಕೆ ಹಣ ಪಡೆಯಲಾಯಿತು.) | | 60,000 | 60,000 |
| 5 | ಸಾಮಾನ್ಯ ಶೇರುಗಳ ಪ್ರಥಮ ಕರೆಯ ಖಾತೆಗೆ ಖರ್ಚು<br>ಸಾಮಾನ್ಯ ಶೇರುಗಳ ಬಂಡವಾಳ ಖಾತೆಗೆ ಜಮಾ<br>(30,000 ಸಾಮಾನ್ಯ ಶೇರುಗಳ ಮೇಲೆ ಶೇರಿಗೆ 3 ರೂಗಳಂತೆ ಶೇರುದಾರರಿಗೆ ಪ್ರಥಮ ಕರೆಯ ಹಣ ಕಳಿಸಿಕೊಡಬೇಕೆಂದು ಕೇಳಿಕೊಳ್ಳಲಾಯಿತು.) | | 90,000 | 90,000 |
| 6 | ಬ್ಯಾಂಕಿನ ಖಾತೆಗೆ ಖರ್ಚು<br>ಸಾಮಾನ್ಯ ಶೇರುಗಳ ಪ್ರಥಮ ಕರೆಯ ಖಾತೆಗೆ ಜಮಾ<br>(30,000 ಸಾಮಾನ್ಯ ಶೇರುಗಳ ಮೇಲೆ ಶೇರಿಗೆ 3 ರೂಗಳಂತೆ ಪ್ರಥಮ ಕರೆಯ ಹಣ ಪಡೆಯಲಾಯಿತು.) | | 90,000 | 90,000 |
| 7 | ಸಾಮಾನ್ಯ ಶೇರುಗಳ ಅಂತಿಮ ಕರೆಯ ಖಾತೆಗೆ ಖರ್ಚು<br>ಸಾಮಾನ್ಯ ಶೇರುಗಳ ಬಂಡವಾಳ ಖಾತೆಗೆ ಜಮಾ<br>(30,000 ಸಾಮಾನ್ಯ ಶೇರುಗಳ ಮೇಲೆ ಶೇರಿಗೆ 2 ರೂಗಳಂತೆ ಶೇರುದಾರರಿಗೆ ಅಂತಿಮ ಕರೆಯ ಹಣ ಕಳಿಸಿಕೊಡಬೇಕೆಂದು ಕೇಳಿಕೊಳ್ಳಲಾಯಿತು.) | | 60,000 | 60,000 |
| 8 | ಬ್ಯಾಂಕಿನ ಖಾತೆಗೆ ಖರ್ಚು<br>ಸಾಮಾನ್ಯ ಶೇರುಗಳ ಅಂತಿಮ ಕರೆಯ ಖಾತೆಗೆ ಜಮಾ<br>(28,000 ಸಾಮಾನ್ಯ ಶೇರುಗಳ ಮೇಲೆ ಶೇರಿಗೆ 2 ರೂಗಳಂತೆ ಅಂತಿಮ ಕರೆಯ ಹಣ ಪಡೆಯಲಾಯಿತು.) | | 56,000 | 56,000 |
| 9. | ಸಾಮಾನ್ಯ ಶೇರು ಬಂಡವಾಳ ಖಾತೆ ಖರ್ಚು (2000×10)<br>ಶೇರುಗಳ ಮುಟ್ಟುಗೋಲು ಖಾತೆ ಜಮಾ (2000×8)<br>ಸಾಮಾನ್ಯ ಶೇರು ಅಂತಿಮ ಕರೆಯ ಖಾತೆಯ ಜಮಾ (2000×2)<br>(20000 ಶೇರುಗಳ ಮೇಲೆ ಅಂತಿಮ ಕರೆಯ ಹಣ ಸಂದಾಯವಾದುದೇ ಇದ್ದುದಕ್ಕೆ ಅವುಗಳನ್ನು ಮುಟ್ಟುಗೋಲು ಹಾಕಿದ ಬಗ್ಗೆ) | | 20,000 | 16,000<br>4,000 |
| 10. | ಬ್ಯಾಂಕಿನ ಖಾತೆಗೆ ಖರ್ಚು (2000×7)<br>ಮುಟ್ಟುಗೋಲಾದ ಶೇರುಗಳ ಖಾತೆ ಖರ್ಚು(2000×3)<br>ಸಾಮಾನ್ಯ ಶೇರು ಬಂಡವಾಳ ಖಾತೆ ಜಮಾ<br>(ಮುಟ್ಟುಗೋಲಾದ 2000 ಶೇರುಗಳನ್ನು ಶೇರಿಗೆ ₹ 7ರಂತೆ ಪೂರ್ಣ ಸಂದಾಯವೆಂದು ಮರು ಮಾರಾಟ ಮಾಡಲಾಯಿತು) | | 14,000<br>6,000 | 20,000 |
| 11. | ಮುಟ್ಟುಗೋಲಾದ ಶೇರುಗಳ ಖಾತೆ ಖರ್ಚು<br>ಬಂಡವಾಳ ನಿಧಿ ಖಾತೆ ಜಮಾ<br>(ಮುಟ್ಟುಗೋಲಾದ ಶೇರುಗಳ ಖಾತೆಯ ಜಮೆಯ ಶಿಲ್ಕನ್ನು ಬಂಡವಾಳ ನಿಧಿಯ ಖಾತೆಗೆ ವರ್ಗಾಯಿಸಿದ್ದು.) | | 10,000 | 10,000 |

## ನಿದರ್ಶನ 22.

**Z** ಕಂಪನಿ ನಿಯಮಿತ ಹುಬ್ಬಳ್ಳಿಯು ₹ 100 ಮುಖಬೆಲೆಯ 5,000 ಶೇರುಗಳನ್ನು ಸಾರ್ವಜನಿಕರಿಗೆ ಕೊಳ್ಳಲು ಆಹ್ವಾನಿಸಿತು. ಶೇರಿನ ಹಣವನ್ನು ಈ ಕೆಳಗಿನಂತೆ ಪಾವತಿಸಲು ಸೂಚಿಸಿತು.

₹ 20 ಅರ್ಜಿಯೊಂದಿಗೆ

₹ 30 ಹಂಚಿಕೆಯಾದ ನಂತರ

₹ 20 ಮೊದಲ ಕರೆ

₹ 30 ಅಂತಿಮ ಕರೆ

ಎಲ್ಲಾ ಶೇರುಗಳು ಕೊಳ್ಳಲ್ಪಟ್ಟವು. 500 ಶೇರುಗಳ ಮೇಲಿನ ಮೊದಲ ಕರೆಯ ಹಣ ಹಾಗೂ 1,000 ಶೇಉಗಳ ಮೇಲಿನ ಅಂತಿಮ ಕರೆಯ ಹಣ ಹೊರತುಪಡಿಸಿ, ಉಳಿದೆಲ್ಲ ಹಣವು ಸಂದಾಯವಾಯಿತು. ಈ ಶೇರುಗಳನ್ನು ಮುಟ್ಟುಗೋಲು ಹಾಕಿಕೊಂಡು ಶೇರಿಗೆ ₹ 90 ರಂತೆ ಪೂರ್ಣ ಸಂದಾಯವೆಂದು ಮರು ಬಿಡುಗಡೆ ಮಾಡಿತು.

ಈ ವ್ಯವಹಾರಗಳನ್ನು ಕಂಪನಿಯ ದಿನವಹಿಯಲ್ಲಿ ಬರೆಯಿರಿ.

**ನಿರೂಪಣೆ :**

**Z ಕಂಪನಿ ನಿಯಮಿತ ದಿನವಹಿ**

| | ವಿವರಣೆ | ಪಾ.ಖಾ | ಖರ್ಚು | ಜಮಾ |
|---|---|---|---|---|
| 1 | ಬ್ಯಾಂಕಿನ ಖಾತೆಗೆ ಖರ್ಚು | | 1,00,000 | |
| | ಶೇರುಗಳ ಅರ್ಜಿಯ ಖಾತೆಗೆ ಜಮಾ | | | 1,00,000 |
| | (5000 ಶೇರುಗಳ ಮೇಲೆ ಶೇರಿಗೆ ₹ 20ರಂತೆ ಅರ್ಜಿದಾರರಿಂದ ಅರ್ಜಿ ಹಣ ಪಡೆಯಲಾಯಿತು) | | | |
| 2 | ಶೇರುಗಳ ಅರ್ಜಿಯ ಖಾತೆಗೆ ಖರ್ಚು | | 1,00,000 | |
| | ಶೇರು ಬಂಡವಾಳ ಖಾತೆಗೆ ಜಮಾ | | | 1,00,000 |
| | (ಶೇರುಗಳ ಅರ್ಜಿಯ ಹಣವನ್ನು ಶೇರು ಬಂಡವಾಳ ಖಾತೆಗೆ ವರ್ಗಾಹಿಸಲಾಯಿತು.) | | | |
| 3 | ಶೇರುಗಳ ವಿತರಣೆ ಖಾತೆಗೆ ಖರ್ಚು(5000×30) | | 1,50,000 | |
| | ಶೇರು ಬಂಡವಾಳ ಖಾತೆಗೆ ಜಮಾ | | | 1,50,000 |
| | (5,000 ಶೇರುಗಳನ್ನು ಹಂಚಿದ ನಂತರ ಪ್ರತಿ ಶೇರಿಗೆ ₹ 30ರಂತೆ ಹಂಚಿಕೆ ಹಣ ಕಳಿಸಿಕೊಡಲು ಶೇರುದಾರರಿಗೆ ಕೇಳಿಕೊಂಡ ಬಗೆ) | | | |
| 4 | ಬ್ಯಾಂಕಿನ ಖಾತೆಗೆ ಖರ್ಚು | | 1,50,000 | |
| | ಶೇರುಗಳ ವಿತರಣೆ ಖಾತೆಗೆ ಜಮಾ | | | 1,50,000 |
| | (5,000 ಸಾಮಾನ್ಯ ಶೇರುಗಳ ಮೇಲೆ ಪ್ರತಿ ಶೇರಿಗೆ ₹ 30ರಂತೆ ಹಂಚಿಕೆ ಹಣ ಪಡೆಯಲಾಯಿತು.) | | | |

| | | | | |
|---|---|---|---|---|
| 5 | ಶೇರುಗಳ ಪ್ರಥಮ ಕರೆಯ ಖಾತೆಗೆ ಖರ್ಚು<br>ಶೇರು ಬಂಡವಾಳ ಖಾತೆಗೆ ಜಮಾ<br>(5,000 ಶೇರುಗಳ ಮೇಲೆ ಶೇರಿಗೆ 20 ₹ಗಳಂತೆ ಶೇರುದಾರರಿಗೆ ಪ್ರಥಮ ಕರೆಯ ಹಣ ಕಳಿಸಿಕೊಡಬೇಕೆಂದು ಕೇಳಿಕೊಳ್ಳಲಾಯಿತು.) | | 1,00,000 | <br>1,00,000 |
| 6 | ಬ್ಯಾಂಕಿನ ಖಾತೆಗೆ ಖರ್ಚು<br>ಶೇರುಗಳ ಪ್ರಥಮ ಕರೆಯ ಖಾತೆಗೆ ಜಮಾ<br>(4,500 ಶೇರುಗಳ ಮೇಲೆ ಶೇರಿಗೆ 20 ರೂಗಳಂತೆ ಪ್ರಥಮ ಕರೆಯ ಹಣ ಪಡೆಯಲಾಯಿತು.) | | 90,000 | <br>90,000 |
| 7 | ಶೇರುಗಳ ಅಂತಿಮ ಕರೆಯ ಖಾತೆಗೆ ಖರ್ಚು<br>ಶೇರುಗಳ ಬಂಡವಾಳ ಖಾತೆಗೆ ಜಮಾ<br>(5,000 ಶೇರುಗಳ ಮೇಲೆ ಶೇರಿಗೆ 30 ರೂಗಳಂತೆ ಶೇರುದಾರರಿಗೆ ಅಂತಿಮ ಕರೆಯ ಹಣ ಕಳಿಸಿಕೊಡಬೇಕೆಂದು ಕೇಳಿಕೊಳ್ಳಲಾಯಿತು.) | | 1,50,000 | <br>1,50,000 |
| 8 | ಬ್ಯಾಂಕಿನ ಖಾತೆಗೆ ಖರ್ಚು<br>ಶೇರುಗಳ ಅಂತಿಮ ಕರೆಯ ಖಾತೆಗೆ ಜಮಾ<br>(4,000 ಶೇರುಗಳ ಮೇಲೆ ಶೇರಿಗೆ 30 ರೂಗಳಂತೆ ಅಂತಿಮ ಕರೆಯ ಹಣ ಪಡೆಯಲಾಯಿತು.) | | 1,20,000 | <br>1,20,000 |
| 9. | ಶೇರು ಬಂಡವಾಳ ಖಾತೆ ಖರ್ಚು (1000×100)<br>ಶೇರುಗಳ ಮುಟ್ಟುಗೋಲು ಖಾತೆ ಜಮಾ (500×50) + (500×70)<br>ಶೇರು ಮೊದಲ ಖಾತೆ ಜಮಾ (500×20)<br>ಶೇರು ಕೊನೆಯ ಕರೆಯ ಖಾತೆಯ ಜಮಾ (1000×30)<br>(500 ಶೇರುಗಳ ಮೇಲೆ ಪ್ರಥಮ ಹಾಗೂ 1000 ಶೇರುಗಳ ಮೇಲಿನ ಅಂತಿಮ ಕರೆಯ ಹಣ ಸಂದಾಯವಾದುದೇ ಇದ್ದುದಕ್ಕೆ ಅವುಗಳನ್ನು ಮುಟ್ಟುಗೋಲು ಹಾಕಿದ ಬಗ್ಗೆ) | | 1,00,000 | <br>60,000<br>10,000<br>30,000 |
| 10. | ಬ್ಯಾಂಕಿನ ಖಾತೆ ಖರ್ಚು (1000×90)<br>ಮುಟ್ಟುಗೋಲಾದ ಶೇರುಗಳ ಖಾತೆ ಖರ್ಚು(1000×10)<br>ಶೇರು ಬಂಡವಾಳ ಖಾತೆ ಜಮಾ<br>(ಮುಟ್ಟುಗೋಲಾದ 1000 ಶೇರುಗಳನ್ನು ಶೇರಿಗೆ ₹ 90ರಂತೆ ಪೂರ್ಣ ಸಂದಾಯವೆಂದು ಮರು ಮಾರಾಟ ಮಾಡಲಾಯಿತು) | | 90,000<br>10,000 | <br><br>1,00,000 |
| 11. | ಮುಟ್ಟುಗೋಲಾದ ಶೇರುಗಳ ಖಾತೆ ಖರ್ಚು<br>ಬಂಡವಾಳ ನಿಧಿ ಖಾತೆ ಜಮಾ<br>(ಮುಟ್ಟುಗೋಲಾದ ಶೇರುಗಳ ಖಾತೆಯ ಜಮೆಯ ಸಿಲ್ಕನ್ನು ಬಂಡವಾಳ ನಿಧಿಯ ಖಾತೆಗೆ ವರ್ಗಾಯಿಸಿದ್ದು, 60,000–10,000) | | 50,000 | <br>50,000 |

## ನಿದರ್ಶನ 23.

ವಿಜಯ್ ಟ್ರೇಡಿಂಗ್ ಕಂಪನಿ ನಿಯಮಿತ ₹ 10 ಮುಖಬೆಲೆಯ 10,000 ಸಾಮಾನ್ಯ ಶೇರುಗಳನ್ನು ₹ 2 ಅಧಿಕ ಮೌಲ್ಯಕ್ಕೆ ಸಾರ್ವಜನಿಕರಿಗೆ ಕೊಳ್ಳಲು ಆಹ್ವಾನಿಸಿತು. ಶೇರಿನ ಹಣವನ್ನು ಈ ಕೆಳಗಿನಂತೆ ಪಾವತಿಸಲು ಸೂಚಿಸಿತು.

₹ 2 ಅರ್ಜಿಯೊಂದಿಗೆ

₹ 5 ಹಂಚಿಕೆಯಾದ ನಂತರ (ಪ್ರಿಮಿಯಂ ಸೇರಿ)

₹ 3 ಮೊದಲ ಕರೆ ಹಾಗೂ

₹ 2 ಅಂತಿಮ ಕರೆ

ಎಲ್ಲಾ ಶೇರುಗಳು ಕೊಳ್ಳಲ್ಪಟ್ಟವು. 1000 ಶೇರುಗಳ ಮೇಲಿನ ಅಂತಿಮ ಕರೆಯ ಹಣ ಹೊರತುಪಡಿಸಿ, ಉಳಿದೆಲ್ಲ ಹಣವು ಸಂದಾಯವಾಯಿತು. ಈ ಶೇರುಗಳನ್ನು ಮುಟ್ಟಗೋಲು ಹಾಕಿಕೊಂಡು ಶೇರಿಗೆ ₹ 8 ರಂತೆ ಪೂರ್ಣ ಸಂದಾಯವೆಂದು ಮರು ಬಿಡುಗಡೆ ಮಾಡಿತು.

ಈ ವ್ಯವಹಾರಗಳನ್ನು ಕಂಪನಿಯ ದಿನವಹಿಯಲ್ಲಿ ಬರೆಯಿರಿ.

**ನಿರೂಪಣೆ :**

### ವಿಜಯ್ ಟ್ರೇಡಿಂಗ್ ಕಂಪನಿ ನಿಯಮಿತ ದಿನವಹಿ

| | ವಿವರಣೆ | ಪಾ.ಖಾ | ಖರ್ಚು | ಜಮಾ |
|---|---|---|---|---|
| 1 | ಬ್ಯಾಂಕಿನ ಖಾತೆಗೆ ಖರ್ಚು | | 20,000 | |
| | ಸಾಮಾನ್ಯ ಶೇರುಗಳ ಅರ್ಜಿಯ ಖಾತೆಗೆ ಜಮಾ | | | 20,000 |
| | (10,000 ಶೇರುಗಳ ಮೇಲೆ ಶೇರಿಗೆ ₹ 2ರಂತೆ ಅರ್ಜಿದಾರರಿಂದ ಅರ್ಜಿ ಹಣ ಪಡೆಯಲಾಯಿತು) | | | |
| 2 | ಸಾಮಾನ್ಯ ಶೇರುಗಳ ಅರ್ಜಿಯ ಖಾತೆಗೆ ಖರ್ಚು | | 20,000 | |
| | ಸಾಮಾನ್ಯ ಶೇರು ಬಂಡವಾಳ ಖಾತೆಗೆ ಜಮಾ | | | 20,000 |
| | (ಸಾಮಾನ್ಯ ಶೇರುಗಳ ಅರ್ಜಿಯ ಹಣವನ್ನು ಶೇರು ಬಂಡವಾಳ ಖಾತೆಗೆ ವರ್ಗಾಹಿಸಲಾಯಿತು.) | | | |
| 3 | ಸಾಮಾನ್ಯ ಶೇರುಗಳ ವಿತರಣೆ ಖಾತೆಗೆ ಖರ್ಚು | | 50,000 | |
| | ಸಾಮಾನ್ಯ ಶೇರುಗಳ ಬಂಡವಾಳ ಖಾತೆಗೆ ಜಮಾ | | | 30,000 |
| | ಸೆಕ್ಯೂರಿಟಿ ಪ್ರಿಮಿಯಂ ಖಾತೆ ಜಮಾ | | | 20,000 |
| | (10,000 ಸಾಮಾನ್ಯ ಶೇರುಗಳನ್ನು ಹಂಚಿದ ನಂತರ ಪ್ರತಿ ಶೇರಿಗೆ ₹ 5ರಂತೆ ಹಂಚಿಕೆ ಹಣ ಪ್ರಿಮಿಯಂ ಕೂಡಿಸಿ ಕಳಿಸಿಕೊಡಲು ಶೇರುದಾರರಿಗೆ ಕೇಳಿಕೊಂಡ ಬಗ್ಗೆ) | | | |
| 4 | ಬ್ಯಾಂಕಿನ ಖಾತೆಗೆ ಖರ್ಚು | | 50,000 | |
| | ಸಾಮಾನ್ಯ ಶೇರುಗಳ ವಿತರಣೆ ಖಾತೆಗೆ ಜಮಾ | | | 50,000 |
| | (10,000 ಸಾಮಾನ್ಯ ಶೇರುಗಳ ಮೇಲೆ ಪ್ರತಿ ಶೇರಿಗೆ ₹ 5ರಂತೆ ಹಂಚಿಕೆ ಹಣ ಪಡೆಯಲಾಯಿತು.) | | | |

| | | | | |
|---|---|---|---|---|
| 5 | ಸಾಮಾನ್ಯ ಶೇರುಗಳ ಪ್ರಥಮ ಕರೆಯ ಖಾತೆಗೆ ಖರ್ಚು<br>ಸಾಮಾನ್ಯ ಶೇರುಗಳ ಬಂಡವಾಳ ಖಾತೆಗೆ ಜಮಾ<br>(10,000 ಸಾಮಾನ್ಯ ಶೇರುಗಳ ಮೇಲೆ ಶೇರಿಗೆ 3 ರೂಗಳಂತೆ ಶೇರುದಾರರಿಗೆ ಪ್ರಥಮ ಕರೆಯ ಹಣ ಕಳಿಸಿಕೊಡಬೇಕೆಂದು ಕೇಳಿಕೊಳ್ಳಲಾಯಿತು.) | | 30,000 | <br>30,000 |
| 6 | ಬ್ಯಾಂಕಿನ ಖಾತೆಗೆ ಖರ್ಚು<br>ಸಾಮಾನ್ಯ ಶೇರುಗಳ ಪ್ರಥಮ ಕರೆಯ ಖಾತೆಗೆ ಜಮಾ<br>(10,000 ಸಾಮಾನ್ಯ ಶೇರುಗಳ ಮೇಲೆ ಶೇರಿಗೆ 3 ರೂಗಳಂತೆ ಪ್ರಥಮ ಕರೆಯ ಹಣ ಪಡೆಯಲಾಯಿತು.) | | 30,000 | <br>30,000 |
| 7 | ಸಾಮಾನ್ಯ ಶೇರುಗಳ ಅಂತಿಮ ಕರೆಯ ಖಾತೆಗೆ ಖರ್ಚು<br>ಸಾಮಾನ್ಯ ಶೇರುಗಳ ಬಂಡವಾಳ ಖಾತೆಗೆ ಜಮಾ<br>(10,000 ಸಾಮಾನ್ಯ ಶೇರುಗಳ ಮೇಲೆ ಶೇರಿಗೆ 2 ರೂಗಳಂತೆ ಶೇರುದಾರರಿಗೆ ಅಂತಿಮ ಕರೆಯ ಹಣ ಕಳಿಸಿಕೊಡಬೇಕೆಂದು ಕೇಳಿಕೊಳ್ಳಲಾಯಿತು.) | | 20,000 | <br>20,000 |
| 8 | ಬ್ಯಾಂಕಿನ ಖಾತೆಗೆ ಖರ್ಚು<br>ಸಾಮಾನ್ಯ ಶೇರುಗಳ ಅಂತಿಮ ಕರೆಯ ಖಾತೆಗೆ ಜಮಾ<br>(9,000 ಸಾಮಾನ್ಯ ಶೇರುಗಳ ಮೇಲೆ ಶೇರಿಗೆ 2 ರೂಗಳಂತೆ ಅಂತಿಮ ಕರೆಯ ಹಣ ಪಡೆಯಲಾಯಿತು.) | | 18,000 | <br>18,000 |
| 9. | ಸಾಮಾನ್ಯ ಶೇರು ಬಂಡವಾಳ ಖಾತೆ ಖರ್ಚು (1000×10)<br>ಶೇರುಗಳ ಮುಟ್ಟುಗೋಲು ಖಾತೆಗೆ ಜಮಾ (1000×8)<br>ಸಾಮಾನ್ಯ ಶೇರು ಕೊನೆಯ ಕರೆಯ ಖಾತೆಗೆ ಜಮಾ (1000×2)<br>(1000 ಶೇರುಗಳ ಮೇಲೆ ಅಂತಿಮ ಕರೆಯ ಹಣ ಸಂದಾಯವಾಗದೇ ಇದ್ದುದಕ್ಕೆ ಅವುಗಳನ್ನು ಮುಟ್ಟುಗೋಲು ಹಾಕಿದ ಬಗ್ಗೆ) | | 10,000 | <br>8,000<br>2,000 |
| 10. | ಬ್ಯಾಂಕಿನ ಖಾತೆಗೆ ಖರ್ಚು (1000×8)<br>ಮುಟ್ಟುಗೋಲಾದ ಶೇರುಗಳ ಖಾತೆ ಖರ್ಚು(1000×2)<br>ಸಾಮಾನ್ಯ ಶೇರು ಬಂಡವಾಳ ಖಾತೆ ಜಮಾ<br>(ಮುಟ್ಟುಗೋಲಾದ 1000 ಶೇರುಗಳನ್ನು ಶೇರಿಗೆ ₹ 8ರಂತೆ ಪೂರ್ಣ ಸಂದಾಯವೆಂದು ಮರು ಮಾರಾಟ ಮಾಡಲಾಯಿತು) | | 8,000<br>2,000 | <br><br>10,000 |
| 11. | ಮುಟ್ಟುಗೋಲಾದ ಶೇರುಗಳ ಖಾತೆ ಖರ್ಚು<br>ಬಂಡವಾಳ ನಿಧಿ ಖಾತೆ ಜಮಾ<br>(ಮುಟ್ಟುಗೋಲಾದ ಶೇರುಗಳ ಖಾತೆಯ ಜಮೆಯ ಶಿಲ್ಕನ್ನು ಬಂಡವಾಳ ನಿಧಿಯ ಖಾತೆಗೆ ವರ್ಗಾಯಿಸಿದ್ದು.) | | 6,000 | <br>6,000 |

## ನಿದರ್ಶನ 24.

**A** ಕಂಪನಿ ನಿಯಮಿತವು 100 ಮುಖಬೆಲೆಯ 5,000 ಸಾಮಾನ್ಯ ಶೇರುಗಳನ್ನು 10% ಸೋಡಿಗೆ (ಸೋಡಿಯನ್ನು ಹಂಚಿಕೆಯ ಸಮಯದಲ್ಲಿ ದಾಖಲಿಸುವುದು) ನೀಡಿತು. ಹಣವನ್ನು ಈ ಕೆಳಗಿನಂತೆ ಪಾವತಿಸಲು ಸೂಚಿಸಿತು.

₹ 20 ಅರ್ಜಿಯೊಂದಿಗೆ

₹ 20 ಹಂಚಿಕೆಯಾದ ನಂತರ (ಪ್ರಿಮಿಯಂ ಸೇರಿ)

₹ 25 ಮೊದಲ ಕರೆ ಹಾಗೂ

₹ 25 ಅಂತಿಮ ಕರೆ

ಎಲ್ಲಾ ಶೇರುಗಳು ಕೊಳ್ಳಲ್ಪಟ್ಟವು. X ಎಂಬುವವರು ಹೊಂದಿದ 100 ಶೇರುಗಳ ಮೇಲಿನ ಅಂತಿಮ ಕರೆಯ ಹಣ ಬಾಕಿ ನಿಂತಿತು. ಅವರ ಶೇರುಗಳನು ರದ್ದುಪಡಿಸಿ, ರೂ. 70 ಪೂರ್ಣ ಸಂದಾಯವೆಂದು Y ಎಂಬುವವರಿಗೆ ಮರು ಹಂಚಿಕೆ ಮಾಡಲಾಯಿತು.

ಈ ವ್ಯವಹಾರಗಳನ್ನು ಕಂಪನಿಯ ದಿನವಹಿಯಲ್ಲಿ ಬರೆಯಿರಿ.

**ನಿರೂಪಣೆ :**

**A ಕಂಪನಿ ನಿಯಮಿತ ದಿನವಹಿ**

| | ವಿವರಣೆ | ಪಾ.ಖಾ | ಖರ್ಚು | ಜಮಾ |
|---|---|---|---|---|
| 1 | ಬ್ಯಾಂಕಿನ ಖಾತೆಗೆ ಖರ್ಚು<br>ಸಾಮಾನ್ಯ ಶೇರುಗಳ ಅರ್ಜಿಯ ಖಾತೆಗೆ ಜಮಾ<br>(5,000 ಶೇರುಗಳ ಮೇಲೆ ಶೇರಿಗೆ ₹ 20ರಂತೆ ಅರ್ಜಿದಾರರಿಂದ ಅರ್ಜಿ ಹಣ ಪಡೆಯಲಾಯಿತು) | | 1,00,000 | 1,00,000 |
| 2 | ಸಾಮಾನ್ಯ ಶೇರುಗಳ ಅರ್ಜಿಯ ಖಾತೆಗೆ ಖರ್ಚು<br>ಸಾಮಾನ್ಯ ಶೇರು ಬಂಡವಾಳ ಖಾತೆಗೆ ಜಮಾ<br>(ಸಾಮಾನ್ಯ ಶೇರುಗಳ ಅರ್ಜಿಯ ಹಣವನ್ನು ಶೇರು ಬಂಡವಾಳ ಖಾತೆಗೆ ವರ್ಗಾಹಿಸಲಾಯಿತು.) | | 1,00,000 | 1,00,000 |
| 3 | ಸಾಮಾನ್ಯ ಶೇರುಗಳ ವಿತರಣೆ ಖಾತೆಗೆ ಖರ್ಚು<br>ಶೇರು ಸೋಡಿ ಖಾತೆಗೆ ಖರ್ಚು<br>ಸಾಮಾನ್ಯ ಶೇರು ಬಂಡವಾಳ ಖಾತೆಗೆ ಜಮಾ<br>(5,000 ಸಾಮಾನ್ಯ ಶೇರುಗಳನ್ನು ಹಂಚಿದ ನಂತರ ಪ್ರತಿ ಶೇರಿಗೆ ₹ 20ರಂತೆ ಹಂಚಿಕೆ ಹಣ ಕಳಿಸಿಕೊಡಲು ಶೇರುದಾರರಿಗೆ ಕೇಳಿಕೊಂಡ ಬಗ್ಗೆ) | | 1,00,000<br>50,000 | 1,50,000 |
| 4 | ಬ್ಯಾಂಕಿನ ಖಾತೆಗೆ ಖರ್ಚು<br>ಸಾಮಾನ್ಯ ಶೇರುಗಳ ವಿತರಣೆ ಖಾತೆಗೆ ಜಮಾ<br>(5,000 ಸಾಮಾನ್ಯ ಶೇರುಗಳ ಮೇಲೆ ಪ್ರತಿ ಶೇರಿಗೆ ₹ 20ರಂತೆ ಹಂಚಿಕೆ ಹಣ ಪಡೆಯಲಾಯಿತು.) | | 1,00,000 | 1,00,000 |

| | | | | |
|---|---|---|---|---|
| 5 | ಸಾಮಾನ್ಯ ಶೇರುಗಳ ಪ್ರಥಮ ಕರೆಯ ಖಾತೆಗೆ ಖರ್ಚು<br>ಸಾಮಾನ್ಯ ಶೇರು ಬಂಡವಾಳ ಖಾತೆಗೆ ಜಮಾ<br>(5,000 ಸಾಮಾನ್ಯ ಶೇರುಗಳ ಮೇಲೆ ಶೇರಿಗೆ 25 ರೂಗಳಂತೆ ಶೇರುದಾರರಿಗೆ ಪ್ರಥಮ ಕರೆಯ ಹಣ ಕಳಿಸಿಕೊಡಬೇಕೆಂದು ಕೇಳಿಕೊಳ್ಳಲಾಯಿತು.) | | 1,25,000 | <br>1,25,000 |
| 6 | ಬ್ಯಾಂಕಿನ ಖಾತೆಗೆ ಖರ್ಚು<br>ಸಾಮಾನ್ಯ ಶೇರುಗಳ ಪ್ರಥಮ ಕರೆಯ ಖಾತೆಗೆ ಜಮಾ<br>(5,000 ಸಾಮಾನ್ಯ ಶೇರುಗಳ ಮೇಲೆ ಶೇರಿಗೆ 25 ರೂಗಳಂತೆ ಪ್ರಥಮ ಕರೆಯ ಹಣ ಪಡೆಯಲಾಯಿತು.) | | 1,25,000 | <br>1,25,000 |
| 7 | ಸಾಮಾನ್ಯ ಶೇರುಗಳ ಅಂತಿಮ ಕರೆಯ ಖಾತೆಗೆ ಖರ್ಚು<br>ಸಾಮಾನ್ಯ ಶೇರು ಬಂಡವಾಳ ಖಾತೆಗೆ ಜಮಾ<br>(5,000 ಸಾಮಾನ್ಯ ಶೇರುಗಳ ಮೇಲೆ ಶೇರಿಗೆ 25 ರೂಗಳಂತೆ ಶೇರುದಾರರಿಗೆ ಅಂತಿಮ ಕರೆಯ ಹಣ ಕಳಿಸಿಕೊಡಬೇಕೆಂದು ಕೇಳಿಕೊಳ್ಳಲಾಯಿತು.) | | 1,25,000 | <br>1,25,000 |
| 8 | ಬ್ಯಾಂಕಿನ ಖಾತೆಗೆ ಖರ್ಚು<br>ಸಾಮಾನ್ಯ ಶೇರುಗಳ ಅಂತಿಮ ಕರೆಯ ಖಾತೆಗೆ ಜಮಾ<br>(4,900 ಸಾಮಾನ್ಯ ಶೇರುಗಳ ಮೇಲೆ ಶೇರಿಗೆ 25 ರೂಗಳಂತೆ ಅಂತಿಮ ಕರೆಯ ಹಣ ಪಡೆಯಲಾಯಿತು.) | | 1,22,500 | <br>1,22,500 |
| 9. | ಸಾಮಾನ್ಯ ಶೇರು ಬಂಡವಾಳ ಖಾತೆ ಖರ್ಚು (100×100)<br>ಶೇರು ಸೋಡಿ ಖಾತೆಗೆ ಜಮಾ (100×10)<br>ಶೇರುಗಳ ಮುಟ್ಟುಗೋಲು ಖಾತೆ ಜಮಾ (100×65)<br>ಸಾಮಾನ್ಯ ಶೇರು ಕೊನೆಯ ಕರೆಯ ಖಾತೆಗೆ ಜಮಾ (100×25)<br>(100 ಶೇರುಗಳ ಮೇಲೆ ಅಂತಿಮ ಕರೆಯ ಹಣ ₹ 25 ಸಂದಾಯವಾಗದೇ ಇದ್ದುದಕ್ಕೆ ಅವುಗಳನ್ನು ಮುಟ್ಟುಗೋಲು ಹಾಕಿದ ಬಗ್ಗೆ) | | 10,000 | <br>1,000<br>6,500<br>2,500 |
| 10. | ಬ್ಯಾಂಕಿನ ಖಾತೆಗೆ ಖರ್ಚು (100×70)<br>ಮುಟ್ಟುಗೋಲಾದ ಶೇರುಗಳ ಖಾತೆ ಖರ್ಚು (100×30)<br>ಸಾಮಾನ್ಯ ಶೇರು ಬಂಡವಾಳ ಖಾತೆ ಜಮಾ<br>(ಮುಟ್ಟುಗೋಲಾದ 100 ಶೇರುಗಳನ್ನು ಶೇರಿಗೆ ₹ 70ರಂತೆ ಪೂರ್ಣ ಸಂದಾಯವೆಂದು ಮರು ಮಾರಾಟ ಮಾಡಲಾಯಿತು) | | 7,000<br>3,000 | <br><br>10,000 |
| 11. | ಮುಟ್ಟುಗೋಲಾದ ಶೇರುಗಳ ಖಾತೆ ಖರ್ಚು<br>ಬಂಡವಾಳ ನಿಧಿ ಖಾತೆ ಜಮಾ<br>(ಮುಟ್ಟುಗೋಲಾದ ಶೇರುಗಳ ಖಾತೆಯ ಜಮೆಯ ಸಿಲ್ಕನ್ನು ಬಂಡವಾಳ ನಿಧಿಯ ಖಾತೆಗೆ ವರ್ಗಾಯಿಸಿದ್ದು, 6,500–3,000) | | 3,500 | <br>3,500 |

## ನಿದರ್ಶನ 25.

ಗಾಮಾ ಕಂಪನಿ ನಿಯಮಿತವು ₹ 10 ಮುಖಬೆಲೆಯ 1,00,000 ಸಾಮಾನ್ಯ ಶೇರುಗಳನ್ನು ₹ 2 ಅಧಿಕ ಮೌಲ್ಯಕ್ಕೆ ನೀಡಿತು. ಶೇರುಗಳ ಹಣವನ್ನು ಈ ಕೆಳಗಿನಂತೆ ಪಾವತಿಸಲು ಸೂಚಿಸಿತು.

₹ 5 ಅರ್ಜಿಯೊಂದಿಗೆ

₹ 4 ಹಂಚಿಕೆಯಾದ ನಂತರ (ಪ್ರಿಮಿಯಂ ಸೇರಿ)

₹ 3 ಮೊದಲ ಹಾಗೂ ಅಂತಿಮ ಕರೆ

ಎಲ್ಲಾ ಶೇರುಗಳು ಕೊಳ್ಳಲ್ಪಟ್ಟವು. **y** ಎಂಬುವವರು ಖರೀದಿಸಿದ 1,400 ಶೇರುಗಳ ಮೇಲಿನ ಪ್ರಥಮ ಹಾಗೂ ಅಂತಿಮ ಕರೆಯ ಹಣ ಬಾಕಿ ನಿಂತಿತು. ಅವರ ಶೇರುಗಳನ್ನು ರದ್ದುಪಡಿಸಿ, ₹ 8 ಪೂರ್ಣ ಸಂದಾಯವೆಂದು **z** ಎಂಬುವವರಿಗೆ ಮರು ಹಂಚಿಕೆ ಮಾಡಲಾಯಿತು.

ಈ ವ್ಯವಹಾರಗಳನ್ನು ಕಂಪನಿಯ ದಿನವಹಿಯಲ್ಲಿ ಬರೆಯಿರಿ.

**ನಿರೂಪಣೆ :**

**ಗಾಮಾ ಕಂಪನಿ ನಿಯಮಿತ ದಿನವಹಿ**

| | ವಿವರಣೆ | ಖಾ.ಖಾ | ಖರ್ಚು | ಜಮಾ |
|---|---|---|---|---|
| 1 | ಬ್ಯಾಂಕಿನ ಖಾತೆಗೆ ಖರ್ಚು<br>ಸಾಮಾನ್ಯ ಶೇರುಗಳ ಅರ್ಜಿಯ ಖಾತೆಗೆ ಜಮಾ<br>(1,00,000 ಶೇರುಗಳ ಮೇಲೆ ಶೇರಿಗೆ ₹ 5ರಂತೆ ಅರ್ಜಿದಾರರಿಂದ ಅರ್ಜಿ ಹಣ ಪಡೆಯಲಾಯಿತು) | | 5,00,000 | <br>5,00,000 |
| 2 | ಸಾಮಾನ್ಯ ಶೇರುಗಳ ಅರ್ಜಿಯ ಖಾತೆಗೆ ಖರ್ಚು<br>ಸಾಮಾನ್ಯ ಶೇರು ಬಂಡವಾಳ ಖಾತೆಗೆ ಜಮಾ<br>(ಸಾಮಾನ್ಯ ಶೇರುಗಳ ಅರ್ಜಿಯ ಹಣವನ್ನು ಶೇರು ಬಂಡವಾಳ ಖಾತೆಗೆ ವರ್ಗಾಹಿಸಲಾಯಿತು.) | | 5,00,000 | <br>5,00,000 |
| 3 | ಸಾಮಾನ್ಯ ಶೇರುಗಳ ವಿತರಣೆ ಖಾತೆಗೆ ಖರ್ಚು<br>ಸಾಮಾನ್ಯ ಶೇರುಗಳ ಬಂಡವಾಳ ಖಾತೆಗೆ ಜಮಾ<br>ಸೆಕ್ಯೂರಿಟಿ ಪ್ರಿಮಿಯಂ ಖಾತೆಗೆ ಜಮಾ<br>(1,00,000 ಸಾಮಾನ್ಯ ಶೇರುಗಳನ್ನು ಹಂಚಿದ ನಂತರ ಪ್ರತಿ ಶೇರಿಗೆ ₹ 2ರಂತೆ ಹಂಚಿಕೆ ಹಣ ಮತ್ತು ರೂ 2 ಪ್ರಿಮಿಯಂ ಕಳಿಸಿಕೊಡಲು ಶೇರುದಾರರಿಗೆ ಕೇಳಿಕೊಂಡ ಬಗ್ಗೆ) | | 4,00,000 | <br>2,00,000<br>2,00,000 |
| 4 | ಬ್ಯಾಂಕಿನ ಖಾತೆಗೆ ಖರ್ಚು<br>ಸಾಮಾನ್ಯ ಶೇರುಗಳ ವಿತರಣೆ ಖಾತೆಗೆ ಜಮಾ<br>(10,000 ಸಾಮಾನ್ಯ ಶೇರುಗಳ ಮೇಲೆ ಪ್ರತಿ ಶೇರಿಗೆ ₹ 4ರಂತೆ ಹಂಚಿಕೆ ಹಣ ಪಡೆಯಲಾಯಿತು.) | | 4,00,000 | <br>4,00,000 |

| | | | | |
|---|---|---|---|---|
| 5 | ಸಾಮಾನ್ಯ ಶೇರು ಪ್ರಥಮ ಹಾಗೂ ಅಂತಿಮ ಕರೆಯ ಖಾತೆಗೆ ಖರ್ಚು<br>ಸಾಮಾನ್ಯ ಶೇರು ಬಂಡವಾಳ ಖಾತೆಗೆ ಜಮಾ<br>(1,00,000 ಸಾಮಾನ್ಯ ಶೇರುಗಳ ಮೇಲೆ ಶೇರಿಗೆ 3 ₹ಗಳಂತೆ ಶೇರುದಾರರಿಗೆ ಪ್ರಥಮ ಹಾಗೂ ಅಂತಿಮ ಕರೆಯ ಹಣ ಕಳಿಸಿಕೊಡಬೇಕೆಂದು ಕೇಳಿಕೊಳ್ಳಲಾಯಿತು.) | | 3,00,000 | <br>3,00,000 |
| 6 | ಬ್ಯಾಂಕಿನ ಖಾತೆಗೆ ಖರ್ಚು<br>ಸಾಮಾನ್ಯ ಶೇರು ಪ್ರಥಮ ಹಾಗೂ ಅಂತಿಮ ಕರೆಯ ಖಾತೆಜಮಾ<br>(98,600 ಸಾಮಾನ್ಯ ಶೇರುಗಳ ಮೇಲೆ ಶೇರಿಗೆ 3 ರೂಗಳಂತೆ ಪ್ರಥಮ ಹಾಗೂ ಅಂತಿಮ ಕರೆಯ ಹಣ ಪಡೆಯಲಾಯಿತು.) | | 2,95,800 | <br>2,95,800 |
| 7. | ಸಾಮಾನ್ಯ ಶೇರು ಬಂಡವಾಳ ಖಾತೆ ಖರ್ಚು (1,400×10)<br>ಶೇರುಗಳ ಮುಟ್ಟುಗೋಲು ಖಾತೆ ಜಮಾ 1,400 × 7<br>ಸಾಮಾನ್ಯ ಶೇರು ಮೊದಲ ಹಾಗೂ ಅಂತಿಮ ಕರೆಯ ಖಾತೆಯ ಜಮಾ (1400×3)<br>(ಶೇರುಗಳ ಮೇಲಿನ ಹಂಚಿಕೆಯ ಹಣ ಹಾಗೂ 1,400 ಶೇರುಗಳ ಮೇಲಿನ ಪ್ರಥಮ ಹಾಗೂ ಅಂತಿಮ ಕರೆಯ ಹಣ ಪಾವತಿಸದಿದ್ದಕ್ಕೆ ಈ ಶೇರುಗಳನ್ನು ಮುಟ್ಟುಗೋಲು ಹಾಕಿದ ಬಗ್ಗೆ) | | 14,000 | <br>9,800<br>4,200 |
| 8. | ಬ್ಯಾಂಕಿನ ಖಾತೆಯ ಖರ್ಚು (1,400×8)<br>ಮುಟ್ಟುಗೋಲಾದ ಶೇರುಗಳ ಖಾತೆ ಖರ್ಚು (1400×2)<br>ಸಾಮಾನ್ಯ ಶೇರು ಬಂಡವಾಳ ಖಾತೆ ಜಮಾ<br>(ಮುಟ್ಟುಗೋಲಾದ 1400 ಶೇರುಗಳನ್ನು ₹ 8ರಂತೆ ಪೂರ್ಣ ಸಂದಾಯವೆಂದು ಮರು ಮಾರಾಟ ಮಾಡಲಾಯಿತು) | | 11,200<br>2,800 | <br><br>14,000 |
| 9. | ಮುಟ್ಟುಗೋಲಾದ ಶೇರುಗಳ ಖಾತೆ ಖರ್ಚು<br>ಬಂಡವಾಳ ನಿಧಿ ಖಾತೆ ಜಮಾ<br>(ಮುಟ್ಟುಗೋಲಾದ ಶೇರುಗಳ ಖಾತೆಯ ಜಮೆಯ ಸಿಲ್ಕ್‌ನ್ನು ಬಂಡವಾಳ ನಿಧಿಯ ಖಾತೆಗೆ ವರ್ಗಾಯಿಸಿದ್ದು. 6,500–3,000) | | 7,000 | <br>7,000 |

## ನಿದರ್ಶನ 26.

**B** ಕಂಪನಿ ನಿಯಮಿತವು ₹ 100 ಮುಖಬೆಲೆಯ 10,000 ಸಾಮಾನ್ಯ ಶೇರುಗಳನ್ನು ₹ 10 ಅಧಿಕ ಮೌಲ್ಯಕ್ಕೆ ನೀಡಿತು. ಶೇರುಗಳ ಹಣವನ್ನು ಈ ಕೆಳಗಿನಂತೆ ಪಾವತಿಸಲು ಸೂಚಿಸಿತು.

₹ 20 ಅರ್ಜಿಯೊಂದಿಗೆ

₹ 40 ಹಂಚಿಕೆಯಾದ ನಂತರ (ಪ್ರಿಮಿಯಂ ಸೇರಿ)

₹ 30 ಮೊದಲ ಕರೆ

₹ 20 ಅಂತಿಮ ಕರೆ

ಎಲ್ಲಾ ಶೇರುಗಳು ಕೊಳ್ಳಲ್ಪಟ್ಟವು. 13,000 ಶೇರುಗಳಿಗೆ ಅರ್ಜಿಗಳು ಬಂದವು. 2,000 ಶೇರುಗಳ ಅರ್ಜಿಗಳನ್ನು ತಿರಸ್ಕರಿಸಿ ಅರ್ಜಿಯ ಹಣವನ್ನು ಹಿಂದಿರುಗಿಸಲಾಗಿತು. ಉಳಿದ 11,000 ಶೇರುಗಳ ಅರ್ಜಿಗಳಿಗೆ 10,000 ಶೇರುಗಳನ್ನು ಹಂಚಿಕೆ ಮಾಡಲಾಯಿತು. ಹೆಚ್ಚುವರಿ ಅರ್ಜಿಯ ಹಣವನ್ನು ಹಂಚಿಕೆ ಖಾತೆಗೆ ಹೊಂದಾಣಿಕೆ ಮಾಡಿಕೊಳ್ಳಲಾಯಿತು. 300 ಶೇರುಗಳ ಅಂತಿಮ ಕರೆಯ ಹಣವನ್ನು ಹೊರತುಪಡಿಸಿ ಉಳಿದೆಲ್ಲ ಶೇರುಗಳ ಮೇಲಿನ ಹಣವನ್ನು ಸ್ವೀಕರಿಸಲಾಯಿತು. ನಿರ್ದೇಶಕರು ಈ 300 ಶೇರುಗಳನ್ನು ಮುಟ್ಟುಗೋಲು ಹಾಕಿಕೊಂಡು ₹ 85ಕ್ಕೆ ಪೂರ್ಣಸಂದಾಯವೆಂದು ಮರುಮಾರಾಟ ಮಾಡಿದರು.

ಈ ವ್ಯವಹಾರಗಳನ್ನು ಕಂಪನಿಯ ದಿನವಹಿಯಲ್ಲಿ ಬರೆಯಿರಿ.

**ನಿರೂಪಣೆ :** **B ಕಂಪನಿ ನಿಯಮಿತ ದಿನವಹಿ**

| | ವಿವರಣೆ | ಪಾ.ಖಾ | ಖರ್ಚು | ಜಮಾ |
|---|---|---|---|---|
| 1 | ಬ್ಯಾಂಕಿನ ಖಾತೆಗೆ ಖರ್ಚು | | 2,60,000 | |
| | ಸಾಮಾನ್ಯ ಶೇರುಗಳ ಅರ್ಜಿಯ ಖಾತೆಗೆ ಜಮಾ | | | 2,60,000 |
| | (13,000 ಶೇರುಗಳ ಮೇಲೆ ಶೇರಿಗೆ ₹ 20ರಂತೆ ಅರ್ಜಿದಾರರಿಂದ ಅರ್ಜಿ ಹಣ ಪಡೆಯಲಾಯಿತು) | | | |
| 2 | ಸಾಮಾನ್ಯ ಶೇರುಗಳ ಅರ್ಜಿಯ ಖಾತೆಗೆ ಖರ್ಚು | | 2,00,000 | |
| | ಸಾಮಾನ್ಯ ಶೇರು ಬಂಡವಾಳ ಖಾತೆಗೆ ಜಮಾ | | | 2,,00,000 |
| | (10,000 ಸಾಮಾನ್ಯ ಶೇರುಗಳ ಅರ್ಜಿಯ ಹಣವನ್ನು ಶೇರು ಬಂಡವಾಳ ಖಾತೆಗೆ ವರ್ಗಾಹಿಸಲಾಯಿತು.) | | | |
| 3 | ಸಾಮಾನ್ಯ ಶೇರುಗಳ ವಿತರಣೆ ಖಾತೆಗೆ ಖರ್ಚು (10,000×40) | | 4,00,000 | |
| | ಸಾಮಾನ್ಯ ಶೇರುಗಳ ಬಂಡವಾಳ ಖಾತೆಗೆ ಜಮಾ (10,000×30) | | | 3,00,000 |
| | ಸೆಕ್ಯೂರಿಟಿ ಪ್ರಿಮಿಯಂ ಖಾತೆ ಜಮಾ (10,000×10) | | | 1,00,000 |
| | (10,000 ಸಾಮಾನ್ಯ ಶೇರುಗಳನ್ನು ಹಂಚಿದ ನಂತರ ಪ್ರತಿ ಶೇರಿಗೆ ₹ 40ರಂತೆ ಹಂಚಿಕೆ ಹಣ ಪ್ರಿಮಿಯಂ ಕೂಡಿಸಿ ಕಳಿಸಿಕೊಡಲು ಶೇರುದಾರರಿಗೆ ಕೇಳಿಕೊಂಡ ಬಗ್ಗೆ) | | | |
| 4 | ಸಾಮಾನ್ಯ ಶೇರುಗಳ ಅರ್ಜಿ ಖಾತೆಗೆ ಖರ್ಚು | | 40,000 | |
| | ಬ್ಯಾಂಕಿನ ಖಾತೆಗೆ ಜಮಾ | | | 40,000 |
| | (2,000 ಶೇರುಗಳ ತಿರಸ್ಕೃತ ಅರ್ಜಿಗಳ ಹಣವನ್ನು ಹಿಂದಿರುಗಿಸಲಾಯಿತು.) | | | |

| | | | | |
|---|---|---|---|---|
| 5. | ಸಾಮಾನ್ಯ ಶೇರುಗಳ ಅರ್ಜಿ ಖಾತೆಗೆ ಖರ್ಚು<br>ಸಾಮಾನ್ಯ ಶೇರುಗಳ ವಿತರಣೆ ಖಾತೆಗೆ ಜಮಾ<br>(ಭಾಗಶಃ ಹಂಚಿಕೆ ಮಾಡಲಾದ ಶೇರುಗಳ ಅರ್ಜಿಯ ಹಣವನ್ನು ವಿತರಣೆ ಖಾತೆಗೆ ವರ್ಗಾಯಿಸಲಾಯಿತು.) | | 20,000 | <br>20,000 |
| 6 | ಬ್ಯಾಂಕಿನ ಖಾತೆಗೆ ಖರ್ಚು<br>ಸಾಮಾನ್ಯ ಶೇರುಗಳ ವಿತರಣೆ ಖಾತೆಗೆ ಜಮಾ<br>(ಸಾಮಾನ್ಯ ಶೇರುಗಳ ವಿತರಣೆಯ ಹಣ ಪಡೆಯಲಾಯಿತು.) | | 3,80,000 | <br>3,80,000 |
| 7 | ಸಾಮಾನ್ಯ ಶೇರುಗಳ ಪ್ರಥಮ ಕರೆಯ ಖಾತೆಗೆ ಖರ್ಚು<br>ಸಾಮಾನ್ಯ ಶೇರುಗಳ ಬಂಡವಾಳ ಖಾತೆಗೆ ಜಮಾ<br>(10,000 ಸಾಮಾನ್ಯ ಶೇರುಗಳ ಮೇಲೆ ಶೇರಿಗೆ 30 ರೂಗಳಂತೆ ಶೇರುದಾರರಿಗೆ ಅಂತಿಮ ಕರೆಯ ಹಣ ಕಳಿಸಿಕೊಡಬೇಕೆಂದು ಕೇಳಿಕೊಳ್ಳಲಾಯಿತು.) | | 3,00,000 | <br>3,00,000 |
| 8 | ಬ್ಯಾಂಕಿನ ಖಾತೆಗೆ ಖರ್ಚು<br>ಸಾಮಾನ್ಯ ಶೇರುಗಳ ಪ್ರಥಮ ಕರೆಯ ಖಾತೆಗೆ ಜಮಾ<br>(10,000 ಸಾಮಾನ್ಯ ಶೇರುಗಳ ಮೇಲೆ ಶೇರಿಗೆ 30 ರೂಗಳಂತೆ ಅಂತಿಮ ಕರೆಯ ಹಣ ಪಡೆಯಲಾಯಿತು.) | | 3,00,000 | <br>300,000 |
| 9. | ಸಾಮಾನ್ಯ ಶೇರು ಅಂತಿಮ ಕರೆ ಖಾತೆ ಖರ್ಚು<br>ಸಾಮಾನ್ಯ ಶೇರು ಬಂಡವಾಳ ಖಾತೆ ಜಮಾ (1000×10)<br>(10,000 ಶೇರುಗಳ ಮೇಲಿನ ಅಂತಿಮ ಕರೆ ಹಣ ಶೇರಿಗೆ ₹ 20ರಂತೆ ಪಾವತಿಸಲು ಸೂಚಿಸಲಾಯಿತು.) | | <br>2,00,000 | <br><br>2,00,000 |
| 10. | ಬ್ಯಾಂಕಿನ ಖಾತೆಗೆ ಖರ್ಚು<br>ಸಾಮಾನ್ಯ ಶೇರುಗಳ ಅಂತಿಮ ಕರೆಯ ಖಾತೆಗೆ ಜಮಾ<br>(9,700 ಸಾಮಾನ್ಯ ಶೇರುಗಳ ಮೇಲೆ ಶೇರಿಗೆ 20 ರೂಗಳಂತೆ ಅಂತಿಮ ಕರೆಯ ಹಣ ಪಡೆಯಲಾಯಿತು.) | | 1,94,000 | <br>1,94,000 |
| 11. | ಸಾಮಾನ್ಯ ಶೇರು ಬಂಡವಾಳ ಖಾತೆ ಖರ್ಚು (300×100)<br>ಶೇರುಗಳ ಮುಟ್ಟುಗೋಲು ಖಾತೆ ಜಮಾ (300×80)<br>ಸಾಮಾನ್ಯ ಶೇರು ಅಂತಿಮ ಕರೆಯ ಖಾತೆಯ ಜಮಾ (300×20)<br>(300 ಶೇರುಗಳ ಮೇಲೆ ಅಂತಿಮ ಕರೆಯ ಹಣ ಸಂದಾಯವಾದುದೇ ಇದ್ದುದಕ್ಕೆ ಅವುಗಳನ್ನು ಮುಟ್ಟುಗೋಲು ಹಾಕಿದ ಬಗ್ಗೆ) | | 30,000 | <br>24,000<br>6,000 |
| 12. | ಬ್ಯಾಂಕಿನ ಖಾತೆಯ ಖರ್ಚು (300×85)<br>ಮುಟ್ಟುಗೋಲಾದ ಶೇರುಗಳ ಖಾತೆ ಖರ್ಚು(300×15)<br>ಸಾಮಾನ್ಯ ಶೇರು ಬಂಡವಾಳ ಖಾತೆ ಜಮಾ<br>(ಮುಟ್ಟುಗೋಲಾದ 300 ಶೇರುಗಳನ್ನು ಶೇರಿಗೆ ₹ 85ರಂತೆ ಪೂರ್ಣ ಸಂದಾಯವೆಂದು ಮರು ಮಾರಾಟ ಮಾಡಲಾಯಿತು.) | | 25,500<br>4,500 | <br><br>30,000 |
| 13. | ಮುಟ್ಟುಗೋಲಾದ ಶೇರುಗಳ ಖಾತೆ ಖರ್ಚು<br>ಬಂಡವಾಳ ನಿಧಿ ಖಾತೆ ಜಮಾ<br>(ಮುಟ್ಟುಗೋಲಾದ ಶೇರುಗಳ ಖಾತೆಯ ಜಮೆಯ ಶಿಲ್ಕನ್ನು ಬಂಡವಾಳ ನಿಧಿಯ ಖಾತೆಗೆ ವರ್ಗಾಯಿಸಿದ್ದು.) | | 19,500 | <br>19,500 |

## ನಿದರ್ಶನ 27.

ಅಜಿತ್ ಕಂಪನಿ ನಿಯಮಿತವು ₹ 10 ಮುಖಬೆಲೆಯ 20,000 ಸಾಮಾನ್ಯ ಶೇರುಗಳನ್ನು ₹ 1 ಸೋಡಿಗೆ ನೀಡಿತು. ಶೇರುಗಳ ಹಣವನ್ನು ಈ ಕೆಳಗಿನಂತೆ ಪಾವತಿಸಲು ಸೂಚಿಸಿತು.

₹ 2 ಅರ್ಜಿಯೊಂದಿಗೆ

₹ 2 ಹಂಚಿಕೆಯಾದ ನಂತರ (ಸೋಡಿ ದಾಖಲಿಸುವುದು)

₹ 5 ಮೊದಲ ಹಾಗೂ ಅಂತಿಮ ಕರೆ

ಎಲ್ಲಾ ಶೇರುಗಳು ಕೊಳ್ಳಲ್ಪಟ್ಟವು. ರೂಪ ಎಂಬುವವರು ಹೊಂದಿದ 500 ಶೇರುಗಳ ಮೇಲಿನ ಅಂತಿಮ ಕರೆಯ ಹಣ ಬಾಕಿ ನಿಂತಿತು. ಈ ಶೇರುಗಳನ್ನು ದೀಪಾ ಎಂಬುವವರಿಗೆ ಪ್ರತಿ ಶೇರಿಗೆ ₹ 7ರಂತೆ ಮರು ಮಾರಾಟ ಮಾಡಲಾಯಿತು.

ಈ ವ್ಯವಹಾರಗಳನ್ನು ಕಂಪನಿಯ ದಿನವಹಿಯಲ್ಲಿ ಬರೆಯಿರಿ.

**ನಿರೂಪಣೆ :**

**ಅಜಿತ್ ಕಂಪನಿ ನಿಯಮಿತ ದಿನವಹಿ**

| | ವಿವರಣೆ | ಪಾ.ಖಾ | ಖರ್ಚು | ಜಮಾ |
|---|---|---|---|---|
| 1 | ಬ್ಯಾಂಕಿನ ಖಾತೆಗೆ ಖರ್ಚು | | 40,000 | |
| | ಸಾಮಾನ್ಯ ಶೇರುಗಳ ಅರ್ಜಿಯ ಖಾತೆಗೆ ಜಮಾ | | | 40,000 |
| | (20,000 ಶೇರುಗಳ ಮೇಲೆ ಶೇರಿಗೆ ₹ 2ರಂತೆ ಅರ್ಜಿದಾರರಿಂದ ಅರ್ಜಿ ಹಣ ಪಡೆಯಲಾಯಿತು) | | | |
| 2 | ಸಾಮಾನ್ಯ ಶೇರುಗಳ ಅರ್ಜಿಯ ಖಾತೆಗೆ ಜಮಾ | | 40,000 | |
| | ಸಾಮಾನ್ಯ ಶೇರು ಬಂಡವಾಳ ಖಾತೆಗೆ ಖರ್ಚು | | | 40,000 |
| | (ಸಾಮಾನ್ಯ ಶೇರುಗಳ ಅರ್ಜಿಯ ಹಣವನ್ನು ಶೇರು ಬಂಡವಾಳ ಖಾತೆಗೆ ವರ್ಗಾಹಿಸಲಾಯಿತು.) | | | |
| 3 | ಸಾಮಾನ್ಯ ಶೇರುಗಳ ವಿತರಣೆ ಖಾತೆಗೆ ಖರ್ಚು | | 40,000 | |
| | ಸೋಡಿ ಖಾತೆಗೆ ಖರ್ಚು | | 20,000 | |
| | ಸಾಮಾನ್ಯ ಶೇರುಗಳ ಬಂಡವಾಳ ಖಾತೆಗೆ ಜಮಾ | | | 60,000 |
| | (20,000 ಶೇರುಗಳ ಮೇಲೆ ಶೇರಿಗೆ ₹ 2ರಂತೆ ಪಾವತಿಸಲು ಸೂಚಿಸಲಾಯಿತು. ಹಾಗೂ ಸೇರಿಗೆ ₹ 1 ಸೋಡಿ ನೀಡಲಾಯಿತು.) | | | |
| 4 | ಬ್ಯಾಂಕಿನ ಖಾತೆಗೆ ಖರ್ಚು | | 40,000 | |
| | ಸಾಮಾನ್ಯ ಶೇರುಗಳ ವಿತರಣೆ ಖಾತೆಗೆ ಜಮಾ | | | 40,000 |
| | (20,000 ಶೇರುಗಳ ಮೇಲೆ ಪ್ರತಿ ಶೇರಿಗೆ ₹ 2ರಂತೆ ಹಂಚಿಕೆ ಹಣ ಪಡೆಯಲಾಯಿತು.) | | | |

| | | | | |
|---|---|---|---|---|
| 5 | ಸಾಮಾನ್ಯ ಶೇರು ಪ್ರಥಮ ಹಾಗೂ ಅಂತಿಮ ಕರೆಯ ಖಾತೆಗೆ ಖರ್ಚು | | 1,00,000 | |
| | ಸಾಮಾನ್ಯ ಶೇರು ಬಂಡವಾಳ ಖಾತೆಗೆ ಜಮಾ | | | 1,00,000 |
| | (20,000 ಸಾಮಾನ್ಯ ಶೇರುಗಳ ಮೇಲೆ ಶೇರಿಗೆ 5 ₹ಗಳಂತೆ ಶೇರುದಾರರಿಗೆ ಪ್ರಥಮ ಹಾಗೂ ಅಂತಿಮ ಕರೆಯ ಹಣ ಕಳಿಸಿಕೊಡಬೇಕೆಂದು ಕೇಳಿಕೊಳ್ಳಲಾಯಿತು.) | | | |
| 6 | ಬ್ಯಾಂಕಿನ ಖಾತೆಗೆ ಖರ್ಚು | | 97,500 | |
| | ಸಾಮಾನ್ಯ ಶೇರು ಪ್ರಥಮ ಹಾಗೂ ಅಂತಿಮ ಕರೆಯ ಖಾತೆಜಮಾ | | | 97,500 |
| | (19,500 ಸಾಮಾನ್ಯ ಶೇರುಗಳ ಮೇಲೆ ಶೇರಿಗೆ 5 ರೂಗಳಂತೆ ಪ್ರಥಮ ಹಾಗೂ ಅಂತಿಮ ಕರೆಯ ಹಣ ಪಡೆಯಲಾಯಿತು.) | | | |
| 7. | ಸಾಮಾನ್ಯ ಶೇರು ಬಂಡವಾಳ ಖಾತೆ ಖರ್ಚು (500×10) | | 5,000 | |
| | ಸೋಡಿ ಖಾತೆಗೆ ಜಮಾ (500×1) | | | 500 |
| | ಶೇರುಗಳ ಮುಟ್ಟುಗೋಲು ಖಾತೆ ಜಮಾ (500×4) | | | 2,000 |
| | ಶೇರುಗಳ ಪ್ರಥಮ ಹಾಗೂ ಅಂತಿಮ ಕರೆ ಖಾತೆ ಜಮಾ(500×5) | | | 2,500 |
| | (100 ಶೇರುಗಳ ಮೇಲಿನ ಪ್ರಥಮ ಹಾಗೂ ಅಂತಿಮ ಕರೆಯ ಹಣ ₹ 5 ಪಾವತಿಸದಿದ್ದಕ್ಕೆ ಈ ಶೇರುಗಳನ್ನು ಮುಟ್ಟುಗೋಲು ಹಾಕಿದ ಬಗ್ಗೆ) | | | |
| 8. | ಬ್ಯಾಂಕಿನ ಖಾತೆಯ ಖರ್ಚು (500×7) | | 3,500 | |
| | ಮುಟ್ಟುಗೋಲಾದ ಶೇರುಗಳ ಖಾತೆ ಖರ್ಚು (500×3) | | 1,500 | |
| | ಸಾಮಾನ್ಯ ಶೇರು ಬಂಡವಾಳ ಖಾತೆ ಜಮಾ(500×10) | | | 5,000 |
| | (ಮುಟ್ಟುಗೋಲಾದ 500 ಶೇರುಗಳನ್ನು ₹ 7ರಂತೆ ಪೂರ್ಣ ಸಂದಾಯವೆಂದು ಮರು ಮಾರಾಟ ಮಾಡಲಾಯಿತು.) | | | |
| 10. | ಮುಟ್ಟುಗೋಲಾದ ಶೇರುಗಳ ಖಾತೆ ಖರ್ಚು | | 500 | |
| | ಬಂಡವಾಳ ನಿಧಿ ಖಾತೆ ಜಮಾ | | | 500 |
| | (ಮುಟ್ಟುಗೋಲಾದ ಶೇರುಗಳ ಖಾತೆಯ ಜಮೆಯ ಸಿಲ್ಕನ್ನು ಬಂಡವಾಳ ನಿಧಿಯ ಖಾತೆಗೆ ವರ್ಗಾಯಿಸಿದ್ದು. 2,000–1,500) | | | |

**ನಿದರ್ಶನ 28.**

ಥಂಬಾ ಕಂಪನಿ ನಿಯಮಿತವು ₹ 10 ಮುಖಬೆಲೆಯ 20,000 ಶೇರುಗಳನ್ನು ಸಾರ್ವಜನಿಕರಿಗೆ ಕೊಳ್ಳಲು ನೀಡಿತು. ಶೇರುಗಳ ಹಣವನ್ನು ಈ ಕೆಳಗಿನಂತೆ ಪಾವತಿಸಲು ಸೂಚಿಸಿತು.

₹ 2 ಅರ್ಜಿಯೊಂದಿಗೆ

₹ 3 ಹಂಚಿಕೆಯಾದ ನಂತರ

₹ 5 ಮೊದಲ ಹಾಗೂ ಅಂತಿಮ ಕರೆ

ಸಾರ್ವಜನಿಕರಿಂದ 26,000 ಶೇರುಗಳಿಗೆ ಬೇಡಿಕೆ ಬಂದಿತು. ಕಂಪನಿಯ ನಿರ್ದೇಶಕರು ಈ ಕೆಳಗಿನಂತೆ ಶೇರುಗಳನ್ನು ಹಂಚಿಕೆ ಮಾಡಿದರು.

12,000 ಶೇರುಗಳ ಅರ್ಜಿದಾರರಿಗೆ ____ ಪೂರ್ಣ ಹಂಚಿಕೆ ಮಾಡಲಾಯಿತು.

10,000 ಶೇರುಗಳ ಅರ್ಜಿದಾರರಿಗೆ ____ 8,000 ಶೇರುಗಳನ್ನು ಹಂಚಿಕೆ ಮಾಡಲಾಯಿತು.

4,000 ಶೇರುಗಳ ಅರ್ಜಿದಾರರಿಗೆ ____ ಯಾವುದೇ ಶೇರು ಹಂಚಿಕೆ ಮಾಡಲಿಲ್ಲ.

2,000 ಶೇರುಗಳ ಮೇಲಿನ ಪ್ರಥಮ ಹಾಗೂ ಅಂತಿಮ ಕರೆಯ ಹೊರತುಪಡಿಸಿ ಉಳಿದೆಲ್ಲ ಹಣವು ಸಂದಾಯವಾಯಿತು. ನಿರ್ದೇಶಕರು ಈ ಶೇರುಗಳನ್ನು ಮುಟ್ಟುಗೋಲು ಹಾಕಿಕೊಂಡು ₹ 7 ಪೂರ್ಣ ಸಂದಾಯವೆಂದು ಮರು ಹಂಚಿಕೆ ಮಾಡಿದರು.

ಈ ವ್ಯವಹಾರಗಳನ್ನು ಕಂಪನಿಯ ದಿನವಹಿಯಲ್ಲಿ ಬರೆಯಿರಿ.

**ನಿರೂಪಣೆ :**

**ಘಂಬಾ ಕಂಪನಿ ನಿಯಮಿತ ದಿನವಹಿ**

| | ವಿವರಣೆ | ಪಾ.ಖಾ | ಖರ್ಚು | ಜಮಾ |
|---|---|---|---|---|
| 1 | ಬ್ಯಾಂಕಿನ ಖಾತೆಗೆ ಖರ್ಚು<br>ಸಾಮಾನ್ಯ ಶೇರುಗಳ ಅರ್ಜಿಯ ಖಾತೆಗೆ ಜಮಾ<br>(26,000 ಶೇರುಗಳ ಮೇಲೆ ಶೇರಿಗೆ ₹ 2ರಂತೆ ಅರ್ಜಿದಾರರಿಂದ ಅರ್ಜಿ ಹಣ ಪಡೆಯಲಾಯಿತು) | | 52,000 | 52,000 |
| 2 | ಸಾಮಾನ್ಯ ಶೇರುಗಳ ಅರ್ಜಿಯ ಖಾತೆಗೆ ಖರ್ಚು<br>ಸಾಮಾನ್ಯ ಶೇರು ಬಂಡವಾಳ ಖಾತೆಗೆ ಜಮಾ<br>(20,000 ಸಾಮಾನ್ಯ ಶೇರುಗಳ ಅರ್ಜಿಯ ಹಣವನ್ನು ಶೇರು ಬಂಡವಾಳ ಖಾತೆಗೆ ವರ್ಗಾಹಿಸಲಾಯಿತು.) | | 40,000 | 40,000 |
| 3 | ಸಾಮಾನ್ಯ ಶೇರುಗಳ ವಿತರಣೆ ಖಾತೆಗೆ ಖರ್ಚು (20,000×3)<br>ಸಾಮಾನ್ಯ ಶೇರುಗಳ ಬಂಡವಾಳ ಖಾತೆಗೆ ಜಮಾ<br>(20,000 ಸಾಮಾನ್ಯ ಶೇರುಗಳನ್ನು ಹಂಚಿದ ನಂತರ ಪ್ರತಿ ಶೇರಿಗೆ ₹ 3ರಂತೆ ಹಂಚಿಕೆ ಹಣ ಕಳಿಸಿಕೊಡಲು ಶೇರುದಾರರಿಗೆ ಕೇಳಿಕೊಂಡ ಬಗ್ಗೆ) | | 60,000 | 60,000 |
| 4 | ಸಾಮಾನ್ಯ ಶೇರುಗಳ ಅರ್ಜಿ ಖಾತೆಗೆ ಖರ್ಚು<br>ಬ್ಯಾಂಕಿನ ಖಾತೆಗೆ ಜಮಾ<br>(2,000 ಶೇರುಗಳ ತಿರಸ್ಕೃತ ಅರ್ಜಿಗಳ ಹಣವನ್ನು ಹಿಂದಿರುಗಿಸಲಾಯಿತು.) | | 8,000 | 8,000 |
| 5. | ಸಾಮಾನ್ಯ ಶೇರುಗಳ ಅರ್ಜಿ ಖಾತೆಗೆ ಖರ್ಚು<br>ಸಾಮಾನ್ಯ ಶೇರುಗಳ ವಿತರಣೆ ಖಾತೆಗೆ ಜಮಾ<br>(ಭಾಗಶಃ ಹಂಚಿಕೆ ಮಾಡಲಾದ ಶೇರುಗಳ ಅರ್ಜಿಯ ಹಣವನ್ನು ವಿತರಣೆ ಖಾತೆಗೆ ವರ್ಗಾಯಿಸಲಾಯಿತು.) | | 4,000 | 4,000 |

| | | | | |
|---|---|---|---|---|
| 6 | ಬ್ಯಾಂಕಿನ ಖಾತೆಗೆ ಖರ್ಚು<br>ಸಾಮಾನ್ಯ ಶೇರುಗಳ ವಿತರಣೆ ಖಾತೆಗೆ ಜಮಾ<br>(ಸಾಮಾನ್ಯ ಶೇರುಗಳ ವಿತರಣೆಯ ಹಣ ಪಡೆಯಲಾಯಿತು.) | | 56,000 | 56,000 |
| 7 | ಸಾಮಾನ್ಯ ಶೇರುಗಳ ಪ್ರಥಮ ಹಾಗೂ ಅಂತಿಮ ಕರೆಯ ಖಾತೆಗೆ ಖರ್ಚು<br>ಸಾಮಾನ್ಯ ಶೇರುಗಳ ಬಂಡವಾಳ ಖಾತೆಗೆ ಜಮಾ<br>(20,000 ಸಾಮಾನ್ಯ ಶೇರುಗಳ ಮೇಲೆ ಶೇರಿಗೆ 5 ರೂಗಳಂತೆ ಶೇರುದಾರರಿಗೆ ಅಂತಿಮ ಕರೆಯ ಹಣ ಕಳಿಸಿಕೊಡಬೇಕೆಂದು ಕೇಳಿಕೊಳ್ಳಲಾಯಿತು.) | | 1,00,000 | 1,00,000 |
| 8 | ಬ್ಯಾಂಕಿನ ಖಾತೆಗೆ ಖರ್ಚು<br>ಸಾಮಾನ್ಯ ಶೇರುಗಳ ಪ್ರಥಮ ಹಾಗೂ ಅಂತಿಮ ಕರೆಯ ಖಾತೆಗೆ ಜಮಾ<br>(18,000 ಸಾಮಾನ್ಯ ಶೇರುಗಳ ಮೇಲೆ ಶೇರಿಗೆ 5 ರೂಗಳಂತೆ ಅಂತಿಮ ಕರೆಯ ಹಣ ಪಡೆಯಲಾಯಿತು.) | | 90,000 | 90,000 |
| 9. | ಸಾಮಾನ್ಯ ಶೇರು ಬಂಡವಾಳ ಖಾತೆ ಖರ್ಚು (2,000×10)<br>ಶೇರುಗಳ ಮುಟ್ಟುಗೋಲು ಖಾತೆ ಜಮಾ (2,000×5)<br>ಸಾಮಾನ್ಯ ಶೇರು ಮೊದಲ ಹಾಗೂ ಅಂತಿಮ ಕರೆಯ ಖಾತೆಯ ಜಮಾ (2,000×5)<br>(2,000 ಶೇರುಗಳ ಮೇಲೆ ಪ್ರಥಮ ಹಾಗೂ ಅಂತಿಮ ಕರೆಯ ಹಣ ₹ 5 ಸಂದಾಯವಾದುದೇ ಇದ್ದುದಕ್ಕೆ ಅವುಗಳನ್ನು ಮುಟ್ಟುಗೋಲು ಹಾಕಿದ ಬಗ್ಗೆ) | | 20,000 | 10,000<br>10,000 |
| 10. | ಬ್ಯಾಂಕಿನ ಖಾತೆಯ ಖರ್ಚು (2,000×7)<br>ಮುಟ್ಟುಗೋಲಾದ ಶೇರುಗಳ ಖಾತೆ ಖರ್ಚು(2,000×3)<br>ಸಾಮಾನ್ಯ ಶೇರು ಬಂಡವಾಳ ಖಾತೆ ಜಮಾ<br>(ಮುಟ್ಟುಗೋಲಾದ 2,000 ಶೇರುಗಳನ್ನು ಶೇರಿಗೆ ₹ 7ರಂತೆ ಪೂರ್ಣ ಸಂದಾಯವೆಂದು ಮರು ಮಾರಾಟ ಮಾಡಲಾಯಿತು) | | 14,000<br>6,000 | 20,000 |
| 11. | ಮುಟ್ಟುಗೋಲಾದ ಶೇರುಗಳ ಖಾತೆ ಖರ್ಚು<br>ಬಂಡವಾಳ ನಿಧಿ ಖಾತೆ ಜಮಾ<br>(ಮುಟ್ಟುಗೋಲಾದ ಶೇರುಗಳ ಖಾತೆಯ ಜಮೆಯ ಶಿಲ್ಕನ್ನು ಬಂಡವಾಳ ನಿಧಿಯ ಖಾತೆಗೆ ವರ್ಗಾಯಿಸಿದ್ದು. (10,000–6,000) | | 4,000 | 4,000 |

## 6.2 ಸಾಲಪತ್ರಗಳು DEBENTURES.

### ಪೀಠಿಕೆ (Introduction) :

ಉದ್ದಿಮೆಗಳು ಹಾಗೂ ವ್ಯಾಪಾರ ಸಂಸ್ಥೆಗಳು ತಮ್ಮ ಹಣಕಾಸಿನ ಅವಶ್ಯಕತೆಗಳನ್ನು ಪೂರೈಸಿಕೊಳ್ಳಲು ಹಣವನ್ನು ಸಾಲವಾಗಿ ಪಡೆಯುತ್ತವೆ. ದೀರ್ಘಾವಧಿ ಸಾಲವನ್ನು ಪಡೆಯಲು ಕಂಪನಿಗಳು ಸಾಮಾನ್ಯವಾಗಿ ಸಾರ್ವಜನಿಕರಿಂದ ಸಾಲಪತ್ರಗಳನ್ನು ನೀಡುವ ಮೂಲಕ ಸಾಲ ಪಡೆಯುತ್ತವೆ.

## ಸಾಲಪತ್ರಗಳು ಅರ್ಥ (Meaning of debentures) :

ಸಾಲಪತ್ರವೆಂಬುದು ಒಂದು ಕಂಪನಿಯು ತನ್ನ ಸಾಮಾನ್ಯ ಮೋಹರಿನಡಿಯಲ್ಲಿ ಇನ್ನೊಬ್ಬ ವ್ಯಕ್ತಿಗೆ ನೀಡುವ ಸಾಲವನ್ನು ಸ್ವೀಕರಿಸಿ ಒಪ್ಪಿಕೊಳ್ಳುವ, ಒಂದು ನಿರ್ದಿಷ್ಟ ದಿನಾಂಕದ ಬಳಿಕ ಸಾಲವನ್ನು ಮರುಪಾವತಿ ಮಾಡುವ ವಾಗ್ದಾನವನ್ನು ಹೊಂದಿರುವ ಮತ್ತು ನಿರ್ದಿಷ್ಟ ದರದ ಬಡ್ಡಿಯನ್ನು ನಿರ್ದಿಷ್ಟ ಅವಧಿಯಲ್ಲಿ ಪಾವತಿಸುವ ಒಂದು ಪತ್ರವಾಗಿದೆ.

## ವ್ಯಾಖ್ಯೆ (Definition):

ಪಾಲ್ಮರ್ ಎಂಬುವವರ ಪ್ರಕಾರ "ಸಾಲ ಪತ್ರವೆಂದರೆ ಸಾಲಕ್ಕೆ ಪುರಾವೆಯಾಗಿ ನೀಡುವ ಋಣವನ್ನು ಒಪ್ಪಿಕೊಳ್ಳುವ ಸಾರಾಂಶ ಹೊಂದಿರುವ ಮುದ್ರೆಹಾಕಿ ನೀಡುವ ಒಂದು ಪತ್ರವಾಗಿದೆ.

## ಸಾಲಪತ್ರಗಳು ವಿಧಗಳು (Types of Debentures).

ಸಾಲಪತ್ರಗಳ ಈ ಕೆಳಗಿನಂತೆ ವಿಂಗಡಿಸಬಹುದು:

1) ನೋಂದಾಯಿತ ಸಾಲಪತ್ರಗಳು :
2) ಧಾರಕ ಅಥವಾ ನೋಂದಾಯಿಸಲ್ಪಡದ ಸಾಲಪತ್ರಗಳು :
3) ಸರಳ ಅಥವಾ ಭದ್ರತೆಯಿಲ್ಲದ ಸಾಲಪತ್ರಗಳು :
4) ಅಡಮಾನಿತ ಅಥವಾ ಭದ್ರತೆ ಇರುವ ಸಾಲಪತ್ರಗಳು :
5) ವಿಮೋಚನೆ ಆಗುವ ಸಾಲಪತ್ರಗಳು :
6) ವಿಮೋಚನೆಯಾಗದ ಸಾಲಪತ್ರಗಳು :
7) ಪರಿವರ್ತನೀಯ ಸಾಲಪತ್ರಗಳು :
8) ಪರಿವರ್ತನೀಯವಲ್ಲದ ಸಾಲಪತ್ರಗಳು :

## 6.2.1 ಶೇರುಗಳು ಹಾಗೂ ಸಾಲಪತ್ರಗಳಲ್ಲಿರುವ ವ್ಯತ್ಯಾಸಗಳು(Differences between shares and debentures):

ಶೇರುಗಳು ಹಾಗೂ ಸಾಲಪತ್ರಗಳಲ್ಲಿ ಅನೇಕ ವ್ಯತ್ಯಾಸಗಳಿವೆ ಅವು ಯಾವವು ಎಂದರೆ:

1. ಶೇರುಗಳು ಬಂಡವಾಳದ ಭಾಗವಾಗಿವೆ. ಆದರೆ ಸಾಲಪತ್ರಗಳು ಸಾಲದ ಒಂದು ಭಾಗವಾಗಿವೆ.
2. ಶೇರುದಾರರು ಕಂಪನಿಯ ಮಾಲೀಕರಾಗಿರುತ್ತಾರೆ. ಆದರೆ ಸಾಲಪತ್ರಧಾರಕರು ಕಂಪನಿಯ ಸಾಹುಕಾರರಾಗಿರುತ್ತಾರೆ.
3. ಸಾಮಾನ್ಯ ಶೇರುಗಳ ಹಣವನ್ನು ಕಂಪನಿಯ ಜೀವಿತಾವಧಿಯಲ್ಲಿ ಮರುಪಾವತಿ ಮಾಡಲಾಗುವುದಿಲ್ಲ. ಆದರೆ ಸಾಲಪತ್ರಗಳ ಹಣವನ್ನು ಒಂದು ಗೊತ್ತಾದ ಅವಧಿಯ ನಂತರ ಮರುಪಾವತಿ ಮಾಡಲಾಗುತ್ತದೆ.
4. ಶೇರುದಾರರಿಗೆ ಲಾಭಾಂಶವನ್ನು ನೀಡಲಾಗುತ್ತದೆ. ಆದರೆ ಸಾಲಪತ್ರದಾರಕರಿಗೆ ಬಡ್ಡಿಯನ್ನು ನೀಡಲಾಗುತ್ತದೆ.
5. ಲಾಭಾಂಶದ ದರವು ಕಂಪನಿಯ ಲಾಭಗಳಿಕೆಯ ಮೇಲೆ ಅವಲಂಬನೆ ಯಾಗಿರುತ್ತದೆ. ಆದರೆ ಸಾಲಪತ್ರ ದಾರಕರಿಗೆ ನೀಡುವ ಬಡ್ಡಿದರವು ಸ್ಥಿರವಾಗಿರುತ್ತದೆ.
6. ಶೇರುಗಳನ್ನು ಸೋಡಿಗೆ ನೀಡಲು ಕೆಲವೊಂದು ನಿರ್ಬಂಧಗಳಿವೆ. ಆದರೆ ಸಾಲಪತ್ರವನ್ನು ಸೋಡಿಗೆ ನೀಡಲು ಯಾವುದೇ ನಿರ್ಬಂಧಗಳಿಲ್ಲ.

8. ಶೇರುಗಳನ್ನು ಸಾಲಪತ್ರಗಳಿಗೆ ಪರಿವರ್ತಿಸಲಾಗುವುದಿಲ್ಲ. ಆದರೆ ಸಾಲಪತ್ರಗಳನ್ನು ಶೇರುಗಳಿಗೆ ಪರಿವರ್ತಿಸಬಹುದು.
9. ಕಂಪನಿಯನ್ನು ವಿಸರ್ಜಿಸಿದಾಗ, ಮೊದಲು ಸಾಲಪತ್ರಗಳ ಹಣವನ್ನು ಮರುಪಾವತಿ ಮಾಡಲಾಗುತ್ತದೆ. ಆನಂತರ ಹಣ ಉಳಿದರೆ ಶೇರುದಾರರ ಹಣವನ್ನು ಮರುಪಾವತಿ ಮಾಡಲಾಗುತ್ತದೆ.

## 6.2.2 ಸಾಲಪತ್ರಗಳ ನೀಡಿಕೆ (Issue of debentures):

ಶೇರುಗಳನ್ನು ಸಾರ್ವಜನಿಕರಿಗೆ ನೀಡಿದಾಗ ಯಾವ ಕ್ರಮಗಳನ್ನು ಅನುಸರಿಸಲಾಗುದೆ ಅದೇ ಕ್ರಮಗಳನ್ನು ಸಾಲಪತ್ರಗಳನ್ನು ನೀಡುವಾಗಲು ಅನುಸರಿಸಲಾಗುತ್ತದೆ. ಶೇರುಗಳನ್ನು ಸಾರ್ವಜನಿಕರಿಗೆ ನೀಡಿದಾಗ ಯಾವ ದಾಖಲೆಗಳನ್ನು ಮಾಡಬೇಕಾಗುತ್ತದೆಯೋ, ಅದೇ ದಾಖಲೆಗಳನ್ನು ಡಿವೆಂಚರ್ ನೀಡಿದಾಗ ಸಹ ಮಾಡಬೇಕಾಗುತ್ತದೆ. ಡಿವೆಂಚರ್‌ಗಳನ್ನು ಅವುಗಳ ಮುಖಬೆಲೆಗೆ ಮಾರಾಟ ಮಾಡಬಹುದು. ಅಥವಾ ಸೋಡಿಗೆ ಮಾರಾಟ ಮಾಡಬಹುದು. ಅಥವಾ ಪ್ರಿಮಿಯಂ ದರಕ್ಕೆ ಮಾರಾಟ ಮಾಡಬಹುದು.

**ಸಾಲ ಪತ್ರಗಳನ್ನು ಅವುಗಳ ಮುಖಬೆಲೆಗೆ ನೀಡಿದಾಗ ಮಾಡಬೇಕಾದ ರೋಜು ದಾಖಲೆಗಳು:**

1. ಸಾಲಪತ್ರಗಳ ಅರ್ಜಿಯ ಹಣವನ್ನು ಸ್ವೀಕರಿಸಿದಾಗ

| |
|---|
| ಬ್ಯಾಂಕಿನ ಖಾತೆಗೆ ಖರ್ಚು |
| ಸಾಲಪತ್ರಗಳ ಅರ್ಜಿಯ ಖಾತೆಗೆ ಜಮಾ |

2. ಅರ್ಜಿಯ ಹಣವನ್ನು ಸಾಲಪತ್ರಗಳ ಖಾತೆಗೆ ವರ್ಗಾಯಿಸಿದಾಗ

| |
|---|
| ಸಾಲಪತ್ರಗಳ ಅರ್ಜಿಯ ಖಾತೆಗೆ ಖರ್ಚು |
| ಸಾಲಪತ್ರಗಳ ಖಾತೆಗೆ ಜಮಾ |

3. ಸಾಲಪತ್ರಗಳ ಹಂಚಿಕೆ ಹಣ ಪಾವತಿಸಲು ಸೂಚಿಸಿದಾಗ

| |
|---|
| ಸಾಲಪತ್ರಗಳ ಹಂಚಿಕೆ ಖಾತೆಗೆ ಖರ್ಚು |
| ಸಾಲಪತ್ರಗಳ ಖಾತೆಗೆ ಜಮಾ |

4. ಸಾಲಪತ್ರಗಳ ಹಂಚಿಕೆ ಹಣ ಸ್ವೀಕರಿಸಿದಾಗ

| |
|---|
| ಬ್ಯಾಂಕಿನ ಖಾತೆಗೆ ಖರ್ಚು |
| ಸಾಲಪತ್ರಗಳ ಹಂಚಿಕೆ ಖಾತೆಗೆ ಜಮಾ |

5. ಸಾಲಪತ್ರಗಳ ಕರೆಯ ಹಣ ಪಾವತಿಸಲು ಸೂಚಿಸಿದಾಗ

| |
|---|
| ಸಾಲಪತ್ರಗಳ ಕರೆಯ ಖಾತೆಗೆ ಖರ್ಚು |
| ಸಾಲಪತ್ರಗಳ ಖಾತೆಗೆ ಜಮಾ |

6. ಸಾಲಪತ್ರಗಳ ಕರೆಯ ಹಣ ಸ್ವೀಕರಿಸಿದಾಗ

| |
|---|
| ಬ್ಯಾಂಕಿನ ಖಾತೆಗೆ ಖರ್ಚು |
| ಸಾಲಪತ್ರಗಳ ಕರೆಯ ಖಾತೆಗೆ ಜಮಾ |

**ಸಾಲಪತ್ರಗಳನ್ನು ಅಧಿಕ ಬೆಲೆಗೆ (ಪ್ರಿಮಿಯಂ)ನೀಡಿದಾಗ ಮಾಡಬೇಕಾದ ರೋಜು ದಾಖಲೆಗಳು**

1. ಪ್ರಿಮಿಯಂ ಹಣವನ್ನು ಅರ್ಜಿಯ ಜೊತೆಗೆ ಪಾವತಿಸಲು ಸೂಚಿಸಿದಾಗ

| |
|---|
| ಸಾಲಪತ್ರಗಳ ಅರ್ಜಿಯ ಖಾತೆಗೆ ಖರ್ಚು |
| ಸಾಲಪತ್ರಗಳ ಖಾತೆಗೆ ಜಮಾ |
| ಪ್ರಿಮಿಯಂ ಖಾತೆಗೆ ಜಮಾ |

2. ಪ್ರಿಮಿಯಂ ಹಣವನ್ನು ಹಂಚಿಕೆ ಜೊತೆಗೆ ಪಾವತಿಸಲು ಸೂಚಿಸಿದಾಗ

| |
|---|
| ಸಾಲಪತ್ರಗಳ ಹಂಚಿಕೆ ಖಾತೆಗೆ ಖರ್ಚು |
| ಸಾಲಪತ್ರಗಳ ಖಾತೆಗೆ ಜಮಾ |
| ಸೆಕ್ಯೂರಿಟಿ ಪ್ರಿಮಿಯಂ ಖಾತೆಗೆ ಜಮಾ |

3. ಪ್ರಿಮಿಯಂ ಹಣವನ್ನು ಕರೆಯ ಜೊತೆಗೆ ಪಾವತಿಸಲು ಸೂಚಿಸಿದಾಗ

| |
|---|
| ಸಾಲಪತ್ರಗಳ ಕರೆಯ ಖಾತೆಗೆ ಖರ್ಚು |
| ಸಾಲಪತ್ರಗಳ ಖಾತೆಗೆ ಜಮಾ |
| ಸೆಕ್ಯೂರಿಟಿ ಪ್ರಿಮಿಯಂ ಖಾತೆಗೆ ಜಮಾ |

**ಸಾಲಪತ್ರಗಳನ್ನು ಸೋಡಿಗೆ ಮಾರಾಟ ಮಾಡಿದಾಗ ಮಾಡಬೇಕಾದ ರೋಜು ದಾಖಲೆ**

ಸಾಲಪತ್ರಗಳನ್ನು ಸೋಡಿಗೂ ನೀಡಬಹುದು. ಸೋಡಿಯನ್ನು ಸಾಮಾನ್ಯವಾಗಿ ಹಂಚಿಕೆಯ ಸಮಯದಲ್ಲಿ ದಾಖಲಿಸಲಾಗುತ್ತದೆ. ಆಗ ಈ ಕೆಳಗಿನಂತೆ ದಾಖಲೆ ಮಾಡಲಾಗುತ್ತದೆ.

| |
|---|
| ಸಾಲಪತ್ರಗಳ ಹಂಚಿಕೆ ಖಾತೆಗೆ ಖರ್ಚು |
| ಸೋಡಿ ಖಾತೆಗೆ ಖರ್ಚು |
| ಸಾಲಪತ್ರಗಳ ಖಾತೆಗೆ ಜಮಾ |

## ನಿದರ್ಶನ 29.

**ABC** ಕಂಪನಿ ನಿಯಮಿತವು ₹ 100 ಮುಖಬೆಲೆಯ 10,000 12% ಸಾಲಪತ್ರಗಳನ್ನು ನೀಡಿತು. ಸಾಲಪತ್ರಗಳ ಹಣವನ್ನು ಈ ಕೆಳಗಿನಂತೆ ಪಾವತಿಸಲು ಸೂಚಿಸಿತು.

₹ 10 ಅರ್ಜಿಯೊಂದಿಗೆ

₹ 50 ಹಂಚಿಕೆಯಾದ ನಂತರ

₹ 40 ಮೊದಲ ಹಾಗೂ ಅಂತಿಮ ಕರೆ

ಎಲ್ಲಾ ಸಾಲಪತ್ರಗಳು ಕೊಳ್ಳಲ್ಪಟ್ಟವು. ಮತ್ತು ಎಲ್ಲಾ ಹಣ ಸಂದಾಯವಾಯಿತು.

ಈ ವ್ಯವಹಾರಗಳನ್ನು ಕಂಪನಿಯ ದಿನವಹಿಯಲ್ಲಿ ಬರೆಯಿರಿ.

**ನಿರೂಪಣೆ :**

**ABC ಕಂಪನಿ ನಿಯಮಿತ ದಿನವಹಿ**

| | ವಿವರಣೆ | ಪಾ.ಖಾ | ಖರ್ಚು | ಜಮಾ |
|---|---|---|---|---|
| 1 | ಬ್ಯಾಂಕಿನ ಖಾತೆಗೆ ಖರ್ಚು | | 1,00,000 | |
| | 12% ಸಾಲಪತ್ರಗಳ ಅರ್ಜಿಯ ಖಾತೆಗೆ ಜಮಾ | | | 1,00,000 |
| | (10,000 12% ಸಾಲಪತ್ರಗಳಿಗೆ ₹ 10ರಂತೆ ಅರ್ಜಿದಾರರಿಂದ ಅರ್ಜಿ ಹಣ ಪಡೆಯಲಾಯಿತು) | | | |
| 2 | 12% ಸಾಲಪತ್ರಗಳ ಅರ್ಜಿಯ ಖಾತೆಗೆ ಖರ್ಚು | | 1,00,000 | |
| | 12% ಸಾಲಪತ್ರಗಳ ಖಾತೆಗೆ ಜಮಾ | | | 1,00,000 |
| | (12% ಸಾಲಪತ್ರಗಳ ಅರ್ಜಿಯ ಹಣವನ್ನು ಸಾಲಪತ್ರಗಳ ಖಾತೆಗೆ ವರ್ಗಾಹಿಸಲಾಯಿತು.) | | | |

| | | | | |
|---|---|---|---|---|
| 3 | 12% ಸಾಲಪತ್ರಗಳ ವಿತರಣೆ ಖಾತೆಗೆ ಖರ್ಚು<br>12% ಸಾಲಪತ್ರಗಳ ಖಾತೆಗೆ ಜಮಾ<br>(10,000 ಸಾಲಪತ್ರಗಳ ಮೇಲೆ ಪ್ರತಿ ಸಾಲಪತ್ರಕ್ಕೆ ₹ 10ರಂತೆ ಪಾವತಿಸಲು ಸೂಚಿಸಲಾಯಿತು.) | | 5,00,000 | 5,00,000 |
| 4 | ಬ್ಯಾಂಕಿನ ಖಾತೆಗೆ ಖರ್ಚು<br>12% ಸಾಲಪತ್ರಗಳ ವಿತರಣೆ ಖಾತೆಗೆ ಜಮಾ<br>(ಸಾಲಪತ್ರಗಳ ವಿತರಣೆಯ ಹಣ ಪಡೆಯಲಾಯಿತು.) | | 5,00,000 | 5,00,000 |
| 5 | 12% ಸಾಲಪತ್ರಗಳ ಪ್ರಥಮ ಹಾಗೂ ಅಂತಿಮ ಕರೆಯ ಖಾತೆಗೆ ಖರ್ಚು<br>12% ಸಾಲಪತ್ರಗಳ ಖಾತೆಗೆ ಜಮಾ<br>(10,000 ಸಾಲಪತ್ರಗಳ ಮೇಲೆ ಪ್ರತಿ ಸಾಲಪತ್ರಕ್ಕೆ 40 ₹ಗಳಂತೆ ಪ್ರಥಮ ಹಾಗೂ ಅಂತಿಮ ಕರೆಯ ಹಣ ಕಳಿಸಿಕೊಡಬೇಕೆಂದು ಕೇಳಿಕೊಳ್ಳಲಾಯಿತು.) | | 4,00,000 | 4,00,000 |
| 6 | ಬ್ಯಾಂಕಿನ ಖಾತೆಗೆ ಖರ್ಚು<br>12% ಸಾಲಪತ್ರಗಳ ಪ್ರಥಮ ಹಾಗೂ ಅಂತಿಮ ಕರೆಯ ಖಾತೆ ಜಮಾ<br>(12% ಸಾಲಪತ್ರಗಳ ಪ್ರಥಮ ಹಾಗೂ ಅಂತಿಮ ಕರೆಯ ಹಣ ಪಡೆಯಲಾಯಿತು.) | | 4,00,000 | 4,00,000 |

**ನಿದರ್ಶನ 30.**

ಪ್ರಾಸ್ಪರ್ಸ್ ಕಂಪನಿ ನಿಯಮಿತವು ₹ 100 ಮುಖಬೆಲೆಯ 20,000 10% ಸಾಲಪತ್ರಗಳನ್ನು ₹ 20 ಅಧಿಕ ಬೆಲೆಗೆ ನೀಡಿತು. ಸಾಲಪತ್ರಗಳ ಹಣವನ್ನು ಈ ಕೆಳಗಿನಂತೆ ಪಾವತಿಸಲು ಸೂಚಿಸಿತು.

₹ 20 ಅರ್ಜಿಯೊಂದಿಗೆ

₹ 50 ಹಂಚಿಕೆಯಾದ ನಂತರ (ಅಧಿಕ ಮೌಲ್ಯ ಸೇರಿ)

₹ 30 ಮೊದಲ ಕರೆ ಹಾಗೂ

₹ 10 ಕೊನೆಯ ಕರೆ

ಎಲ್ಲಾ ಸಾಲಪತ್ರಗಳು ಕೊಳ್ಳಲ್ಪಟ್ಟವು. ಮತ್ತು ಎಲ್ಲಾ ಹಣ ಸಂದಾಯವಾಯಿತು.

ಈ ವ್ಯವಹಾರಗಳನ್ನು ಕಂಪನಿಯ ದಿನವಹಿಯಲ್ಲಿ ಬರೆಯಿರಿ.

**ನಿರೂಪಣೆ :**

**ಪ್ರಾಸಪರ್ಸ್ ಕಂಪನಿ ನಿಯಮಿತ ದಿನವಹಿ**

| | ವಿವರಣೆ | ಪು.ಖಾ | ಖರ್ಚು | ಜಮಾ |
|---|---|---|---|---|
| 1 | ಬ್ಯಾಂಕಿನ ಖಾತೆಗೆ ಖರ್ಚು<br>10% ಸಾಲಪತ್ರಗಳ ಅರ್ಜಿಯ ಖಾತೆಗೆ ಜಮಾ<br>(20,000 10% ಸಾಲಪತ್ರಗಳಿಗೆ ಪ್ರತಿ ಸಾಲಪತ್ರಕ್ಕೆ ₹ 20ರಂತೆ ಅರ್ಜಿದಾರರಿಂದ ಅರ್ಜಿ ಹಣ ಪಡೆಯಲಾಯಿತು) | | 4,00,000 | 4,00,000 |

| | | | | |
|---|---|---|---|---|
| 2 | 10% ಸಾಲಪತ್ರಗಳ ಅರ್ಜಿಯ ಖಾತೆಗೆ ಖರ್ಚು<br>10% ಸಾಲಪತ್ರಗಳ ಖಾತೆಗೆ ಜಮಾ<br>(10% ಸಾಲಪತ್ರಗಳ ಅರ್ಜಿಯ ಹಣವನ್ನು ಸಾಲಪತ್ರಗಳ ಖಾತೆಗೆ ವರ್ಗಾಹಿಸಲಾಯಿತು.) | | 4,00,000 | <br>4,00,000 |
| 3 | 10% ಸಾಲಪತ್ರಗಳ ವಿತರಣೆ ಖಾತೆಗೆ ಖರ್ಚು<br>10% ಸಾಲಪತ್ರಗಳ ಖಾತೆಗೆ ಜಮಾ<br>ಸೆಕುರಿಟಿ ಪ್ರಿಮಿಯಂ ಖಾತೆ ಜಮ<br>(20,000 ಸಾಲಪತ್ರಗಳ ಮೇಲೆ ಪ್ರತಿ ಸಾಲಪತ್ರಕ್ಕೆ ₹ 50ರಂತೆ ಪ್ರಿಮಿಯಂ ಸೇರಿಸಿ ಪಾವತಿಸಲು ಸೂಚಿಸಲಾಯಿತು.) | | 10,00,000 | <br>8,00,000<br>2,00,000 |
| 4 | ಬ್ಯಾಂಕಿನ ಖಾತೆಗೆ ಖರ್ಚು<br>10% ಸಾಲಪತ್ರಗಳ ವಿತರಣೆ ಖಾತೆಗೆ ಜಮಾ<br>(ಸಾಲಪತ್ರಗಳ ವಿತರಣೆಯ ಹಣ ಪಡೆಯಲಾಯಿತು.) | | 10,00,000 | <br>10,00,000 |
| 5 | 10% ಸಾಲಪತ್ರಗಳ ಪ್ರಥಮ ಕರೆಯ ಖಾತೆಗೆ ಖರ್ಚು<br>10% ಸಾಲಪತ್ರಗಳ ಖಾತೆಗೆ ಜಮಾ | | 6,00,000 | <br>6,00,000 |
| 6 | ಬ್ಯಾಂಕಿನ ಖಾತೆಗೆ ಖರ್ಚು<br>10% ಸಾಲಪತ್ರಗಳ ಪ್ರಥಮ ಕರೆಯ ಖಾತೆ ಜಮಾ<br>(10% ಸಾಲಪತ್ರಗಳ ಪ್ರಥಮ ಕರೆಯ ಹಣ ಪಡೆಯಲಾಯಿತು.) | | 6,00,000 | <br>6,00,000 |
| 7 | 10% ಸಾಲಪತ್ರಗಳ ಅಂತಿಮ ಕರೆಯ ಖಾತೆಗೆ ಖರ್ಚು<br>10% ಸಾಲಪತ್ರಗಳ ಖಾತೆಗೆ ಜಮಾ<br>(10% ಸಾಲಪತ್ರಗಳ ಅಂತಿಮ ಕರೆಯ ಹಣ ಪಾವತಿಸಲು ಸೂಚಿಸಲಾಯಿತು) | | 2,00,000 | <br>2,00,000 |
| 8 | ಬ್ಯಾಂಕಿನ ಖಾತೆಗೆ ಖರ್ಚು<br>10% ಸಾಲಪತ್ರಗಳ ಅಂತಿಮ ಕರೆಯ ಖಾತೆ ಜಮಾ<br>(10% ಸಾಲಪತ್ರಗಳ ಅಂತಿಮ ಕರೆಯ ಹಣ ಪಡೆಯಲಾಯಿತು.) | | 2,00,000 | <br>2,00,000 |

## ನಿದರ್ಶನ 31.

L.G. ಕಂಪನಿ ನಿಯಮಿತವು ₹ 100 ಮುಖಬೆಲೆಯ 10,000 10% ಸಾಲಪತ್ರಗಳನ್ನು 10% ಸೋಡಿಗೆ ಬೆಲೆಗೆ ನೀಡಿತು. ಸಾಲಪತ್ರಗಳ ಹಣವನ್ನು ಈ ಕೆಳಗಿನಂತೆ ಪಾವತಿಸಲು ಸೂಚಿಸಿತು.

₹ 20 ಅರ್ಜಿಯೊಂದಿಗೆ

₹ 20 ಹಂಚಿಕೆಯಾದ ನಂತರ (ಸೋಡಿ ದಾಖಲಿಸುವುದು)

₹ 50 ಮೊದಲ ಹಾಗೂ ಕೊನೆಯ ಕರೆ

ಎಲ್ಲಾ ಸಾಲಪತ್ರಗಳು ಕೊಳ್ಳಲ್ಪಟ್ಟವು. ಮತ್ತು ಎಲ್ಲಾ ಹಣ ಸಂದಾಯವಾಯಿತು.

ಈ ವ್ಯವಹಾರಗಳನ್ನು ಕಂಪನಿಯ ದಿನವಹಿಯಲ್ಲಿ ಬರೆಯಿರಿ.

**ನಿರೂಪಣೆ :**

**L.G. ಕಂಪನಿ ನಿಯಮಿತ ದಿನವಹಿ**

| | ವಿವರಣೆ | ಖಾ.ಖಾ | ಖರ್ಚು | ಜಮಾ |
|---|---|---|---|---|
| 1 | ಬ್ಯಾಂಕಿನ ಖಾತೆಗೆ ಖರ್ಚು<br>10% ಸಾಲಪತ್ರಗಳ ಅರ್ಜಿಯ ಖಾತೆಗೆ ಜಮಾ<br>(1,000 10% ಸಾಲಪತ್ರಗಳಿಗೆ ಪ್ರತಿ ಸಾಲಪತ್ರಕ್ಕೆ ₹ 20ರಂತೆ ಅರ್ಜಿದಾರರಿಂದ ಅರ್ಜಿ ಹಣ ಪಡೆಯಲಾಯಿತು) | | 20,000 | 20,000 |
| 2 | 10% ಸಾಲಪತ್ರಗಳ ಅರ್ಜಿಯ ಖಾತೆಗೆ ಖರ್ಚು<br>10% ಸಾಲಪತ್ರಗಳ ಖಾತೆಗೆ ಜಮಾ<br>(10% ಸಾಲಪತ್ರಗಳ ಅರ್ಜಿಯ ಹಣವನ್ನು ಸಾಲಪತ್ರಗಳ ಖಾತೆಗೆ ವರ್ಗಾಹಿಸಲಾಯಿತು.) | | 20,000 | 20,000 |
| 3 | 10% ಸಾಲಪತ್ರಗಳ ವಿತರಣೆ ಖಾತೆಗೆ ಖರ್ಚು<br>ಸೋಡಿಯ ಖಾತೆಗೆ ಖರ್ಚು<br>10% ಸಾಲಪತ್ರಗಳ ಖಾತೆಗೆ ಜಮಾ<br>(10,000 ಸಾಲಪತ್ರಗಳ ಮೇಲೆ ಪ್ರತಿ ಸಾಲಪತ್ರಕ್ಕೆ ₹ 20ರಂತೆ ಪಾವತಿಸಲು ಸೂಚಿಸಲಾಯಿತು.) | | 20,000<br>10,000 | 30,000 |
| 4 | ಬ್ಯಾಂಕಿನ ಖಾತೆಗೆ ಖರ್ಚು<br>10% ಸಾಲಪತ್ರಗಳ ವಿತರಣೆ ಖಾತೆಗೆ ಜಮಾ<br>(ಸಾಲಪತ್ರಗಳ ವಿತರಣೆಯ ಹಣ ಪಡೆಯಲಾಯಿತು.) | | 20,000 | 20,000 |
| 5 | 10% ಸಾಲಪತ್ರಗಳ ಪ್ರಥಮ ಹಾಗೂ ಅಂತಿಮ ಕರೆಯ ಖಾತೆಗೆ ಖರ್ಚು<br>10% ಸಾಲಪತ್ರಗಳ ಖಾತೆಗೆ ಜಮಾ<br>(1,000 ಸಾಲಪತ್ರಗಳ ಮೇಲೆ ಪ್ರಥಮ ಹಾಗೂ ಅಂತಿಮ ಕರೆಯ ಹಣ ಪಾವತಿಸಲು ಕೇಳಿಕೊಳ್ಳಲಾಯಿತು.) | | 50,000 | 50,000 |
| 6 | ಬ್ಯಾಂಕಿನ ಖಾತೆಗೆ ಖರ್ಚು<br>10% ಸಾಲಪತ್ರಗಳ ಪ್ರಥಮ ಹಾಗೂ ಅಂತಿಮ ಕರೆಯ ಖಾತೆ ಜಮಾ | | 50,000 | 50,000 |

## 6.2.3 ಪ್ರತಿಫಲಕ್ಕಾಗಿ ಸಾಲಪತ್ರಗಳ ನೀಡಿಕೆ (Issue of debentures for Consideration):

ಕೆಲವೊಂದು ಸಮಯದಲ್ಲಿ ಕಂಪನಿಯು ಆಸ್ತಿಗಳನ್ನು ಕರಿದಿಸಿದಾಗ, ಈ ಆಸ್ತಿಗಳನ್ನು ಮಾರಾಟ ಮಾಡಿದವರಿಗೆ (ವೆಂಡಾರ್ಸ್) ನಗದು ರೂಪದಲ್ಲಿ ಹಣ ಸಂದಾಯ ಮಾಡದೆ ಅವರಿಗೆ ಸಾಲಪತ್ರಗಳನ್ನು ನೀಡಲಾಗುತ್ತದೆ. ಹೀಗೆ ಆಸ್ತಿಗಳನ್ನು ಕೊಂಡದಕ್ಕೆ ಪ್ರತಿಫಲವಾಗಿ ಸಾಲಪತ್ರಗಳನ್ನು ನೀಡುವುದಕ್ಕೆ ಪ್ರತಿಫಲಕ್ಕಾಗಿ ಸಾಲಪತ್ರಗಳ ನೀಡಿಕೆ ಎಂದು ಕರೆಯಲಾಗುವುದು. ಈ ಸಂದರ್ಭದಲ್ಲೂ ಸಹ ಸಾಲಪತ್ರಗಳನ್ನು ಅವುಗಳ ಮುಖಬೆಲೆಗೆ ಅಥವಾ ಅಧಿಕ ಬೆಲೆಗೆ ಅಥವಾ ಸೋಡಿಗೆ ನೀಡಲಾಗುವದು.

**ಸಾಲ ಪತ್ರಗಳನ್ನು ಪ್ರತಿಫಲಕ್ಕಾಗಿ ನೀಡಿದಾಗ ಮಾಡಬೇಕಾದ ದಾಖಲೆಗಳು:**

1. ಆಸ್ತಿಗಳನ್ನು ಖರೀದಿಸಿದಾಗ

| |
|---|
| ಆಸ್ತಿಗಳ ಖಾತೆಗೆ ಖರ್ಚು<br>ವೆಂಡಾರ್ಸ್ ಖಾತೆಗೆ ಜಮಾ |

2. (ಎ) ಸಾಲ ಪತ್ರಗಳನ್ನು ಮುಖಬೆಲೆ ನೀಡಿದಾಗ

| |
|---|
| ವೆಂಡಾರ್ಸ್ ಖಾತೆಗೆ ಖರ್ಚು<br>ಸಾಲಪತ್ರಗಳ ಖಾತೆಗೆ ಜಮಾ |

(ಬಿ) ಸಾಲಪತ್ರಗಳನ್ನು ಅಧಿಕ ಬೆಲೆಗೆ ನೀಡಿದಾಗ

| |
|---|
| ವೆಂಡಾರ್ಸ್ ಖಾತೆಗೆ ಖರ್ಚು<br>ಸಾಲಪತ್ರಗಳ ಖಾತೆಗೆ ಜಮಾ<br>ಪ್ರಿಮಿಯಂ ಖಾತೆಗೆ ಜಮಾ |

(ಸಿ) ಸಾಲ ಪತ್ರಗಳನ್ನು ಸೋಡಿಗೆ ನೀಡಿದಾಗ

| |
|---|
| ವೆಂಡಾರ್ಸ್ ಖಾತೆಗೆ ಖರ್ಚು<br>ಸೋಡಿ ಖಾತೆಗೆ ಖರ್ಚು<br>ಸಾಲಪತ್ರಗಳ ಖಾತೆಗೆ ಜಮಾ |

## ನಿದರ್ಶನ 32.

ಆಶೀರ್ವಾದ ಕಂಪನಿ ನಿಯಮಿತವು ಇನ್ನೊಂದು ಕಂಪನಿಯಿಂದ ₹ 2,00,000 ಬೆಲೆಯ ಆಸ್ತಿಗಳನ್ನು ಖರೀಸಲು ಒಪ್ಪಂದ ಮಾಡಿಕೊಂಡಿತು. ಆಸ್ತಿಗೆ ಪ್ರತಿಫಲವಾಗಿ ₹ 100 ಮೌಲ್ಯದ 2,000 10% ಸಾಲ ಪತ್ರಗಳನ್ನು ನೀಡಲು ತೀರ್ಮಾನಿಸಿತು.

ಈ ವ್ಯವಹಾರಗಳನ್ನು ಕಂಪನಿಯ ದಿನವಹಿಯಲ್ಲಿ ದಾಖಲಿಸಿ.

**ನಿರೂಪಣೆ :**

**ಆಶೀರ್ವಾದ ಕಂಪನಿ ನಿಯಮಿತ ದಿನವಹಿ**

| | ವಿವರಣೆ | ಪಾ.ಖಾ | ಖರ್ಚು | ಜಮಾ |
|---|---|---|---|---|
| 1 | ಆಸ್ತಿಗಳ ಖಾತೆಗೆ ಖರ್ಚು<br>ವೆಂಡಾರ್ಸ್ ಖಾತೆಗೆ ಜಮಾ<br>(ವೆಂಡಾರ್ಸ್‌ರಿಂದ ಆಸ್ತಿಗಳನ್ನು ಖರೀದಿಸಲಾಯಿತು.) | | 2,00,000 | <br>2,00,000 |
| 2. | ವೆಂಡಾರ್ಸ್ ಖಾತೆಗೆ ಖರ್ಚು<br>10% ಸಾಲಪತ್ರಗಳ ಖಾತೆಗೆ ಜಮಾ<br>(ಆಸ್ತಿಗಳ ಖರೀದಿಗೆ ಪ್ರತಿಫಲವಾಗಿ ಸಾಲಪತ್ರಗಳನ್ನು ನೀಡಲಾಯಿತು.) | | 2,00,000 | <br>2,00,000 |

## ನಿದರ್ಶನ 33.

ರೈ ಕಂಪನಿ ನಿಯಮಿತವು ಇನ್ನೊಂದು ಕಂಪನಿಯಿಂದ ₹ 5,50,000 ಪುಸ್ತಕ ಬೆಲೆಯ ಆಸ್ತಿಗಳನ್ನು ಖರೀಸಿತು. ಆಸ್ತಿಗೆ ಪ್ರತಿಫಲವಾಗಿ ₹ 100 ಮೌಲ್ಯದ 5,000 10% ಸಾಲ ಪತ್ರಗಳನ್ನು 10% ಅಧಿಕ ಬೆಲೆಗೆ ನೀಡಿತು.

ಈ ವ್ಯವಹಾರಗಳನ್ನು ಕಂಪನಿಯ ದಿನವಹಿಯಲ್ಲಿ ದಾಖಲಿಸಿ.

ನಿರೂಪಣೆ :

ರೈ ಕಂಪನಿ ನಿಯಮಿತ ದಿನವಹಿ

| | ವಿವರಣೆ | ಪಾ.ಖಾ | ಖರ್ಚು | ಜಮಾ |
|---|---|---|---|---|
| 1 | ಆಸ್ತಿಗಳ ಖಾತೆಗೆ ಖರ್ಚು | | 5,50,000 | |
| | ವೆಂಡಾರ್ಸ್ ಖಾತೆಗೆ ಜಮಾ | | | 5,50,000 |
| | (ವೆಂಡಾರ್ಸ್‌ರಿಂದ ಆಸ್ತಿಗಳನ್ನು ಖರೀದಿಸಲಾಯಿತು.) | | | |
| 2. | ವೆಂಡಾರ್ಸ್ ಖಾತೆಗೆ ಖರ್ಚು | | 5,50,000 | |
| | 10% ಸಾಲಪತ್ರಗಳ ಖಾತೆಗೆ ಜಮಾ | | | 5,00,000 |
| | ಪ್ರಿಮಿಯಂ ಖಾತೆಗೆ ಜಮಾ | | | 50,000 |
| | (ಆಸ್ತಿಗಳ ಖರೀದಿಗೆ ಪ್ರತಿಫಲವಾಗಿ ₹ 100 ಮೌಲ್ಯದ 5,000 10% ಸಾಲಪತ್ರಗಳನ್ನು 10% ಅಧಿಕ ಬೆಲೆಗೆ ನೀಡಲಾಯಿತು.) | | | |

## ನಿದರ್ಶನ 34.

ನ್ಯಾಶನಲ್ ಪ್ಯಾಕೆಜಿಂಗ್ ಕಂಪನಿ ನಿಯಮಿತವು ಇನ್ನೊಂದು ಕಂಪನಿಯಿಂದ ₹ 2,85,000 ಬೆಲೆಯ ಆಸ್ತಿಗಳನ್ನು ಖರೀದಿಸಿತು. ಆಸ್ತಿಗೆ ಪ್ರತಿಫಲವಾಗಿ ₹ 100 ಮೌಲ್ಯದ 3,000 12% ಸಾಲ ಪತ್ರಗಳನ್ನು 5% ಸೋಡಿಗೆ ನೀಡತು.

ಈ ವ್ಯವಹಾರಗಳನ್ನು ಕಂಪನಿಯ ದಿನವಹಿಯಲ್ಲಿ ದಾಖಲಿಸಿ.

ರೈ ಕಂಪನಿ ನಿಯಮಿತ ದಿನವಹಿ

| | ವಿವರಣೆ | ಪಾ.ಖಾ | ಖರ್ಚು | ಜಮಾ |
|---|---|---|---|---|
| 1 | ಆಸ್ತಿಗಳ ಖಾತೆಗೆ ಖರ್ಚು | | 2,85,000 | |
| | ವೆಂಡಾರ್ಸ್ ಖಾತೆಗೆ ಜಮಾ | | | 2,85,000 |
| | (ವೆಂಡಾರ್ಸ್‌ರಿಂದ ಆಸ್ತಿಗಳನ್ನು ಖರೀದಿಸಲಾಯಿತು.) | | | |
| 2. | ವೆಂಡಾರ್ಸ್ ಖಾತೆಗೆ ಖರ್ಚು | | 2,85,000 | |
| | ಸೋಡಿ ಖಾತೆಗೆ ಖರ್ಚು | | 15,000 | |
| | 12% ಸಾಲಪತ್ರಗಳ ಖಾತೆಗೆ ಜಮಾ | | | 3,00,000 |
| | (ಆಸ್ತಿಗಳ ಖರೀದಿಗೆ ಪ್ರತಿಫಲವಾಗಿ ₹ 100 ಮೌಲ್ಯದ 3,000 10% ಸಾಲಪತ್ರಗಳನ್ನು 5% ಸೋಡಿಗೆ ನೀಡಲಾಯಿತು.) | | | |

## ನಿದರ್ಶನ 35.

X ಕಂಪನಿ ನಿಯಮಿತವು Y ಕಂಪನಿಯಿಂದ ಈ ಕೆಳಗಿನ ಆಸ್ತಿಗಳನ್ನು ಖರೀದಿಸಿತು.

ಕಟ್ಟಡ ₹ 1,50,000 ಯಂತ್ರೋಪಕರಣಗಳು ₹ 1,00,000, ಪೀಠೋಪಕರಣಗಳು ₹ 40,000, ಕೀರ್ತಿ ಮೌಲ್ಯ ₹ 25,000. ಆಸ್ತಿಗಳಿಗೆ ಪ್ರತಿಫಲವಾಗಿ ₹ 100 ಮೌಲ್ಯದ 12% 3,000 ಸಾಲಪತ್ರಗಳನ್ನು 5% ಅಧಿಕ ಬೆಲೆಗೆ ನೀಡಿತು.

ಈ ವ್ಯವಹಾರವನ್ನು ಕಂಪನಿಯ ದಿನವಹಿಯಲ್ಲಿ ದಾಖಲಿಸಿ.

X ಕಂಪನಿ ನಿಯಮಿತ ದಿನವಹಿ

| | ವಿವರಣೆ | ಪಾ.ಖಾ | ಖರ್ಚು | ಜಮಾ |
|---|---|---|---|---|
| 1 | ಕಟ್ಟಡ ಖಾತೆಗೆ ಖರ್ಚು | | 1,50,000 | |
| | ಯಂತ್ರೋಪಕರಣಗಳ ಖಾತೆಗೆ ಖರ್ಚು | | 1,00,000 | |
| | ಪೀಠೋಪಕರಣಗಳ ಖಾತೆಗೆ ಖರ್ಚು | | 40,000 | |
| | ಕೀರ್ತಿಮೌಲ್ಯ ಖಾತೆಗೆ ಖರ್ಚು | | 25,000 | |
| | Y ಕಂಪನಿ ಖಾತೆಗೆ ಜಮಾ | | | 3,15,000 |
| | (Y ಕಂಪನಿಯಿಂದ ಮೇಲಿನ ಆಸ್ತಿಗಳನ್ನು ಖರೀದಿಸಲಾಯಿತು.) | | | |
| 2. | Y ಕಂಪನಿ ಖಾತೆಗೆ ಖರ್ಚು | | 3,15,000 | |
| | 12% ಸಾಲಪತ್ರಗಳ ಖಾತೆಗೆ ಜಮಾ | | | 3,00,000 |
| | ಪ್ರಿಮಿಯಂ ಖಾತೆಗೆ ಜಮಾ | | | 15,000 |
| | (ಆಸ್ತಿಗಳ ಖರೀದಿಗೆ ಪ್ರತಿಫಲವಾಗಿ ₹ 100 ಮೌಲ್ಯದ 3,000 12% ಸಾಲಪತ್ರಗಳನ್ನು 5% ಅಧಿಕ ಬೆಲೆಗೆ ನೀಡಲಾಯಿತು) | | | |

**The above processes of raising share capital is included here as a part of the curriculum and is still included in the Companies Act-2013. However, at present the companies are following "Book Building Process" for raising share capital. Hence, a small introduction about the "Book Building" is given as under; for reference only:**

## Book Building Process:

Book Building is a process used by companies raising capital through Public Offerings for either **Initial Public Offers (IPOs) or Follow-on Public Offers (FPOs)** to aid price and demand discovery. It is a process where the bids are collected from the potential investors at various prices within the price band, which they are ready to pay for the shares. The issue price is determined after the bid closure based on the demand generated in the process.

**Price Band** - 20 % price band (difference between the highest and lowest price of the share) is offered by the issuer within which investors are allowed to bid and the final price is determined by the issuer only after closure of the bidding. Demand for the securities offered, and at various prices, is available on a real time basis on the BSE website during the bidding period.

**Payment** - 10% advance payment is required to be made by the **'Qualified Institutional Buyers' (QIBs)** along with the application, while other categories of investors have to pay 100 % advance along with the application.

The Qualified Institutional Buyers" includes public financial institutions, mutual funds, foreign institutional investors, venture capital funds and foreign venture capital funds registered with the SEBI)

**Reservations** - 50% of shares offered are reserved for **QIBS**, 35% for small investors and the balance for all other investors.

**The Process**:

- The Issuer who is planning an offer nominates lead merchant banker(s) as 'book runners'.
- The Issuer specifies the number of securities to be issued and the price band for the bids.
- The Issuer also appoints syndicate members with whom orders are to be placed by the investors.
- The syndicate members input the orders into an 'electronic book'. This process is called 'bidding' and is similar to open auction.
- The book normally remains open for a period of 5 days.
- Bids have to be entered within the specified price band.
- Bids can be revised by the bidders before the book closes.
- On the close of the book building period, the book runners evaluate the bids on the basis of the demand at various price levels.
- The book runners and the Issuer decide the final price at which the securities shall be issued.
- Generally, the number of shares are fixed, the issue size gets frozen based on the final price per share.

Allocation of securities is made to the successful bidders. The rest get refund orders.

## ಅಭ್ಯಾಸಗಳು (Exercises)

### ವಿಭಾಗ – ಎ (Section – A )

**ಎರಡು ಅಂಕದ ಪ್ರಶ್ನೆಗಳು:**

(1) ಕಂಪನಿ ಎಂದರೇನು ?

(2) ಕೂಡುಬಂಡವಾಳ ಸಂಸ್ಥೆಯ ಎರಡು ಪ್ರಕಾರಗಳನ್ನು ತಿಳಿಸಿರಿ.

(3) ಶೇರು ಎಂದರೇನು?

(4) ಸಾರ್ವಜನಿಕ ಕಂಪನಿಯು ನೀಡುವ ವಿವಿಧ ಪ್ರಕಾರದ ಶೇರುಗಳನ್ನು ತಿಳಿಸಿ.

(5) ಅಧಿಕೃತ ಬಂಡವಾಳ ಎಂದರೇನು?

(6) ನೀಡಿದ ಬಂಡವಾಳದ ಅರ್ಥ ತಿಳಿಸಿ.

(7) ಕರೆಮಾಡಿದ ಬಂಡವಾಳದ ಅರ್ಥ ತಿಳಿಸಿ.

(8) ಸಂದಾಯವಾದ ಬಂಡವಾಳದ ಅರ್ಥ ತಿಳಿಸಿ.

(9) ಓವರ್ ಸಬ್‌ಸ್ಕ್ರಿಪ್ಷನ್ ಎಂದರೇನು?

(10) ಅಂಡರ್ ಸಬ್‌ಸ್ಕ್ರಿಪ್ಷನ್ ಎಂದರೇನು?

(11) ಕರೆ ಎಂದರೇನು ?

(12) ಸಾಮಾನ್ಯ ಶೇರುಗಳೆಂದರೆ ಯಾವವು?

(13) ಪ್ರಥಮ ಹಕ್ಕಿನ ಶೇರುಗಳೆಂದರೆ ಯಾವುವು?

(14) ಶೇರುಗಳ ಮುಖಬೆಲೆಗೆ ನೀಡಿಕೆ ಎಂದರೇನು?

(15) ಶೇರುಗಳ ಅಧಿಕ ಬೆಲೆಗೆ ನೀಡಿಕೆ ಎಂದರೇನು?

(16) ಶೇರುಗಳ ಸೋಡಿಗೆ ನೀಡಿಕೆ ಎಂದರೇನು?

(17) ಕರೆಗಳ ಬಾಕಿ ಎಂದರೇನು?

(18) ಮುಂಗಡ ಕರೆಗಳು ಎಂದರೇನು?

(19) ಶೇರುಗಳ ಮುಟ್ಟುಗೋಲು ಎಂದರೇನು?

(20) ಶೇರುಗಳನ್ನು ಏಕೆ ಮುಟ್ಟುಗೋಲು ಹಾಕಿ ಕೊಳ್ಳಲಾಗುತ್ತದೆ?

(21) ಮುಟ್ಟುಗೋಲಾದ ಶೇರುಗಳ ಮರು ನೀಡಿಕೆ ಎಂದರೇನು?

(22) ಸಾಲಪತ್ರಗಳೆಂದರೇನು?

(23) ಸಾಲಪತ್ರಗಳ ಯಾವುದಾರೂ ಎರಡು ಪ್ರಕಾರಗಳನ್ನು ತಿಳಿಸಿ.

## ವಿಭಾಗ – ಬಿ (Section – B )

### ಐದು ಅಂಕದ ಪ್ರಶ್ನೆಗಳು:

(1) ಸ್ಫೂರ್ತಿ ಕಂಪನಿ ನಿಯಮಿತವು ₹ 10 ಮುಖಬೆಲೆಯ 10,000 ಸಾಮಾನ್ಯ ಶೇರುಗಳನ್ನು ಸಾರ್ವಜನಿಕರಿಗೆ ನೀಡಿತು. ಪ್ರತಿ ಶೇರಿಗೆ ₹ 2 ಅರ್ಜಿಯ ಜೊತೆಗೆ ₹ 2 ಹಂಚಿಕೆಯಾದ ನಂತರ ₹ 3 ಮೊದಲ ಕರೆ ₹ 3 ಅಂತಿಮ ಕರೆಯ ಹಣವೆಂದು ಕೊಡಬೇಕೆಂದು ನಿರ್ಣಯಿಸಿತು.

ಸಾರ್ವಜನಿಕರಿಂದ ಎಲ್ಲಾ ಶೇರುಗಳು ಕೊಳ್ಳಲ್ಪಟ್ಟವು ಹಾಗೂ ಎಲ್ಲಾ ಹಣವೂ ಸಂದಾಯವಾಯಿತು.

ಮೇಲಿನ ವ್ಯವಹಾರಗಳಿಗೆ ಅವಶ್ಯಕ ರೋಜುದಾಖಲೆ ಬರೆಯಿರಿ.

(2) ಬೆಂಗಳೂರು ಕಂಪನಿ ನಿಯಮಿತವು ₹ 100 ಮುಖಬೆಲೆಯ 5,000 ಪ್ರಥಮ ಹಕ್ಕಿನ ಶೇರುಗಳನ್ನು ಸಾರ್ವಜನಿಕರಿಗೆ ನೀಡಿತು. ಪ್ರತಿ ಶೇರಿಗೆ ₹ 10 ಅರ್ಜಿಯ ಜೊತೆಗೆ ₹ 50 ಹಂಚಿಕೆಯಾದ ನಂತರ ₹ 40 ಪ್ರಥಮ ಹಾಗೂ ಅಂತಿಮ ಕರೆಯ ಹಣವೆಂದು ಕೊಡಬೇಕೆಂದು ನಿರ್ಣಯಿಸಿತು.

ಸಾರ್ವಜನಿಕರಿಂದ ಎಲ್ಲಾ ಶೇರುಗಳು ಕೊಳ್ಳಲ್ಪಟ್ಟವು ಹಾಗೂ ಎಲ್ಲಾ ಹಣವೂ ಸಂದಾಯವಾಯಿತು.

ಮೇಲಿನ ವ್ಯವಹಾರಗಳಿಗೆ ಅವಶ್ಯಕ ರೋಜುದಾಖಲೆ ಬರೆಯಿರಿ.

(3) ಭಾರತ್ ಟ್ರೇಡಿಂಗ್ ಕಂಪನಿ ನಿಯಮಿತವು ₹ 100 ಮುಖಬೆಲೆಯ 20,000 ಶೇರುಗಳನ್ನು ಸಾರ್ವಜನಿಕರಿಗೆ ನೀಡಿತು. ಪ್ರತಿ ಶೇರಿಗೆ ₹ 20 ಅರ್ಜಿಯ ಜೊತೆಗೆ ₹ 40 ಹಂಚಿಕೆಯಾದ ನಂತರ ₹ 40 ಪ್ರಥಮ ಹಾಗೂ ಅಂತಿಮ ಕರೆಯ ಹಣವೆಂದು ಕೊಡಬೇಕೆಂದು ನಿರ್ಣಯಿಸಿತು.

ಸಾರ್ವಜನಿಕರಿಂದ ಎಲ್ಲಾ ಶೇರುಗಳು ಕೊಳ್ಳಲ್ಪಟ್ಟವು ಹಾಗೂ ಎಲ್ಲಾ ಹಣವೂ ಸಂದಾಯವಾಯಿತು.

ಮೇಲಿನ ವ್ಯವಹಾರಗಳಿಗೆ ಅವಶ್ಯಕ ರೋಜುದಾಖಲೆ ಬರೆಯಿರಿ.

(4) ಗುಜರಾತ್ ಟ್ರೇಡಿಂಗ್ ಕಂಪನಿ ನಿಯಮಿತವು ₹ 10 ಮುಖಬೆಲೆಯ 5,000 ಶೇರುಗಳನ್ನು ಸಾರ್ವಜನಿಕರಿಗೆ ನೀಡಿತು. ಪ್ರತಿ ಶೇರಿಗೆ ₹ 2 ಅರ್ಜಿಯ ಜೊತೆಗೆ ₹ 3 ಹಂಚಿಕೆಯಾದ ನಂತರ ₹ 5 ಪ್ರಥಮ ಹಾಗೂ ಅಂತಿಮ ಕರೆಯ ಹಣವೆಂದು ಕೊಡಬೇಕೆಂದು ನಿರ್ಣಯಿಸಿತು.

ಸಾರ್ವಜನಿಕರಿಂದ ಎಲ್ಲಾ ಶೇರುಗಳು ಕೊಳ್ಳಲ್ಪಟ್ಟವು ಹಾಗೂ ಎಲ್ಲಾ ಹಣವೂ ಸಂದಾಯವಾಯಿತು.

ಮೇಲಿನ ವ್ಯವಹಾರಗಳಿಗೆ ಅವಶ್ಯಕ ರೋಜುದಾಖಲೆ ಬರೆಯಿರಿ.

(5) ಚೈತ್ರಾ ಕಂಪನಿ ನಿಯಮಿತವು ₹ 100 ಮುಖಬೆಲೆಯ 1,000 ಸಾಮಾನ್ಯ ಶೇರುಗಳನ್ನು ₹ 20 ಪ್ರಿಮಿಯಂಗೆ ಸಾರ್ವಜನಿಕರಿಗೆ ನೀಡಿತು. ಪ್ರತಿ ಶೇರಿಗೆ ₹ 25 ಅರ್ಜಿಯ ಜೊತೆಗೆ ₹ 45 ಹಂಚಿಕೆಯಾದ ನಂತರ (ಪ್ರಿಮಿಯಂ ಸೇರಿ)₹ 50 ಪ್ರಥಮ ಹಾಗೂ ಅಂತಿಮ ಕರೆಯ ಹಣವೆಂದು ಕೊಡಬೇಕೆಂದು ನಿರ್ಣಯಿಸಿತು. ಸಾರ್ವಜನಿಕರಿಂದ ಎಲ್ಲಾ ಶೇರುಗಳು ಕೊಳ್ಳಲ್ಪಟ್ಟವು. 20 ಶೇರುಗಳ ಮೇಲಿನ ಪ್ರಥಮ ಹಾಗೂ ಅಂತಿಮ ಕರೆಯ ಹಣ ಹೊರತು ಪಡಿಸಿ ಎಲ್ಲಾ ಹಣವೂ ಸಂದಾಯವಾಯಿತು.

ಮೇಲಿನ ವ್ಯವಹಾರಗಳಿಗೆ ಅವಶ್ಯಕ ರೋಜುದಾಖಲೆ ಬರೆಯಿರಿ.

(6) X ಕಂಪನಿ ನಿಯಮಿತವು ₹ 10 ಮುಖಬೆಲೆಯ 1,00,00 ಶೇರುಗಳನ್ನು 10% ಸೋಡಿಗೆ ನೀಡಲು ತೀರ್ಮಾನಿಸಿತು. ₹ 2 ಅರ್ಜಿಯ ಜೊತೆಗೆ ₹ 3 ಹಂಚಿಕೆಯಾದ ಸಮಯದಲ್ಲಿ ₹ 4 ಪ್ರಥಮ ಹಾಗೂ ಅಂತಿಮ ಕರೆ ಹಣವೆಂದು ಕೊಡಬೇಕೆಂದು ನಿರ್ಣಯಿಸಿತು. ಎಲ್ಲ ಶೇರುಗಳನ್ನು ಕೊಳ್ಳಲ್ಪಟ್ಟವು ಹಾಗೂ ಎಲ್ಲಾ ಹಣ ಪಡೆಯಲಾಯಿತು.

ದಿನವಹಿ ಪುಸ್ತಕ ಬರೆಯಿರಿ.

(7) ಗೌತಮ ಟ್ರೇಡಿಂಗ್ ಕಂಪನಿ ನಿಯಮಿತವು 1,000 ಸಾಮಾನ್ಯ ಶೇರುಗಳ ಮೇಲಿನ ಅಂತಿಮ ಕರೆಯ ಹಣ ₹ 3 ಪಾವತಿಸದೇ ಇದ್ದುದಕ್ಕೆ ಮುಟ್ಟುಗೋಲು ಹಾಕಿಕೊಂಡಿತು. ಈ ಶೇರುಗಳನ್ನು ₹ 8 ಪೂರ್ಣ ಸಂದಾಯವೆಂದು ಮರು ಮಾರಾಟ ಮಾಡಿತು.

ಮೇಲಿನ ವ್ಯವಹಾರಗಳಿಗೆ ಅವಶ್ಯಕ ರೋಜುದಾಖಲೆ ಬರೆಯಿರಿ.

(8) ಗುಡ್‌ವಿಲ್ ನಿಯಮಿತ ಕಂಪನಿಯು ₹ 100 ಮುಖಬೆಲೆಯ 1,00,00 ಸಾಮಾನ್ಯ ಶೇರುಗಳನ್ನು ನೀಡಿತು. 100 ಶೇರುಗಳ ಮೇಲಿನ ಅಂತಿಮ ಕರೆ ಹಣ ರೂ 30 ಸಂದಾಯವಾಗದೇ ಇದ್ದುದಕ್ಕೆ ಆ ಶೇರುಗಳನ್ನು ಮುಟ್ಟುಗೋಲು ಹಾಕಿ ಕೊಳ್ಳಲಾಯಿತು. ಇದೇ ಶೇರುಗಳನ್ನು ₹ 70 ಪೂರ್ಣ ಸಂದಾಯವೆಂದು, ಮರು ಮಾರಾಟ ಮಾಡಿತು. ಮುಟ್ಟುಗೋಲು ಹಾಗೂ ಮರು ಮಾರಾಟ ಮಾಡಿತು.

ಮುಟ್ಟುಗೋಲು ಹಾಗೂ ಮರು ಮಾರಾಟಕ್ಕೆ ಸಂಬಂಧಿಸಿದಂತೆ ದಿನವಹಿ ಪುಸ್ತಕದಲ್ಲಿ ಬರೆಯಿರಿ.

(9) X ಕಂಪನಿ ನಿಯಮಿತವು ₹ 10 ಮುಖಬೆಲೆಯ 1,000 ಸಾಮಾನ್ಯ ಶೇರುಗಳನ್ನು ಮೊದಲ ಕರೆಯ ಹಣ ₹ 2 ಹಾಗೂ ಅಂತಿಮ ಕರೆಯ ಹಣ ₹ 2 ಪಾವತಿಸದೇ ಇದ್ದುದಕ್ಕೆ ಮುಟ್ಟುಗೋಲು ಹಾಕಿಕೊಂಡಿತು. ಈ ಶೇರುಗಳನ್ನು ₹ 7 ಪೂರ್ಣ ಸಂದಾಯವೆಂದು ಮರು ಮಾರಾಟ ಮಾಡಿತು.

ಮೇಲಿನ ವ್ಯವಹಾರಗಳನ್ನು ದಿನವಹಿಯಲ್ಲಿ ಬರೆಯಿರಿ.

(10) ಸ್ವಪ್ನ ಕಂಪನಿ ನಿಯಮಿತವು ₹ 10 ಮುಖಬೆಲೆಯ 300 ಸಾಮಾನ್ಯ ಶೇರುಗಳನ್ನು ಮೊದಲ ಕರೆ ₹ 2 ಹಾಗೂ ಅಂತಿಮ ಕರೆಯ ಹಣ ₹ 3 ಸಂದಾಯವಾಗದೇ ಇದ್ದುದಕ್ಕೆ ಮುಟ್ಟುಗೋಲು ಹಾಕಿಕೊಂಡಿತು. ಈ ಶೇರುಗಳನ್ನು ₹ 8 ಕ್ಕೆ ಪೂರ್ಣ ಸಂದಾಯವೆಂದು ಮರು ಮಾರಾಟ ಮಾಡಿತು.

ಅವಶ್ಯಕ ರೋಜು ದಾಖಲೆ ಬರೆಯಿರಿ.

(11) ಕೃಷ್ಣ ಕಂಪನಿ ನಿಯಮಿತವು ₹ 10 ಮುಖಬೆಲೆಯ 10,000 ಸಾಮಾನ್ಯ ಶೇರುಗಳನ್ನು ₹ 3 ಅಧಿಕ ಮೌಲ್ಯಕ್ಕೆ ಸಾರ್ವಜನಿಕ ವಂತಿಗೆಗೆ ನೀಡಿತು. ರಾಮನು 400 ಶೇರುಗಳನ್ನು ಕೊಡಿದ್ದನು. ಅವನು ಅಂತಿಮ ಕರೆಯ ಹಣ ₹ 3 ಬಾಕಿ ಉಳಿಸಿಕೊಂಡನು. ಕಂಪನಿಯು ಈ ಶೇರುಗಳನ್ನು ಮುಟ್ಟುಗೋಲು ಹಾಕಿಕೊಂಡು ಲಕ್ಷ್ಮಣ ಎಂಬುವವರಿಗೆ ₹ 7 ಪೂರ್ಣ ಸಂದಾಯವೆಂದು ಮರು ಮಾರಾಟ ಮಾಡಿತು.

ಶೇರುಗಳ ರದ್ಧತಿ ಹಾಗೂ ಮರು ನೀಡಿಕೆಗೆ ಸಂಬಧಿಸಿದಂತೆ ರೋಜು ದಾಖಲೆ ಬರೆಯಿರಿ.

(12) ದುರ್ಗಿ ಟ್ರೇಡಿಂಗ್ ಕಂಪನಿಯು ₹ 10 ಮುಖಬೆಲೆಯ 5000 ಶೇರುಗಳನ್ನು ಅಂತಿಮ ಕರೆಯ ಹಣ ₹ 3 ಸಂದಾಯ ಮಾಡದೇ ಇದ್ದುದಕ್ಕೆ ಮುಟ್ಟುಗೋಲು ಹಾಕಿಕೊಂಡಿತು. ಈ ಶೇರುಗಳನ್ನು ₹ 7 ಪೂರ್ಣ ಸಂದಾಯವೆಂದು ಮರು ಮಾರಾಟ ಮಾಡಿತು.

ಈ ವ್ಯವಹಾರಗಳನ್ನು ಕಂಪನಿಯ ದಿನವಹಿ ಪುಸ್ತಕದಲ್ಲಿ ಬರೆಯಿರಿ.

(13) ಒಂದು ಕಂಪನಿಯು ₹ 100 ಮುಖ ಬೆಲೆಯ 5,000 12% ಸಾಲಪತ್ರಗಳನ್ನು ನೀಡಿತು. ₹ 20 ಅರ್ಜಿಯ ಜೊತೆಗೆ ₹ 30 ಹಂಚಿಕೆಯ ನಂತರ ಮತ್ತು ಉಳಿದ ಹಣವನ್ನು ಮೊದಲ ಹಾಗೂ ಅಂತಿಮ ಕರೆ ಎಂದು ಪಾವತಿಸಲು ಸೂಚಿಸಿತು.

ಮೇಲಿನ ವ್ಯವಹಾರಗಳನ್ನು ಕಂಪನಿಯ ದಿನವಹಿಯಲ್ಲಿ ಬರೆಯಿರಿ.

(14) ಹಿಂದೂಸ್ಥಾನ ಕಂಪನಿ ನಿಯಮಿತವು ₹ 100 ಮುಖಬೆಲೆಯ 12,000 6% ಸಾಲಪತ್ರಗಳನ್ನು ನೀಡಿತು. ಹಣವನ್ನು ಈ ಕೆಳಗಿನಂತೆ ಪಾವತಿಸಲು ಸೂಚಿಸಿತು.

₹ 20 ಅರ್ಜಿಯ ಜೊತೆಗೆ

₹ 40 ಹಂಚಿಕೆಯಾದ ನಂತರ 10ರೂ (ಪ್ರಿಮಿಯಂ ಸೇರಿ)

₹ 30 ಪ್ರಥಮ ಹಾಗೂ ಅಂತಿಮ ಕರೆ ಸಾರ್ವಜನಿಕರಿಂದ ಎಲ್ಲಾ ಸಾಲಪತ್ರಗಳು ಕೊಳ್ಳಲ್ಪಟ್ಟವು ಹಾಗೂ ಎಲ್ಲಾ ಹಣವೂ ಸಂದಾಯವಾಯಿತು. ಈ ವ್ಯವಹಾರಗಳನ್ನು ಕಂಪನಿಯ ರೋಜು ಪುಸ್ತಕದಲ್ಲಿ ಬರೆಯಿರಿ.

(15) ಗಣೇಶ ಕಂಪನಿ ನಿಯಮಿತವು 100 ₹ ಮುಖಬೆಲೆಯ 10,000 6% ಸಾಲಪತ್ರಗಳನ್ನು 10% ಸೋಡಿಗೆ ಮಾರಾಟ ಮಾಡಿತು. ಅರ್ಜಿಯ ಜೊತೆಗೆ ₹ 20. ಹಂಚಿಕೆಯಾದ ನಂತರ ₹ 40 ಹಾಗೂ ಪ್ರಥಮ ಹಾಗೂ ಅಂತಿಮ ಕರೆ ₹ 50 ಪಾವತಿಸುವಂತೆ ಸೂಚಿಸಿತು.

ಎಲ್ಲಾ ಸಾಲಪತ್ರಗಳು ಕೊಳ್ಳಲ್ಪಟ್ಟವು ಹಾಗೂ ಹಣ ಸಂದಾಯವಾಯಿತು. ಈ ವ್ಯವಹಾರಗಳನ್ನು ಕಂಪನಿಯ ದಿನವಹಿಯಲ್ಲಿ ಬರೆಯಿರಿ.

(16) ಕಂಪನಿ ನಿಯಮಿತವು ಇನ್ನೊಂದು ಕಂಪನಿಯ ₹ 5,00,000 ಮೌಲ್ಯದ ಸ್ಥಿರಾಸ್ತಿಗಳನ್ನು ಕೊಂಡಿತು. ಇದಕ್ಕೆ ಪ್ರತಿಯಾಗಿ ₹ 100 ಮುಖಬೆಲೆಯ 5,000 8% ಡಿಬೆಂಚರುಗಳನ್ನು ನೀಡಿತು.

ಈ ವ್ಯವಹಾರವನ್ನು ಕಂಪನಿಯ ದಿನವಹಿಯಲ್ಲಿ ಬರೆಯಿರಿ.

(17) ಹುಬ್ಬಳಿ ಟೆಕ್ಸ್‌ಟೈಲ್ ನಿಯಮಿತವು 100 ₹ ಮುಖಬೆಲೆಯ 20,000 8% ಸಾಲಪತ್ರಗಳನ್ನು ₹ 10 ಅಧಿಕ ಮೌಲ್ಯಕ್ಕೆ ನೀಡಿತು. ₹ 20 ಅರ್ಜಿಯ ಜೊತೆಗೆ ₹ 50 ಹಂಚಿಕೆಯ ನಂತರ (ಪ್ರಿಮಿಯಂ ಸೇರಿ) ₹ 40 ಮೊದಲ ಹಾಗೂ ಅಂತಿಮ ಕರೆಯ ಹಣವೆಂದು ಪಾವತಿಸಲು ಸೂಚಿಸಿತು. ಎಲ್ಲಾ ಸಾಲಪತ್ರಗಳು ಕೊಳ್ಳಲ್ಪಟ್ಟವು. ಈ ವ್ಯವಹಾರಳಿಗೆ ರೋಜು ದಾಖಲೆ ಬರೆಯಿರಿ.

(18) X ಕಂಪನಿ ನಿಯಮಿತವು 10 ₹ ಮುಖಬೆಲಯ 5,000 ಪ್ರಥಮ ಹಕ್ಕಿನ ಶೇರುಗಳನ್ನ ನೀಡಿತು. ಶೇರಿನ ಹಣವನ್ನು ಅರ್ಜಿಯ ಜೊತೆಗೆ ₹ 2 ಹಂಚಿಕೆಯಾದ ನಂತರ ₹ 3 ಮೊದಲ ಹಾಗೂ ಅಂತಿಮ ಕರೆ ₹ 5 ನೀಡಬೇಕೆಂದು ತಿಳಿಸಿತು. ಎಲ್ಲಾ ಶೇರುಗಳು ಕೊಳ್ಳಲ್ಪಟ್ಟವು. ಒಬ್ಬ ಶೇರುದಾರನು ತಾನು ಹೊಂದಿದ 500 ಶೇರುಗಳ ಮೇಲಿನ ಎಲ್ಲಾ ಹಣವನ್ನು ಹಂಚಿಕೆಯ ಹಣದೊಂದಿಗೆ ಸಂದಾಯ ಮಾಡಿದನು ಈ ವ್ಯವಹಾರಗಳನ್ನು ರೋಜು ದಾಖಲೆಯಲ್ಲಿ ಬರೆಯಿರಿ.

(19) ದಾವಣಗೇರಿ ಮಿಲ್ಸ್ ನಿಯಮಿತವು 10ರೂ ಮೌಲ್ಯದ 4,000 ಶೇರುಗಳನ್ನು ಹಂಚಿಕೆ ಮಾಡಿತು. ಶೇರುಗಳ ಹಣವನ್ನು ಪ್ರತಿ ಶೇರಿಗೆ ಅರ್ಜಿಯ ಜೊತೆಗೆ ₹ 1 ಹಂಚಿಕೆಯ ಸಮಯದಲ್ಲಿ ₹ 2 ಹಾಗೂ ಪ್ರಥಮ ಕರೆ ₹ 3 ಪಾವತಿಸಬೇಕೆಂದು ಸೂಚಿಸಿತು. ಹಂಚಿಕೆಯ ಎಲ್ಲಾ ಹಣವನ್ನು ಪಡೆಯಲಾಯಿತು. ಆದರೆ ಪ್ರಥಮ

ಕರೆ ಮಾಡಿದಾಗ ಒಬ್ಬ ಶೇರುದಾರನು ತಾನು ಕೊಂಡ 300 ಶೇರುಗಳ ಹಣವನ್ನು ಕರೆಯ ಹಣದೊಂದಿಗೆ ತನ್ನ ಶೇರುಗಳ ಮೇಲಿನ ಪೂರ್ಣ ಹಣವನ್ನು ಮುಂಗಡ ಕೊಟ್ಟನು. ಈ ವ್ಯವಹಾರಗಳನ್ನು ರೋಜು ದಾಖಲೆಯಲ್ಲಿ ಬರೆಯಿರಿ.

(20) 'Z' ಕಂಪನಿ ನಿಯಮಿತವು ₹ 1,00,000 ಮೌಲ್ಯದ ಇನ್ನೊಂದು ಕಂಪನಿಯ ಆಸ್ತಿಗಳನ್ನು ಖರೀದಿಸಿತು. ಇದಕ್ಕೆ ಪ್ರತಿಫಲವಾಗಿ ₹ 100 ಮುಖಬೆಲೆಯ 1,000 8% ಸಾಲಪತ್ರಗಳನ್ನು ನೀಡಿತು. ಈ ವ್ಯವಹಾರವನ್ನು ಕಂಪನಿಯ ದಿನವಹಿಯಲ್ಲಿ ದಾಖಲಿಸಿರಿ.

(21) ಸೂರಜ್ ಕಂಪನಿ ನಿಯಮಿತವು ₹ 1,00,000 ಮೌಲ್ಯದ ಕಟ್ಟಡ ₹ 40,000 ಮೌಲ್ಯದ ಯಂತ್ರೋಪಕರಣಗಳು ಮತ್ತು ರೂ. 10,000 ಪೀಠೋಪಕರಣಗಳನ್ನು ಖರೀದಿಸಿತು. ಇದಕ್ಕೆ ಪ್ರತಿಯಾಗಿ ₹ 100 ಮೌಲ್ಯದ 1,500 12% ಸಾಲಪತ್ರಗಳನ್ನು ನೀಡಿತು. ಮೇಲಿನ ವ್ಯವಹಾರವನ್ನು ಕಂಪನಿಯ ದಿನವಹಿಯಲ್ಲಿ ದಾಖಲಿಸಿ.

## ವಿಭಾಗ – ಸಿ (Section –C )

### ಹದಿನಾಲ್ಕು ಅಂಕದ ಪ್ರಶ್ನೆಗಳು :

(1) ಇಲಕಲ ಗ್ರನೈಟ್ಸ್ ನಿಯಮಿತ ಕಂಪನಿಯ ನೋಂದಾಯಿತ ಬಂಡವಾಳವು ₹ 10 ಮುಖಬೆಲೆಯ 10,000 ಶೇರುಗಳನ್ನು ಸಾರ್ವಜನಿಕರ ವಂತಿಗೆಗೆ ಬಿಡುಗಡೆ ಮಾಡಿತು. ₹ 2 ಅರ್ಜಿಯ ಜೊತೆಗೆ ₹ 3 ಹಂಚಿಕೆಯಾದ ನಂತರ ₹ 5 ಮೊದಲ ಹಾಗೂ ಅಂತಿಮ ಕರೆ ಹಣ ನೀಡಬೇಕೆಂದು ಸೂಚಿಸಿತು. ಎಲ್ಲಾ ಶೇರುಗಳು ಕೊಳ್ಳಲ್ಪಟ್ಟವು ಮತ್ತು 1,000 ಶೇರುಗಳ ಮೇಲಿನ ಮೊದಲ ಹಾಗೂ ಅಂತಿಮ ಕರೆ ಹಣ ಹೊರತುಪಡಿಸಿ ಉಳಿದೆಲ್ಲಾ ಹಣ ಸಂದಾಯವಾಯಿತು. ಈ ಶೇರುಗಳನ್ನು ಮುಟ್ಟುಗೋಲು ಹಾಕಿಕೊಂಡು ಪ್ರತಿ ಶೇರಿಗೆ ₹ 8 ರಂತೆ ಮರು ಮಾರಾಟ ಮಾಡಲಾಯಿತು.

ಮೇಲಿನ ವ್ಯವಹಾರಗಳಿಗೆ ಅವಶ್ಯಕ ರೋಜುದಾಖಲೆ ಬರೆಯಿರಿ.

(2) ಅಜಿತ್ ಟ್ರೇಡಿಂಗ್ ಕಂಪನಿ ನಿಯಮಿತವು ₹ 100 ಮುಖಬೆಲೆಯ 10,000 ಶೇರುಗಳನ್ನು 5% ಸೋಡಿಗೆ ನೀಡಿತು. ಶೇರುಗಳ ಹಣವನ್ನು ಈ ಕೆಳಗಿನಂತೆ ಪಾವತಿಸಲು ಸೂಚಿಸಿತು.

₹ 25 ಅರ್ಜಿಯೊಂದಿಗೆ

₹ 40 ಹಂಚಿಕೆಯಾದ ನಂತರ (ಸೋಡಿ ದಾಖಲಿಸುವುದು)

₹ 30 ಮೊದಲ ಹಾಗೂ ಅಂತಿಮ ಕರೆ

ಎಲ್ಲಾ ಶೇರುಗಳು ಕೊಳ್ಳಲ್ಪಟ್ಟವು. 1,000 ಶೇರುಗಳ ಮೇಲಿನ ಪ್ರಥಮ ಹಾಗೂ ಅಂತಿಮ ಕರೆಯ ಹಣ ಬಾಕಿ ನಿಂತಿತು. ಈ ಶೇರುಗಳನ್ನು ಮುಟ್ಟುಗೋಲು ಹಾಕಿಕೊಂಡು ಪ್ರತಿ ಶೇರಿಗೆ ₹ 70 ರಂತೆ ಮರು ಮಾರಾಟ ಮಾಡಲಾಯಿತು.

ಈ ವ್ಯವಹಾರಗಳನ್ನು ಕಂಪನಿಯ ದಿನವಹಿಯಲ್ಲಿ ಬರೆಯಿರಿ.

(3) ಕರ್ನಾಟಕ ಮೈನಿಂಗ್ ಕಂಪನಿ ನಿಯಮಿತವು ₹ 100 ಮುಖಬೆಲೆಯ 40,000 ಸಾಮಾನ್ಯ ಶೇರುಗಳನ್ನು 10% ಸೋಡಿಗೆ ನೀಡಿತು. ಶೇರುಗಳ ಹಣವನ್ನು ಈ ಕೆಳಗಿನಂತೆ ಪಾವತಿಸಲು ಸೂಚಿಸಿತು.

₹ 10 ಅರ್ಜಿಯೊಂದಿಗೆ

₹ 30 ಹಂಚಿಕೆಯಾದ ನಂತರ (ಸೋಡಿ ದಾಖಲಿಸುವುದು)

₹ 50 ಮೊದಲ ಹಾಗೂ ಅಂತಿಮ ಕರೆ

ಸಾರ್ವಜನಿಕರಿಂದ 36,000 ಶೇರುಗಳಿಗೆ ಅರ್ಜಿಬಂದವು. ಎಲ್ಲಾ ಶೇರುಗಳನ್ನು ಹಂಚಿಕೆ ಮಾಡಲಾಯಿತು. 4,000 ಶೇರುಗಳ ಮೇಲಿನ ಪ್ರಥಮ ಹಾಗೂ ಅಂತಿಮ ಕರೆಯ ಹಣ ಬಾಕಿ ನಿಂತಿತು. ಈ ಶೇರುಗಳನ್ನು ಮುಟ್ಟುಗೋಲು ಹಾಕಿಕೊಂಡು ಪ್ರತಿ ಶೇರಿಗೆ ₹ 80 ರಂತೆ ಮರು ಮಾರಾಟ ಮಾಡಲಾಯಿತು.

ಈ ವ್ಯವಹಾರಗಳನ್ನು ಕಂಪನಿಯ ದಿನವಹಿಯಲ್ಲಿ ಬರೆಯಿರಿ.

(4) X ಕಂಪನಿ ನಿಯಮಿತವು ₹ 10 ಮುಖಬೆಲೆಯ 50,000 ಶೇರುಗಳಲ್ಲಿ ವಿಭಜಿಸಲ್ಪಟ್ಟು ₹ 5,00,000 ಅಧಿಕೃತ ಬಂಡವಾಳವನ್ನು ಹೊಂದಿದೆ. ಸಾರ್ವಜನಿಕರಿಗೆ 40,000 ಶೇರುಗಳನ್ನು ಕೊಳ್ಳಲು ಆಹ್ವಾನ ನೀಡಿತು. ಶೇರಿನ ಹಣವನ್ನು ಈ ಕೆಳಗಿನಂತೆ ಪಾವತಿಸಲು ಸೂಚಿಸಿತು.

₹ 3 ಅರ್ಜಿಯೊಂದಿಗೆ

₹ 2 ಹಂಚಿಕೆಯಾದ ನಂತರ

₹ 3 ಮೊದಲ ಹಾಗೂ

₹ 2 ಅಂತಿಮ ಕರೆ

ಎಲ್ಲಾ ಶೇರುಗಳು ಕೊಳ್ಳಲ್ಪಟ್ಟವು. 6000 ಶೇರುಗಳ ಮೇಲಿನ ಪ್ರಥಮ ಹಾಗೂ ಅಂತಿಮ ಕರೆಯ ಹಣ ಬಾಕಿ ನಿಂತಿತು. ಈ ಶೇರುಗಳನ್ನು ಮುಟ್ಟುಗೋಲು ಹಾಕಿಕೊಂಡು ಪ್ರತಿ ಶೇರಿಗೆ ₹ 7 ರಂತೆ ಮರು ಮಾರಾಟ ಮಾಡಲಾಯಿತು.

ಈ ವ್ಯವಹಾರಗಳನ್ನು ಕಂಪನಿಯ ದಿನವಹಿಯಲ್ಲಿ ಬರೆಯಿರಿ.

(5) ಆಕಾಶ್ ಕಂಪನಿ ನಿಯಮಿತವು ₹ 10 ಮುಖಬೆಲೆಯ 10,000 ಪ್ರಥಮ ಹಕ್ಕಿನ ಶೇರುಗಳನ್ನು ಪ್ರತಿ ಶೇರಿಗೆ ₹ 2 ಅಧಿಕ ಬೆಲೆಗೆ ನೀಡಿತು. ಶೇರುಗಳ ಹಣವನ್ನು ಈ ಕೆಳಗಿನಂತೆ ಪಾವತಿಸಲು ಸೂಚಿಸಿತು.

₹ 2 ಅರ್ಜಿಯೊಂದಿಗೆ

₹ 5 ಹಂಚಿಕೆಯಾದ ನಂತರ (ಪ್ರಿಮಿಯಂ ಸೇರಿ)

₹ 5 ಮೊದಲ ಹಾಗೂ ಅಂತಿಮ ಕರೆ

ಸಾರ್ವಜನಿಕರಿಂದ 10,000 ಶೇರುಗಳಿಗೆ ಅರ್ಜಿಬಂದವು. ಎಲ್ಲಾ ಶೇರುಗಳನ್ನು ಹಂಚಿಕೆ ಮಾಡಲಾಯಿತು. 1,000 ಶೇರುಗಳ ಮೇಲಿನ ಪ್ರಥಮ ಹಾಗೂ ಅಂತಿಮ ಕರೆಯ ಹಣ ಬಾಕಿ ನಿಂತಿತು. ಈ ಶೇರುಗಳನ್ನು ಮುಟ್ಟುಗೋಲು ಹಾಕಿಕೊಂಡು ಪ್ರತಿ ಶೇರಿಗೆ ₹ 8ರಂತೆ ಮರು ಮಾರಾಟ ಮಾಡಲಾಯಿತು.

ಈ ವ್ಯವಹಾರಗಳನ್ನು ಕಂಪನಿಯ ದಿನವಹಿಯಲ್ಲಿ ಬರೆಯಿರಿ.

(6) ಭಾರತ್ ಕಂಪನಿ ನಿಯಮಿತವು ₹ 10 ಮುಖಬೆಲೆಯ 10,000 ಸಾಮಾನ್ಯ ಶೇರುಗಳನ್ನು ₹ 2 ಅಧಿಕ ಬೆಲೆಗೆ ನೀಡಿತು. ಶೇರುಗಳ ಹಣವನ್ನು ಈ ಕೆಳಗಿನಂತೆ ಪಾವತಿಸಲು ಸೂಚಿಸಿತು.

₹ 3 ಅರ್ಜಿಯೊಂದಿಗೆ

₹ 4 ಹಂಚಿಕೆಯಾದ ನಂತರ (ಪ್ರಿಮಿಯಂ ಸೇರಿ)

₹ 5 ಮೊದಲ ಹಾಗೂ ಅಂತಿಮ ಕರೆ

ಸಾರ್ವಜನಿಕರಿಂದ 10,000 ಶೇರುಗಳಿಗೆ ಅರ್ಜಿಬಂದವು. ಎಲ್ಲಾ ಶೇರುಗಳನ್ನು ಹಂಚಿಕೆ ಮಾಡಲಾಯಿತು. 1,000 ಶೇರುಗಳ ಮೇಲಿನ ಪ್ರಥಮ ಹಾಗೂ ಅಂತಿಮ ಕರೆಯ ಹಣ ಬಾಕಿ ನಿಂತಿತು. ಈ ಶೇರುಗಳನ್ನು ಮುಟ್ಟುಗೋಲು ಹಾಕಿಕೊಂಡು ಪ್ರತಿ ಶೇರಿಗೆ ₹ 8 ರಂತೆ ಮರು ಮಾರಾಟ ಮಾಡಲಾಯಿತು.

ಈ ವ್ಯವಹಾರಗಳನ್ನು ಕಂಪನಿಯ ದಿನವಹಿಯಲ್ಲಿ ಬರೆಯಿರಿ.

(7) A ಕಂಪನಿ ನಿಯಮಿತವು ₹ 10 ಮುಖಬೆಲೆಯ 10,000 ಸಾಮಾನ್ಯ ಶೇರುಗಳನ್ನು ₹ 1 ಅಧಿಕ ಬೆಲೆಗೆ ನೀಡಿತು. ಶೇರುಗಳ ಹಣವನ್ನು ಈ ಕೆಳಗಿನಂತೆ ಪಾವತಿಸಲು ಸೂಚಿಸಿತು.

₹ 2 ಅರ್ಜಿಯೊಂದಿಗೆ

₹ 4 ಹಂಚಿಕೆಯಾದ ನಂತರ (ಪ್ರಿಮಿಯಂ ಸೇರಿ)

₹ 5 ಮೊದಲ ಹಾಗೂ ಅಂತಿಮ ಕರೆ

ಸಾರ್ವಜನಿಕರಿಂದ 14,000 ಶೇರುಗಳಿಗೆ ಅರ್ಜಿ ಬಂದವು. 3,000 ಶೇರುಗಳ ಅರ್ಜಿಗಳನು ತಿರಸ್ಕರಿಸಲಾಯಿತು. ಉಳಿದ 11,000 ಶೇರುಗಳ ಅರ್ಜಿಗಳಿಗೆ 10,000 ಶೇರುಗಳನ್ನು ಹಂಚಿಕೆ ಮಾಡಲಾಯಿತು. 500 ಶೇರುಗಳ ಮೇಲಿನ ಪ್ರಥಮ ಹಾಗೂ ಅಂತಿಮ ಕರೆಯ ಹಣ ಬಾಕಿ ನಿಂತಿತು. ಈ ಶೇರುಗಳನ್ನು ಮುಟ್ಟುಗೋಲು ಹಾಕಿಕೊಂಡು ಪ್ರತಿ ಶೇರಿಗೆ ₹ 7 ರಂತೆ ಮರು ಮಾರಾಟ ಮಾಡಲಾಯಿತು.

ಈ ವ್ಯವಹಾರಗಳನ್ನು ಕಂಪನಿಯ ದಿನವಹಿಯಲ್ಲಿ ಬರೆಯಿರಿ.

(8) ಸ್ಟಾರ್ ಕಂಪನಿ ನಿಯಮಿತವು ₹ 100 ಮುಖಬೆಲೆಯ 2,000 ಶೇರುಗಳನ್ನು ₹ 10 ಅಧಿಕ ಬೆಲೆಗೆ ಮಾರಾಟ ಮಾಡಲು ನಿರ್ಣಯಿಸಿತು. ಶೇರುಗಳ ಹಣವನ್ನು ₹ 20 ಅರ್ಜಿಯ ಜೊತೆಗೆ ₹40 ಹಂಚಿಕೆಯಾದ ನಂತರ (ಪ್ರಿಮಿಯಂ ಸೇರಿಸಿ)₹ 50 ಪ್ರಥಮ ಹಾಗೂ ಅಂತಿಮ ಕರೆ ಹಣ ಕೊಡಬೇಕೆಂದು ಸೂಚಿಸಿತು. ಹಾಗೂ ಎಲ್ಲಾ ಹಣವೂ ಸಂದಾಯವಾಯಿತು. 800 ಶೇರುಗಳ ಮೇಲಿನ ಪ್ರಥಮ ಹಾಗೂ ಅಂತಿಮ ಕರೆಯ ಹಣ ಬಾಕಿ ನಿಂತಿತು. ಈ ಶೇರುಗಳನ್ನು ಮುಟ್ಟುಗೋಲು ಹಾಕಿಕೊಂಡು ಪ್ರತಿ ಶೇರಿಗೆ ₹ 85 ರಂತೆ ಮರು ಮಾರಾಟ ಮಾಡಲಾಯಿತು.

ಮೇಲಿನ ವ್ಯವಹಾರಗಳಿಗೆ ಅವಶ್ಯಕ ರೋಜುದಾಖಲೆ ಬರೆಯಿರಿ.

❖ ❖ ❖ ❖ ❖

# ಅಧ್ಯಾಯ – 7

# ಸಂಯುಕ್ತ ಬಂಡವಾಳ ಕಂಪನಿಯ ಹಣಕಾಸು ಪಟ್ಟಿಗಳು

**ಕಲಿಕೆಯ ಉದ್ದೇಶಗಳು :**

ಈ ಅಧ್ಯಾಯವನ್ನು ಅಧ್ಯಯನ ಮಾಡಿದ ನಂತರ ನಿಮಗೆ :

- ಹಣಕಾಸು ಪಟ್ಟಿಗಳ ಪರಿಕಲ್ಪನೆ ಮತ್ತು ಅರ್ಥವನ್ನು ತಿಳಿದುಕೊಳ್ಳುತ್ತೀರಾ
- ಹಣಕಾಸು ಪಟ್ಟಿಗಳನ್ನು ತಯಾರಿಸುವುದಕ್ಕಾಗಿ ಬದಲಾದ ಕಾಯ್ದೆಗಳ ಸಂಪೂರ್ಣ ಜ್ಞಾನವನ್ನು ಹೊಂದುತ್ತೀರಾ.
- ಕಂಪನಿಯ ಹಣಕಾಸು ಪಟ್ಟಿಯ ಲಕ್ಷಣ ಮತ್ತು ಉದ್ದೇಶಗಳನ್ನು ತಿಳಿಯುತ್ತೀರಾ.
- ಕಂಪನಿಯ ಲಾಭ-ನಷ್ಟ ಪಟ್ಟಿಯ ನಮೂನೆ ಹಾಗೂ ಅಡಕಗಳನ್ನು ತಿಳಿಯುತ್ತೀರಾ.
- ಕಂಪನಿಯ ಅಢಾವೆ ಪತ್ರಿಕೆಯ ನಮೂನೆ(ಸ್ವರೂಪ) ಹಾಗು ಅಡಕಗಳನ್ನು ತಿಳಿಯುತ್ತೀರಾ.
- ಹಣಕಾಸು ಪಟ್ಟಿಯನ್ನು ತಿಳಿಯುತ್ತೀರಾ.

## ಪರಿಚಯ: (Introduction) :

ಪ್ರತಿಕಂಪನಿಯು ಇತರೆ ವ್ಯವಹಾರ ಸಂಸ್ಥೆಗಳಂತೆ ಕಾಲಕಾಲಕ್ಕೆ ಅಂತಿಮಖಾತೆಗಳು ಅಥವಾ ಹಣಕಾಸು ಪಟ್ಟಿಯನ್ನು ತಯಾರಿಸಬೇಕು. ಆದರೆ ಕಂಪನಿಯಲ್ಲಿ ಹಣಕಾಸು ಪಟ್ಟಿಯನ್ನು ತಯಾರಿಸಲು ಶಾಸನಬದ್ಧವಾದ ರೀತಿಯಲ್ಲಿ ಇರಬೇಕಾಗುತ್ತದೆ. ಕಂಪನಿ ಖಾಯ್ದೆಯಲ್ಲಿ ಸೂಚಿಸಿರುವ ಸ್ವರೂಪದಲ್ಲೇ ಹಣಕಾಸು ಪಟ್ಟಿಯನ್ನು ತಯಾರಿಸಬೇಕು. ಬಹುತೇಕ ಸಂದರ್ಭಗಳಲ್ಲಿ ಖಾತೆಯ ನಿಯಮಾವಳಿಯನ್ನು(Standard) ಕಡ್ಡಾಯವಾಗಿ ಪಾಲಿಸಬೇಕು. ಈ ಅಧ್ಯಾಯದಲ್ಲಿ ಹಣಕಾಸು ಪಟ್ಟಿಯನ್ನು ತಯಾರಿಸಲು ವಿವರವಾಗಿ ಪ್ರಸ್ತಾಪಿಸಲಾಗಿದೆ. ಇತ್ತೀಚಿನ ದಿನಗಳಲ್ಲಿ ಲಂಬಪ್ರಕಾರ (Vertical form) ಹಣಕಾಸು ಪಟ್ಟಿಯನ್ನು ತಯಾರಿಸಲಾಗುತ್ತಿದೆ.

ಈ ಅಧ್ಯಾಯದಲ್ಲಿ ಆದಾಯಪಟ್ಟಿ ಮತ್ತು ಅಡಾವಿಪತ್ರಿಕೆಯನ್ನು ಖಾತೆಯ ಟಿಪ್ಪಣಿಯನ್ನು ವಿವರಿಸಲಾಗಿದೆ. ಕಂಪನಿಯ ಕಾಯ್ದೆ ನಿಯಮಾವಳಿ ಪ್ರಕಾರ ಹಣಕಾಸು ಪಟ್ಟಿಗಳನ್ನು (vertical formate) ಲಂಬನಮೂನೆಯಲ್ಲಿ ತಯಾರಿಸಲಾಗಿದೆ.

## 7.1 ಹಣಕಾಸು ಪಟ್ಟಿಗಳ ಅರ್ಥ : Meaning of Financial Statements

### ಅರ್ಥ : Meaning.

ಹಣಕಾಸು ಪಟ್ಟಿಗಳು ಎಂದರೆ ಮೂಲ ಮತ್ತು ಸ್ವಾಭಾವಿಕ ವಾರ್ಷಿಕ ವರದಿ. ಪ್ರತಿಯೊಂದ ಸಮ್ಮಿಳಿತ ನಿರ್ವಹಣೆಯು ತನ್ನ ಹಣಕಾಸಿನ ಮಾಹಿತಿಗಳನ್ನು ಈ ಹಣಕಾಸಿನ ಪಟ್ಟಿಗಳ ಮೂಲಕವೇ ಮಾಲೀಕರಿಗೆ ಹಾಗೂ ಇತರೆ ಬಾಹ್ಯ ಸಂಬಂಧಿ ಸಮೂಹಗಳಿಗೆ ತಿಳಿಸುತ್ತದೆ. ಈ ಹಣಕಾಸು ಪಟ್ಟಿಗಳು ಮಾಹಿತಿ ರವಾನೆಯ ಮೂಲ ಹಾಗೂ ಔಪಚಾರಿಕ ವರದಿಯಾಗಿರುತ್ತದೆ.

ಈ ವಾರ್ಷಿಕ ವರದಿಯು ಕೆಳಕಂಡಂತಹ ಅಡಕಗಳನ್ನೊಳಗೊಂಡಿರುತ್ತದೆ:

ಅ) ನಿರ್ದೇಶಕರ ವರದಿ

ಆ) ಲೆಕ್ಕ ಪರಿಶೋಧಕರ ವರದಿ

ಇ) ಹಣಕಾಸು ವಿವರಣಾ ಪಟ್ಟಿ

i) ಆಸ್ತಿ–ಜವಾಬ್ದಾರಿಗಳ ಪಟ್ಟಿ / ಅಥಾವೆ ಪತ್ರಿಕೆ

ii) ಲಾಭ–ನಷ್ಟಗಳ ಪಟ್ಟಿ

ಈ) ನಗದು ಹರಿವು ಪಟ್ಟಿ

ಉ) ಖಾತೆಗಳಿಗೆ ಟಿಪ್ಪಣಿ

ಊ) ಖಂಡ ವರದಿ / ಭಾಗೀಯ ವರದಿ / ಸಂಧ್ಯಂತರ ವರದಿ.

## 7.2 ಹಣಕಾಸು ಪಟ್ಟಿಗಳ ಸ್ವರೂಪ : Nature of Financial Statements

ಒಂದು ನಿರ್ದಿಷ್ಟ ತಾರೀಖಿನಂದು ಹಣಕಾಸಿನ ಸ್ಥಿತಿ–ಗತಿ ಮತ್ತು ಫಲಿತಾಂಶವನ್ನು ತಿಳಿಯಲು, ಈ ಹಣಕಾಸು ಪಟ್ಟಿಗಳನ್ನು ಬರೆದಿಟ್ಟ ಒಂದು ನಿರ್ದಿಷ್ಟ ಕಾಲಾವಧಿಯ ಹಣದ ರೂಪಕ ಘಟನಾಂಶಗಳ ಆಧಾರದ ಮೇಲೆ ತಯಾರಿಸಲಾಗುತ್ತದೆ.

ಈ ಹಣಕಾಸಿನ ಪಟ್ಟಿಗಳ ಸ್ವರೂಪವನ್ನು ಕೆಳಕಂಡ ಅಂಶಗಳ ಮೂಲಕ ತಿಳಿದುಕೊಳ್ಳಬಹುದು:

1. ಲಿಖಿತ ಅಂಶಗಳು / ಬರೆದಿಟ್ಟ ವಿಷಯಗಳು : ಹಣಕಾಸು ಪಟ್ಟಿಗಳನ್ನು ಲೆಕ್ಕಪುಸ್ತಕದಲ್ಲಿ ಬರೆದಿಟ್ಟ ದೈನಂದಿನ ವೆಚ್ಚಗಳ ಅಂಕಿ–ಅಂಶಗಳ ಆಧಾರದ ಮೇಲೆ ತಯಾರಿಸಲಾಗುತ್ತದೆ. ಬ್ಯಾಂಕಿನಲ್ಲಿನ ನಗದು ಶಿಲ್ಕು, ವಹಿವಾಟು ಸ್ವೀಕರಣಗಳು, ಸ್ಥಿರಸ್ವತ್ತುಗಳು ಮುಂತಾದವುಗಳ ಅಂಕಿಅಂಶಗಳನ್ನು ಬರೆದಿಟ್ಟ ಲೆಕ್ಕ ಪುಸ್ತಕಗಳಿಂದ ಹಣಕಾಸು ಪಟ್ಟಿಗಳಲ್ಲಿ ನಮೂದಿಸಲಾಗುತ್ತದೆ.
2. ಲೆಕ್ಕ ಪ್ರಕ್ರಿಯೆಯ ಒಡಂಬಡಿಕೆ : ಹಣಕಾಸು ಪಟ್ಟಿಗಳ ತಯಾರಿಕೆಯಲ್ಲಿ ಕೆಲವು ಲೆಕ್ಕ ಪತ್ರಕ್ರಿಯೆ ಒಡಂಬಡಿಕೆಗಳನ್ನು ಅನುಸರಿಸಲಾಗುತ್ತದೆ. ಉದಾ : ಸರಕುಗಳ ಮೌಲ್ಯ ನಿರ್ಧರಿಸುವಿಕೆ, ಸ್ಥಿರಾಸ್ತಿ ಮತ್ತು ಅವುಗಳ ಸವಕಳಿ, ಲೇಖನ ಸಾಮಗ್ರಿಗಳ ಖರ್ಚು ಇತ್ಯಾದಿಗಳನ್ನು ಲೆಕ್ಕ ಪುಸ್ತಕದಲ್ಲಿ ಲೆಕ್ಕಿಸುವ ವಿಧಾನ. ಲೆಕ್ಕ ಪ್ರಕ್ರಿಯೆಯ ಒಡಂಬಡಿಕೆಗಳ ಉಪಯೋಗವು ಹಣಕಾಸುಪಟ್ಟಿಗಳ ಸರಳತೆ, ವಾಸ್ತವಿಕತೆ ಮತ್ತು ಹೋಲಿಕೆಗೆ ಅತಿಸೂಕ್ತವೆನಿಸುತ್ತದೆ.
3. ಕಲ್ಪಿತಲೇಖ : ಹಣಕಾಸಿನ ಪಟ್ಟಿಗಳನ್ನು ಕೆಲವು ಲೆಕ್ಕ ಪ್ರಕ್ರಿಯೆಯ ಕಲ್ಪಿತಲೇಖ (ಊಹೆಗಳ) ಮೇಲೆ ತಯಾರಿಸಲಾಗುತ್ತದೆ. ಉದಾ: ವ್ಯವಹಾರ ಅಸ್ತಿತ್ವ ಕಲ್ಪಿತ ಲೇಖ, ನಡೆಯುವ (ಬೆಳೆಯುವ) ಸಂಸ್ಥೆ ಕಲ್ಪಿತ ಲೇಖ, ಐತಿಹಾಸಿಕ ವೆಚ್ಚಕಲ್ಪನೆ ಮುಂತಾದವು.
4. ವೈಯಕ್ತಿಕ ವಿಮರ್ಶೆ/ನಿರ್ಣಯ : ಹಲವಾರು ಸಂದರ್ಭಗಳಲ್ಲಿ ಹಣಕಾಸು ಪಟ್ಟಿಯಲ್ಲಿನ ಅಂಕಿ–ಅಂಶಗಳು ಲೆಕ್ಕಿಗನ ವೈಯಕ್ತಿಕ ಅಭಿಪ್ರಾಯ ಅಂದಾಜು ಮತ್ತು ನಿರ್ಣಯಗಳ ಮೇಲೆ ಅವಲಂಬಿಸಿರುತ್ತದೆ. ಉದಾ : ಸವಕಳಿಯ ನಿರ್ಧರಿಸುವಿಕೆ, ಅನುಮಾನಾಸ್ಪದ ಸಾಲಗಳಿಗೆ ಕಾಯ್ದಿರಿಸುವಿಕೆ, ತೆರಿಗೆಗಾಗಿ ಮೀಸಲು, ಮುಂತಾದವು.

   ಒಟ್ಟಿನಲ್ಲಿ, ಲೆಕ್ಕಪ್ರಕ್ರಿಯೆಯ ಕಲ್ಪನೆ ಒಡಂಬಡಿಕೆ ಮತ್ತು ಕಾನೂನಿನ ಚೌಕಟ್ಟಿನೊಳಗೆ ಬರೆದಿಟ್ಟ ವ್ಯವಹಾರಿಕ ಅಂಕಿ–ಅಂಶಗಳ ಒಂದು ಸಂಕ್ಷಿಪ್ತ ವರದಿಯೇ, ಹಣಕಾಸಿನ ಪಟ್ಟಿ.

## 7.3 ಹಣಕಾಸು ಪಟ್ಟಿಯ ಉದ್ದೇಶಗಳು : Objectives of Financial Statements

ಹಣಕಾಸು ಪಟ್ಟಿಯ ಶೇರುದಾರರಿಗೆ ಮತ್ತು ಹೊರವ್ಯಕ್ತಿಗಳಿಗೆ ಕಂಪನಿಯ ಲಾಭ ಮತ್ತು ಹಣಕಾಸಿನ ಸ್ಥಿತಿಗತಿಗಳ ಬಗ್ಗೆ ಮಾಹಿತಿಯನ್ನು ಪಡೆಯಲು ಈ ಮಾಹಿತಿಯು ಮೂಲವಾಗಿರುತ್ತದೆ.

ನಿರ್ದಿಷ್ಟಕಾಲದಲ್ಲಿ ಸಂಸ್ಥೆಯ ಹಣಕಾಸಿನ ಪರಿಸ್ಥಿತಿಯ ಫಲಿತಾಂಶದ ಬಗ್ಗೆ ಮಾಹಿತಿಯನ್ನು ನೀಡುತ್ತದೆ. ಮತ್ತು ಬಳಕೆದಾರರಿಗೆ ಸೂಕ್ತ ತೀರ್ಮಾನ ತೆಗೆದುಕೊಳ್ಳಲು ಸಹಾಯ ಮಾಡುತ್ತದೆ.

ಹಣಕಾಸು ಪಟ್ಟಿಯಲ್ಲಿ ಈ ಕೆಳಕಂಡ ಉದ್ದೇಶಗಳು ಸೇರಿರುತ್ತವೆ.

1) **ಆರ್ಥಿಕ ಸಂಪನ್ಮೂಲ ಮತ್ತು ವ್ಯವಹಾರಗಳ ಹೊಣೆಗಾರಿಕೆಯ ಬಗ್ಗೆ ಮಾಹಿತಿಯನ್ನು ನೀಡಲು**
   ಹೂಡಿಕೆದಾರರಿಗೆ ಮತ್ತು ಇತರ ಹೊರ ವ್ಯಕ್ತಿಗಳಿಗೆ ಸಾಕಷ್ಟು ಆರ್ಥಿಕ ಸಂಪನ್ಮೂಲ ಮತ್ತು ಜವಾಬ್ದಾರಿಗಳ ಬಗ್ಗೆ ನಂಬಲರ್ಹ ಮಾಹಿತಿಯನ್ನು ನೀಡುತ್ತದೆ.
2) **ವ್ಯವಹಾರದ ಲಾಭ ಗಳಿಸುವ ಸಾಮರ್ಥ್ಯದ ಬಗ್ಗೆ ಮಾಹಿತಿ ನೀಡಲು**
   ಕಂಪನಿಯ ಆದಾಯ ಗಳಿಕೆಯ ಸಾಮರ್ಥ್ಯವನ್ನು ಊಹಿಸಲು ಹೊಂದಾಣಿಕೆ ಮಾಡಲು ಮತ್ತು ಮೌಲ್ಯ ಮಾಡಲು ಅಗತ್ಯ ಮಾಹಿತಿಯನ್ನು ನೀಡುತ್ತದೆ.
3) **ನಗದು ಚಲಾವಣೆಯ ಬಗ್ಗೆ ಮಾಹಿತಿ ನೀಡಲು:**
   ಹೂಡಿಕೆದಾರರಿಗೆ ಮತ್ತು ದಣಿಗಳಿಗೆ ಮುಂದಾಗುವ ನಗದು ಚಲಾವಣೆಯ ಬಗ್ಗೆ ಮೌಲೀಕರಿಸಲು ಮತ್ತು ಸೂಕ್ತ ಸಮಯದಲ್ಲಿ ಹೊಂದಾಣಿಕೆ ಮಾಡಲು ನೀಡುತ್ತದೆ.
4) **ವ್ಯವಸ್ಥಾಪನೆಯ ಸಾಮರ್ಥ್ಯವನ್ನು ತಿಳಿಯಲು:**
   ವ್ಯವಹಾರದಲ್ಲಿ ಇರುವ ಸಂಪನ್ಮೂಲಗಳನ್ನು ವ್ಯವಸ್ಥಾಪಕರು ಹೇಗೆ ಪರಿಣಾಮಕಾರಿಯಾಗಿ ಬಳಕೆ ಮಾಡುತ್ತಿದ್ದರೆಂಬುದನ್ನು ತಿಳಿಯಬಹುದು.

(5) ಸಮಾಜದ ಮೇಲೆ ಪರಿಣಾಮ ಬೀರುವ ವ್ಯವಹಾರದ ಚಟುವಟಿಕೆಗಳ ಬಗ್ಗೆ ಮಾಹಿತಿ.

(6) ಸಮಾಜದ ಮೇಲೆ ಪರಿಣಾಮ ಬೀರುವ ವ್ಯವಹಾರದ ಕಾರ್ಯಗಳ ಬಗ್ಗೆ ವರದಿ ನೀಡಬೇಕು.

(7) ಖಾತೆಗಳ ನಿಯಮಗಳನ್ನು ಬಹಿರಂಗಪಡಿಸುವುದು.

(8) ಸಂಸ್ಥೆಯ ಖಾತೆಗಳ ಬಹುಮುಖ್ಯ ನಿಯಮಗಳ ಬಗ್ಗೆ ಮತ್ತು ಪರಿಕಲ್ಪನೆಯ ಬಗ್ಗೆ ಮತ್ತು ನಿಯಮಗಳಲ್ಲಿ ಆದ ಬದಲಾವಣೆಯ ಬಗ್ಗೆ ಮಾಹಿತಿಯನ್ನು ನೀಡಲು ವರದಿ ಮಾಡಬೇಕು.

## 7.4 ಹಣಕಾಸುಪಟ್ಟಿಯ ವಿಧಾನಗಳು : Types of Financial Statements

ಹಣಕಾಸು ಪಟ್ಟಿಯಲ್ಲಿ ಈ ಕೆಳಕಂಡ ಎರಡು ಪಟ್ಟಿಗಳು ಸೇರಿರುತ್ತವೆ.

(1) ಲಾಭ–ನಷ್ಟ ಪಟ್ಟಿ.

(2) ಅಡಾವೆಪತ್ರಿಕೆ ಅಥವಾ ಸ್ಥಿತಿಗತಿಪಟ್ಟಿ

ಲಾಭ–ನಷ್ಟ ಪಟ್ಟಿ ಮತ್ತು ಅಡಾವೆಪತ್ರಿಕೆಯನ್ನು ಟಿಪ್ಪಣಿ ಮುಖಾಂತರ ವಿವರಿಸಲಾಗಿದೆ.

(1) ಲಾಭ–ನಷ್ಟ ಪಟ್ಟಿ ಎಂದರೆ ಒಂದು ಕಂಪನಿಯ ಮಾರಾಟ, ಆದಾಯ ಮತ್ತು ಖರ್ಚುಗಳಿಂದಾಗುವ ಲಾಭ ಅಥವಾ ನಷ್ಟವನ್ನು ಕಂಡುಹಿಡಿಯಲು ತಯಾರಿಸುವ ಲೆಕ್ಕಪತ್ರವಾಗಿರುತ್ತದೆ.

ಅಢಾವೆಪತ್ರಿಕೆಯನ್ನು ತಯಾರಿಸಲು ಇದು ಒಂದು ಅಗತ್ಯಪಟ್ಟಿ.

____________________ ಕಂಪನಿ ಲಿಮಿಟೆಡ್‌ನ ಆದಾಯಪಟ್ಟಿ ಅಂತ್ಯಗೊಳ್ಳುವ ವರ್ಷಕ್ಕಾಗಿ.

ಅಧಾವೆಪತ್ರಿಕೆ

## ಕಂಪನಿಯ ಹಣಕಾಸಿನ ಪಟ್ಟಿ

## (2013 ಶೆಡ್ಯೂಲ್ IIIರ ಕಂಪನಿಯ ಕಾಯ್ದೆಯ ಪ್ರಕಾರ)

### ಅಡಾವೆಪತ್ರಿಕೆಯ ಪ್ರತಿರೂಪ

**ಕಂಪನಿಯ ಹೆಸರು ....................................**

**ಮಾರ್ಚ್ 31, .................................... ನೇ ಸಾಲಿನಂದು ಅಡಾವೆ ಪತ್ರಿಕೆ**

| ಬಂಡವಾಳ ಮತ್ತು ಜವಾಬ್ದಾರಿಗಳು | ಟಿಪ್ಪಣಿ | ₹ |
|---|---|---|
| **ಶೇರುದಾರರ ನಿಧಿ :** | | |
| ಶೇರು ಬಂಡವಾಳ | 1 | XX |
| ನಿಧಿ ಮತ್ತು ಹೆಚ್ಚುವರಿ ಲಾಭ | 2 | XX |
| ಶೇರು ವಾರಂಟ್‌ಗಳ ವಿರುದ್ಧ ನಗದು ಸ್ವೀಕೃತಿ | | XX |
| ಶೇರುಗಳ ಹಂಚಿಕೆಯಾಗದೆ, ಉಳಿದಿರುವ ಶೇರು ಅರ್ಜಿಗಳ ಹಣ | | XX |
| **ಚಾಲ್ತ್ಯೇತರ ಹೊಣೆಗಾರಿಕೆಗಳು** | | |
| ದೀರ್ಘಾವಧಿ ಸಾಲಗಳು | 3 | XX |
| ಮುಂದೂಡಲ್ಪಟ್ಟ ಕಂದಾಯ ಹೊಣೆಗಾರಿಕೆಗಳು (ನಿವ್ವಳ) | | XX |
| ಇತರೆ ದೀರ್ಘಾವಧಿ ಹೊಣೆಗಾರಿಕೆಗಳು | | XX |
| ದೀರ್ಘಾವಧಿ ಕಾಯ್ದಿಟ್ಟ ನಿಧಿಗಳು | | XX |
| **ಚಾಲ್ತಿ ಹೊಣೆಗಾರಿಕೆಗಳು** | | |
| ಅಲ್ಪಾವಧಿಯ ಸಾಲಗಳು | 4 | XX |
| ವಹಿವಾಟು ಸಾಲ ಮತ್ತು ಹುಂಡಿಗಳು | | XX |
| ಇತರೆ ಚಾಲ್ತಿ ಹೊಣೆಗಾರಿಕೆಗಳು | 5 | XX |
| ಅಲ್ಪಾವಧಿಯ ಕಾಯ್ದಿಟ್ಟ ನಿಧಿಗಳು | 6 | XX |
| **ಒಟ್ಟು ಮೊತ್ತ** | | XXX |
| **ಆಸ್ತಿಗಳು/ಸ್ವತ್ತುಗಳು** | | |
| **ಚಾಲ್ತ್ಯೇತರ ಸ್ವತ್ತುಗಳು :** | 7 | XX |
| ಸ್ಥಿರ ಸ್ವತ್ತುಗಳು : | | XX |
| ಭೌತಿಕ ಸ್ವತ್ತುಗಳು | | XX |
| ಅಭೌತಿಕ ಸ್ವತ್ತುಗಳು | | XX |
| ಚಾಲ್ತ್ಯೇತರ ಹೂಡಿಕೆಗಳು | | XX |

| | | |
|---|---|---|
| ಮುಂದೂಡಲಾದ ತೆರಿಗೆ ಸ್ವತ್ತುಗಳು (ನಿವ್ವಳ) | | XX |
| ದೀರ್ಘಾವಧಿ ಮುಂಗಡ ಮತ್ತು ಸಾಲಗಳು | | XX |
| ಇತರೆ ಚಾಲ್ತೇತರ ಸ್ವತ್ತುಗಳು | | XX |
| **ಚಾಲ್ತಿ ಸ್ವತ್ತುಗಳು :** | | |
| ಚಾಲ್ತಿ ಹೂಡಿಕೆಗಳು | | XX |
| ಸರಕುಗಳು | | XX |
| ವಹಿವಾಟಿನ ಸ್ವೀಕರಗಳು | 8 | XX |
| ನಗದು ಮತ್ತು ನಗದು ಸಮಾನಗಳು | 9 | XX |
| ಅಲ್ಪಾವಧಿ ಸಾಲ ಮತ್ತು ಮುಂಗಡಗಳು | 10 | XX |
| **ಒಟ್ಟು ಮೊತ್ತಗಳು** | | XXX |

**ಲಾಭ–ನಷ್ಟ ಪಟ್ಟಿ :**

**ಲಾಭ–ನಷ್ಟ ಪಟ್ಟಿಯ ಮಾದರಿ :**

**ಕಂಪನಿಯ ಹೆಸರು ...................................**

**ಮಾರ್ಚ್ 31, 20 ................................... ನೇ ಸಾಲಿನಂದು ಲಾಭ–ನಷ್ಟ ಪಟ್ಟಿ**

| ವಿವರಣೆಗಳು | ಟಿಪ್ಪಣಿ | ₹ |
|---|---|---|
| **ಆದಾಯಗಳು:** | | |
| ವ್ಯವಹಾರಗಳಿಂದ ಆದಾಯ (ಒಟ್ಟು) | | XX |
| ಕಳೆ : ಅಬಕಾರಿ ಸುಂಕ | | XX |
| ವ್ಯವಹಾರಗಳಿಂದ ಆದಾಯ (ನಿವ್ವಳ) | | XX |
| ಇತರೆ ಆದಾಯಗಳು | | XX |
| **ಒಟ್ಟು ಮೊತ್ತ ಆದಾಯ** | | XXX |
| **ಖರ್ಚುಗಳು :** | | |
| ಬಳಸಿದ ಪದಾರ್ಥಗಳ ವೆಚ್ಚ | | XX |
| ಸರಕುಗಳ ಖರೀದಿ ವೆಚ್ಚ | | XX |
| ಸರಕುಗಳ ಮೌಲ್ಯ ವ್ಯತ್ಯಯ | | XX |
| ಅಪರಿಪೂರ್ಣ ಸರಕು ಮತ್ತು ಪದಾರ್ಥಗಳು | | XX |
| ನೌಕರರ ಅನುಕೂಲತೆಯ ವೆಚ್ಚಗಳು | 11 | XX |
| ಹಣಕಾಸು ವೆಚ್ಚಗಳು | 12 | XX |
| ಸವಕಳಿ ಮತ್ತು ತೊರೆದ ವೆಚ್ಚಗಳು | 13 | XX |
| ಇತರೆ ಖರ್ಚುಗಳು | 14 | XX |
| **ಒಟ್ಟು ವೆಚ್ಚಗಳು** | | XXX |

| | | |
|---|---|---|
| **ತೆರಿಗೆಯ ಮುಂಚಿನ ಲಾಭ** | | XXX |
| **ತೆರಿಗೆ ವೆಚ್ಚಗಳು :** | | |
| ಚಾಲ್ತಿ ತೆರಿಗೆ / ಪ್ರಸ್ತುತ ತೆರಿಗೆ | | XX |
| ಮುಂದೂಡಲಾದ ತೆರಿಗೆ | | XX |
| **ತೆರಿಗೆಯ ನಂತರದ ಲಾಭ** | | XXX |
| ಪ್ರತಿ ಸಾಮಾನ್ಯ ಶೇರಿನ ಮೇಲೆ ಲಾಭ: | | |
| -ಮೂಲ | | XX |
| -ವಿತರಣೆ | | XX |

**ಟಿಪ್ಪಣಿ : ಪ್ರತಿ ಸಾಮಾನ್ಯ ಶೇರಿನ ಮೇಲೆ ಲಾಭ ಲೆಕ್ಕಮಾಡುವಾಗ ಕಂಡುಹಿಡಿಯುವ ಅವಶ್ಯತೆಯಿರುವುದಿಲ್ಲ.**

## ಟಿಪ್ಪಣಿಗಳು/ವಿವರಣೆಗಳು: : Notes/Explanation

1. **ಶೇರುದಾರರ ನಿಧಿ :** ಒಂದು ಕಂಪನಿಯಲ್ಲಿ ಶೇರುದಾರರು ಮಾಡಿರುವ ಹೂಡಿಕೆಗಳ ಒಟ್ಟು ಮೌಲ್ಯವನ್ನು ಶೇರುದಾರರ ನಿಧಿ ಎನ್ನುತ್ತೇವೆ.

   ಶೇರುದಾರರ ನಿಧಿ ಈ ಕೆಳಕಂಡ ಅಡಕಗಳನ್ನೊಳಗೊಂಡಿರುತ್ತದೆ;

   **ಟಿಪ್ಪಣಿ : 1 – ಶೇರು ಬಂಡವಾಳ –** ಒಂದು ಕಂಪನಿಯು ಶೇರುಗಳ ನೀಡುವಿಕೆಯ ಮೂಲಕ ಸಂಗ್ರಹಿಸಿರುವ ಒಟ್ಟು ಬಂಡವಾಳವನ್ನು 'ಶೇರು ಬಂಡವಾಳ' ಎನ್ನುತ್ತೇವೆ. ಒಂದು ಕಂಪನಿಯು ಶೇರು ಬಂಡವಾಳವನ್ನು ಸಂಗ್ರಹಿಸಲು ಎರಡು ಬಗೆಯ ಶೇರುಗಳನ್ನು ನೀಡಬಹುದು. ಅವುಗಳೆಂದರೆ – (ಅ) ಸಾಮಾನ್ಯ ಶೇರುಗಳು (ಆ) ಆದ್ಯತಾ ಶೇರುಗಳು – ಒಂದು ಕಂಪನಿಯು ಅಧಿಕೃತ ಬಂಡವಾಳಕ್ಕಿಂತ ಹೆಚ್ಚಿನ ಶೇರು ಬಂಡವಾಳವನ್ನು ಸಂಗ್ರಹಿಸುವಂತಿಲ್ಲ. ಈ ಟಿಪ್ಪಣಿಯಲ್ಲಿ ಸಂಗ್ರಹಿತವಾದ ಬಂಡವಾಳವನ್ನು ಮಾತ್ರ ನಮೂದಿಸಬೇಕು.

   **ಟಿಪ್ಪಣಿ : 2 – ಕಾಯ್ದಿಟ್ಟ ನಿಧಿಗಳು ಮತ್ತು ಕೂಡಿಟ್ಟ ಲಾಭಗಳು ಅಥವಾ ಮೀಸಲು ಮತ್ತು ಅಧಿಕ ಲಾಭ :** ಕಂಪನಿಯ ಲಾಭವನ್ನು ಮುಂದಾಗುವ ಖರ್ಚು/ಅಗತ್ಯಗಳಿಗಾಗಿ ಲಾಭದಿಂದ ಮೀಸಲಿಟ್ಟ ಹಣದಲ್ಲಿ, ಈ ಕೆಳಕಂಡ ಅಂಶಗಳು ಸೇರಿರುತ್ತವೆ.

   ಎ. ಸಾಮಾನ್ಯ ಮೀಸಲು ಅಥವಾ ಆದಾಯ ಮೀಸಲು ಅಥವಾ ಮೀಸಲು ನಿದಿ
   ಬಿ. ಬಂಡವಾಳ ವಿಮೋಚನಾ ನಿದಿ
   ಸಿ. ಸವಕಳಿ ವಿಮೋಚನಾ ನಿದಿ
   ಡಿ. ಸವಕಳಿ ನಿಧಿ, ಪುನರ್‌ಮೌಲ್ಯಾಂಕನ ನಿಧಿ
   ಇ. ಸೆಕ್ಯೂರಿಟಿ ಪ್ರೀಮಿಯಂ
   ಎಫ್. ಕಾರ್ಮಿಕರ ಪರಿಹಾರನಿದಿ
   ಜಿ. ಕಾರ್ಮಿಕರ ಅಪಘಾತ ನಿಧಿ
   ಹೆಚ್. ವಿಮಾನಿಧಿ
   ಐ. ಡಿವಿಡೆಂಡ್ ಇಕ್ವಲೈಜೇಷನ್ ಫಂಡ್
   ಜೆ. ಡಿವಿಡೆಂಡ್ ರಿಯಾಯಿತಿ ಮೀಸಲು
   ಕೆ. ಲಾಭ ನಷ್ಟಖಾತೆಯಿಂದ ಉಂಟಾದ ಲಾಭ
   ಎಲ್. ಶೇರುದಾರರಿಗೆ ಸೇರಿರುವ ಇನ್ನಾವುದಾದರೂ ಇತರೆ ನಿಧಿಗಳು.

**ಲಾಭಾಂಶ ಮತ್ತು ಲಾಭಾಂಶ ವಿತರಣಾ ತೆರಿಗೆ :**

ಒಂದು ಕಂಪನಿಯು, ತನ್ನ ವಾರ್ಷಿಕ ಲಾಭ ಮತ್ತು ಕೂಡಿಟ್ಟ ನಿಧಿಯಿಂದ, ಶೇರುದಾರರಿಗೆ ವಿತರಿಸುವ ಲಾಭವನ್ನು "ಲಾಭಾಂಶ" ಎನ್ನುತ್ತೇವೆ. ಈ ಲಾಭಾಂಶದ ಶೇಕಡಾವಾರು ದರವನ್ನು ವಾರ್ಷಿಕ ಸಾಮಾನ್ಯ ಸಭೆಯಲ್ಲಿ ಶೇರುದಾರರ ಅನುಮತಿಯ ಮೇರೆಗೆ ನಿರ್ದೇಶಕ ಮಂಡಳಿಯು ಘೋಷಿಸುತ್ತದೆ.

ಪ್ರತಿ ಕಂಪನಿಯು ತಾನು ನೀಡಿರುವ ಒಟ್ಟು ಲಾಭಾಂಶದ ಮೇಲೆ ನಿರ್ದಿಷ್ಟ ದರದಲ್ಲಿ ಲಾಭಾಂಶ ವಿತರಣಾ ತೆರಿಗೆಯನ್ನು ಸರ್ಕಾರಕ್ಕೆ ಪಾವತಿಸಬೇಕಾಗುತ್ತದೆ. ಈ ತೆರಿಗೆಯ ದರವು ಪ್ರತಿವರ್ಷವು ಬದಲಾವಣೆಗೊಳ್ಳುತ್ತದೆ. ಪ್ರಸ್ತುತ ಲಾಭಾಂಶ ವಿತರಣಾ ತೆರಿಗೆಯ ದರವು ಶೇಕಡ 16.995 ಆಗಿದೆ.

2. **ಚಾಲ್ತ್ಯೇತರ ಜವಾಬ್ದಾರಿಗಳು** : ಒಂದು ಕಂಪನಿಯು ತನ್ನ ಸಾಲ–ಬಾಧ್ಯತೆಗಳನ್ನು ತೀರಿಸಲು ಕನಿಷ್ಠ ಒಂದು ವರ್ಷಕ್ಕಿಂತಲು ಹೆಚ್ಚಿನ ಕಾಲಾವಕಾಶ ಹೊಂದಿದ್ದರೆ, ಅವುಗಳು ಚಾಲ್ತ್ಯೇತರ ಜವಾಬ್ದಾರಿಗಳು ಎಂದು ವಿಂಗಡಿಸುತ್ತೇವೆ. ಇವುಗಳನ್ನು, ಆಢಾವೆ ಪತ್ರಿಕೆಯಲ್ಲಿ ನಮೂದಿಸಬೇಕಾಗುತ್ತದೆ. ಆದ್ದರಿಂದ ಈ ರೀತಿಯ ಹೊಣೆಗಾರಿಕಗಳನ್ನು ಈ ಕೆಳಕಂಡಂತೆ ವಿಂಗಡಿಸಲಾಗಿದೆ.

   <u>ಟಿಪ್ಪಣಿ : 3</u> – **ದೀರ್ಘಾವಧಿ ಸಾಲಗಳು** – ಸಾಲಪತ್ರಗಳು, ಬಾಂಡ್‌ಪತ್ರಗಳು, ಅವಧಿ ಸಾಲಗಳು, ಠೇವಣಿಗಳು ಮುಂತಾದವು. ಇವುಗಳನ್ನು ಭರವಸೆ ಸಹಿತ ಸಾಲಗಳು ಮತ್ತು ಭರವಸೆರಹಿತ ಸಾಲಗಳಾಗಿ ಪುನರ್ ವಿಂಗಡಿಸಿ ಬರೆಯಬೇಕು. ಆಢಾವೆ ಪತ್ರಿಕೆಯಲ್ಲಿ ಇವುಗಳನ್ನು ಬರೆದ ಮೇಲೆ, ಮುಂದೂಡಲಾದ ತೆರಿಗೆ, ಹೊಣೆಗಾರಿಕೆಗಳು, ಇತರೆ ದೀರ್ಘಾವಧಿ ಸಾಲಗಳು, ದೀರ್ಘಾವಧಿ ಕಾಯ್ದಿಟ್ಟ ನಿಧಿಗಳನ್ನು ನಮೂದಿಸಬೇಕು.

3. **ಚಾಲ್ತಿ / ಪ್ರಸ್ತುತ / ಪ್ರಸಕ್ತ ಹೊಣೆಗಾರಿಕೆಗಳು** : ಒಂದು ಕಂಪನಿಯು, ತಾನು ಮರುಪಾವತಿಸಬೇಕಾದ ಸಾಲಗಳನ್ನು ಹೊಂದಿದ್ದು, ಅವುಗಳ ಗರಿಷ್ಠ ಅವಧಿ ಒಂದು ವರ್ಷಕ್ಕೆ ಸೀಮಿತವಾಗಿದ್ದರೆ, ಅವುಗಳನ್ನು ಚಾಲ್ತಿ / ಪ್ರಸುತ / ಪ್ರಸಕ್ತ ಹೊಣೆಗಾರಿಕೆಗಳೆಂದು ಕರೆಯುತ್ತೇವೆ. ಇಂತಹ ಸಾಲ ಮತ್ತು ಹೊಣೆಗಾರಿಕೆಗಳನ್ನು ಆಢಾವೆ ಪತ್ರಿಕೆಯಲ್ಲಿ ಚಾಲ್ತ್ಯೇತರ ಹೊಣೆಗಾರಿಕೆಗಳ ನಂತರ ಕೆಳಕಂಡಂತೆ ಬರೆಯಬೇಕು:

   <u>ಟಿಪ್ಪಣಿ : 4</u> – **ಅಲ್ಪಾವಧಿ ಸಾಲಗಳು, ವಹಿವಾಟು ಸಾಲಗಳು ಮತ್ತು ಹುಂಡಿಗಳು.**

   <u>ಟಿಪ್ಪಣಿ : 5</u> – **ಇತರೆ ಚಾಲ್ತಿ ಹೊಣೆಗಾರಿಕೆಗಳು (ಬಡ್ಡಿಬಾಕಿ, ಖರ್ಚುಗಳ ಬಾಕಿ, ಸಾಲ ಮತ್ತು ಸಾಲಪತ್ರಗಳ ಮೇಲೆ ಬಡ್ಡಿ ಬಾಕಿ, ಆದಾಯ ಮುಂಗಡ ಸ್ವೀಕೃತಿ, ಮುಂತಾದವು)**

   <u>ಟಿಪ್ಪಣಿ : 6</u> – **ಅಲ್ಪಾವಧಿ ಕಾಯ್ದಿಟ್ಟ ನಿಧಿಗಳು – ಲಾಭಾಂಶ ನಿಧಿ, ತೆರಿಗೆ ನಿಧಿ, ನೌಕರರ ಕಲ್ಯಾಣ ನಿಧಿ ಮುಂತಾದವು.**

4. **ಚಾಲ್ತ್ಯೇತರ ಸ್ವತ್ತುಗಳು** : ಸ್ಥಿರ ಆಸ್ತಿಗಳು ಮತ್ತು ದೀರ್ಘಾವಧಿ ಹೂಡಿಕೆಗಳನ್ನು ಚಾಲ್ತ್ಯೇತರ ಸ್ವತ್ತುಗಳೆಂದು ಪರಿಗಣಿಸುತ್ತೇವೆ. ಇವುಗಳಿಗೆ ಸಂಬಂಧಿಸಿದ ಮಾಹಿತಿಯನ್ನು ಆಢಾವೆ ಪತ್ರಿಕೆಯಲ್ಲಿ ಕೆಳಕಂಡಂತೆ ನಮೂದಿಸಬೇಕು:

   **I. ಸ್ಥಿರ ಆಸ್ತಿಗಳು :**

   (a) ಸುಸ್ಪಷ್ಟ / ಭೌತಿಕ ಆಸ್ತಿಗಳು – ಭೂಮಿ ಮತ್ತು ಕಟ್ಟಡಗಳು, ಯಂತ್ರೋಪಕರಣಗಳು, ಕುರ್ಚಿಗಳು, ವಾಹನಗಳು, ಗಣಕಯಂತ್ರಗಳು ಮುಂತಾದವು.

   (b) ಬಾವುಕ / ಅಭೌತಿಕ ಆಸ್ತಿಗಳು – ಕೀರ್ತಿಮೌಲ್ಯ / ಸುನಾಮ, ಕೃತಿಸ್ವಾಮ್ಯ, ಪೇಟೆಂಟ್ ಹಕ್ಕುಗಳು, ಅಭಿಮಾನ ಸ್ವಾಮ್ಯ, ಗುರುತು ಸ್ವಾಮ್ಯ ಮುಂತಾದವುಗಳು.

   **II. ಚಾಲ್ತ್ಯೇತರ ಹೂಡಿಕೆಗಳು** : ಒಂದು ಕಂಪನಿಯು ಬೇರೆ ಸಂಸ್ಥೆಗಳಲ್ಲಿ ತನ್ನ ಹಣವನ್ನು ಒಂದು ವರ್ಷಕ್ಕಿಂತಲು ಮೇಲ್ಪಟ್ಟ ಅವಧಿಗೆ ಹೂಡಿಕೆ ಮಾಡಿದ್ದರೆ, ಅವುಗಳನ್ನು ಚಾಲ್ತ್ಯೇತರ ಹೂಡಿಕೆಗಳೆಂದು ಕರೆಯುತ್ತೇವೆ. ಈ ಹೂಡಿಕೆಗಳು ಶೇರುಗಳಲ್ಲಿ, ಸಾಲಪತ್ರಗಳಲ್ಲಿ, ಸರ್ಕಾರಿ ಬಾಂಡ್‌ಗಳಲ್ಲಿ ಮತ್ತು ಚಿನ್ನ, ಬೆಳ್ಳಿ, ವಿದೇಶಿ ವಿನಿಮಯಗಳಲ್ಲಿನ ಹೂಡಿಕೆಯಾಗಿರಬಹುದು.

5. **ಚಾಲ್ತಿ ಸ್ವತ್ತುಗಳು :** ಒಂದು ಕಂಪನಿ ಹೊಂದಿರುವ ಎಲ್ಲಾ ತಾತ್ಕಾಲಿಕ ಅಥವಾ ಅಲ್ಪಾವಧಿಯ ಸ್ವತ್ತುಗಳನ್ನು ಚಾಲ್ತಿ ಸ್ವತ್ತುಗಳೆಂದು ಪರಿಗಣಿಸುತ್ತೇವೆ. ಇವುಗಳನ್ನು ಈ ಕೆಳಕಂಡಂತೆ ವಿಂಗಡಿಸಿ, ಅಡಾವೆ ಪತ್ರಿಕೆಯಲ್ಲಿ ಬರೆಯಬೇಕು.

   – ಪ್ರಸ್ತುತ / ಅಲ್ಪಾವಧಿ ಹೂಡಿಕೆಗಳು (short-term investments)

   – ಅಂತಿಮ ಸರಕು ಸಾಮಗ್ರಿಗಳು (closing inventories)

   ಟಿಪ್ಪಣಿ : 8 – **ವ್ಯಾಪಾರಿ ಸ್ವೀಕರಣೆಗಳು (ಋಣಿಗಳು ಮತ್ತು ಹುಂಡಿಗಳು / ವಹಿವಾಟು ಸ್ವೀಕರಣೆಗಳು** – Debtors and B/R )

   **ಟಿಪ್ಪಣಿ : 9 – ನಗದು ಮತ್ತು ನಗದು ರೂಪಕಗಳು**

   **ಟಿಪ್ಪಣಿ : 10 – ಅಲ್ಪಾವಧಿ ಮುಂಗಡ ಮತ್ತು ಸಾಲಗಳು**

6. **ವ್ಯವಹಾರಗಳಿಂದ ಆದಾಯ :** ಒಂದು ಕಂಪನಿಯು ತನ್ನ ಉದ್ದೇಶಿತ ಕಾರ್ಯಗಳಿಂದ ಗಳಿಸುವ ಆದಾಯವು ಇದಾಗಿರುತ್ತದೆ. ಅಂದರೆ ಸರಕು ಮತ್ತು ಸೇವೆಗಳ ಮಾರಾಟದಿಂದ ಗಳಿಸು ಆದಾಯ ಎಂದರ್ಥ.

   ಈ ಆದಾಯಗಳಿಕೆಗೆ ಸಂಬಂಧಿಸಿದ ಅಬಕಾರಿ ಮತ್ತಿತರೆ ಸುಂಕಗಳನ್ನು ಕಳೆದು ನಿವ್ವಳ ಆದಾಯವನ್ನು "ಲಾಭ–ನಷ್ಟ ಪಟ್ಟಿ"ಯಲ್ಲಿ ನಮೂದಿಸಬೇಕು.

   ತದನಂತರ, ಇತರೆ ಮೂಲಗಳ ಆದಾಯವನ್ನು ನಮೂದಿಸಿ, ಒಟ್ಟು ಮೊತ್ತ ಆದಾಯವನ್ನು ಬರೆಯುವುದು.

7. **ಖರ್ಚುಗಳು / ವೆಚ್ಚಗಳು :** ಲಾಭ–ನಷ್ಟ ಪಟ್ಟಿ ತಯಾರಿಕೆಯಲ್ಲಿ, ಆದಾಯಗಳನ್ನು ನಮೂದಿಸಿದನಂತರ, ತನ್ನ ಎಲ್ಲಾ ಖರ್ಚು, ವೆಚ್ಚ ಮತ್ತು ನಷ್ಟಗಳನ್ನು ಕೆಳಕಂಡಂತೆ ನಮೂದಿಸಬೇಕು;

   (ಅ) ಉತ್ಪಾದನೆಯಲ್ಲಿ ಉಪಯೋಗಿಸಿದ ಸಾಮಗ್ರಿಗಳು ಮತ್ತು ಕಚ್ಚಾ ಪದಾರ್ಥಗಳ ಒಟ್ಟು ವೆಚ್ಚ.

   (ಆ) ಮಾರಾಟ ಸರಕುಗಳ ಕೊಳ್ಳುವಿಕೆಯ ವೆಚ್ಚ.

   (ಇ) ಉಳಿಕೆ ಸರಕುಗಳ ಮೌಲ್ಯ ವ್ಯತ್ಯಾಸ (ವರ್ಷದ ಪ್ರಾರಂಭದಲ್ಲಿ ಮತ್ತು ಅಂತ್ಯದಲ್ಲಿ ಕಂಪನಿ ಹೊಂದಿದ್ದ ಸರಕುಗಳ ಮೌಲ್ಯದಲ್ಲಿನ ವ್ಯತ್ಯಾಸ)

   (ಈ) **ಟಿಪ್ಪಣಿ : 11 – ನೌಕರರ ಅನುಕೂಲತೆಯ (ಕಲ್ಯಾಣ) ವೆಚ್ಚಗಳು** – ಸಂಬಳ ಮತ್ತು ಕೂಲಿ, ಸಾಮೂಹಿಕ ವಿಮಾ ಕಂತು, ಬೋನಸ್, ಪಿಂಚಣಿ, ಕ್ಷೇಮಾಭಿವೃದ್ಧಿ ನಿಧಿಗೆ ಕೊಡುಗೆ ಮುಂತಾದವು.

   (ಉ) **ಟಿಪ್ಪಣಿ : 12 – ಹಣಕಾಸು ವೆಚ್ಚಗಳು** – ಸಾಲಗಳ ಮೇಲಿನ ಬಡ್ಡಿ, ಸಾಲಪತ್ರಗಳ ಮೇಲೆ ಬಡ್ಡಿ ಮುಂತಾದವು.

   (ಊ) **ಟಿಪ್ಪಣಿ : 13 – ಸವಕಳಿ (Depreciation) ಮತ್ತು ಆಸ್ತಿಗಳ ಮೌಲ್ಯ ಕಡಿತ** – ಖಾಯಂ ಆಸ್ತಿಯ ಬದಲಾವಣೆಗಾಗಿ ಕಾಯ್ದಿರಿಸುವುದಕ್ಕೆ ಸವಕಳಿ ಎಂದು ಕರೆಯುತ್ತೇವೆ. ಅಕೌಂಟಿಂಗ್ ಸ್ಟಾಂಡರ್ಡ್–6ರ ಅನ್ವಯ ಸವಕಳಿ ಮಾಡುವುದು ಕಡ್ಡಾಯವಾಗಿರುತ್ತದೆ. ಸವಕಳಿಯ ವಿಧಾನವನ್ನು ಕಂಪನಿಯವರೇ ನಿರ್ಧರಿಸಿಕೊಳ್ಳಬಹುದು.

   **ವಜಾ / ತೊರೆದ ವೆಚ್ಚಗಳು (Amortisation)** : ಮುಂದೂಡಲ್ಪಟ್ಟ ಕಂದಾಯ ವೆಚ್ಚ (ಡೆಫರ್ಡ್ ರೆವೆನ್ಯೂ ಎಕ್ಸ್‌ಪೆಂಡಿಚರ್) ಮತ್ತು ಅಗೋಚರ ಆಸ್ತಿಗಳು ಬದಲಾವಣೆ ಮಾಡಲಾಗದ ವೆಚ್ಚಗಳನ್ನು ವಜಾಗೊಳಿಸುವುದಕ್ಕೆ /ತೊಡೆದುಹಾಕುವುದಕ್ಕೆ ವಜಾ ಎಂದು ಕರೆಯುತ್ತೇವೆ.

   (ಋ) **ಟಿಪ್ಪಣಿ : 14 – ಇತರೆ ಖರ್ಚು ವೆಚ್ಚಗಳು – ಬಾಡಿಗೆ, ಮುದ್ರಣ ಸಾಮಗ್ರಿಗಳು ಖರ್ಚು, ಸಾರಿಗೆ ಖರ್ಚು, ಜಾಹಿರಾತು ವೆಚ್ಚ, ಅಂಚೆ ಮತ್ತು ದೂರ ಸಂಪರ್ಕ ವೆಚ್ಚ.**

   **ಪ್ರಾರಂಭಿಕ ವೆಚ್ಚ / ಪೂರ್ವಭಾವಿ ವೆಚ್ಚ:** ವ್ಯವಹಾರ ಪ್ರಾರಂಭ ಮಾಡುವ ಮೊದಲೇ ಮಾಡಿದ ವೆಚ್ಚಕ್ಕೆ ಪೂರ್ವಭಾವಿ ವೆಚ್ಚ ಎಂದು ಕರೆಯುತ್ತೇವೆ.

ಎ) ಪ್ರಾರಂಭಿಕ ವೆಚ್ಚವನ್ನು ತಾಳೆ ಪಟ್ಟಿಯಲ್ಲಿ ಕೊಟ್ಟಾಗ ಟಿಪ್ಪಣಿ ಸಂಖ್ಯೆ 7, ಅಂದರೆ ಸ್ಥಿರ ಸ್ವತ್ತುಗಳ ನಮೂನೆಯಲ್ಲಿ ತೋರಿಸುತ್ತೇವೆ.

ಕೆಲವೊಮ್ಮೆ ಹೊಂದಾಣಿಕೆಯಲ್ಲಿ ಪ್ರಾರಂಭಿಕ ವೆಚ್ಚವನ್ನು ತೆಗೆದುಹಾಕಿ ಅಥವಾ ವಜಾಗೊಳಿಸಿ ಎಂದು ಕೊಟ್ಟಿರುತ್ತಾರೆ. ಅಂತಹ ಸಂದರ್ಭದಲ್ಲಿ ಈ ಕೆಳಕಂಡ ರೀತಿಯಲ್ಲಿ ಪರಿಗಣಿಸಬೇಕು.

1) ಲಾಭ–ನಷ್ಟ ಪಟ್ಟಿಯಲ್ಲಿ ಸವಕಳಿ ಮತ್ತು ವಜಾ ಶೀರ್ಷಿಕೆಯಲ್ಲಿ ತೋರಿಸಬೇಕು.

2) ಪ್ರಾರಂಭಿಕ ವೆಚ್ಚದಿಂದ ತೆಗೆದುಹಾಕಿದ ಭಾಗವನ್ನು ಕಳೆದು ಟಿಪ್ಪಣಿ ಸಂಖ್ಯೆ 7 ಅಂದರೆ ಸ್ಥಿರ ಸ್ವತ್ತುಗಳ ನಮೂನೆಯಲ್ಲಿ ತೋರಿಸಬೇಕು.

**ಸಂಯುಕ್ತ ಬಂಡವಾಳ ಕಂಪನಿಯಲ್ಲಿ ಹಣಕಾಸು ಪಟ್ಟಿಯನ್ನು ತಯಾರಿಸುವಾಗ ಪರಿಗಣಿಸಬೇಕಾದ ಕೆಲವು ಮುಖ್ಯ ಅಂಶಗಳು**

1. **ಅಂತಿಮ ಸರಕು: (ಕ್ಲೋಸಿಂಗ್ ಸ್ಟಾಕ್)** : ಇದು ಹೊಂದಾಣಿಕೆಯ ಅಂಶವಾಗಿದ್ದು ಎರಡು ಸ್ಥಳಗಳಲ್ಲಿ ತೋರಿಸುತ್ತೇವೆ. ಇದನ್ನು ಲಾಭ–ನಷ್ಟಗಳ ಪಟ್ಟಿಯ, ವೆಚ್ಚಗಳ ಅಡಿಯಲ್ಲಿ "ಸರಕುಗಳಲ್ಲಿನ ವ್ಯತ್ಯಯದಲ್ಲಿ" ಮತ್ತು ಆಡಾವೆ ಪತ್ರಿಕೆಯಲ್ಲಿ ಚಾಲ್ತಿ ಸ್ವತ್ತುಗಳ ಅಡಿಯಲ್ಲಿ ತೋರಿಸುತ್ತೇವೆ.
2. **ಕರೆಗಳ ಬಾಕಿ ಹಣ** : ಇದು ತಾಳೆ ಪಟ್ಟಿಯಲ್ಲಿ ಇರುತ್ತದೆ. ಇದನ್ನು ಕರೆಯಲ್ಪಟ್ಟ ಬಂಡವಾಳದಿಂದ ಕಳೆದು ಪಾವತಿಸಿದ ಬಂಡವಾಳವನ್ನು ಕಂಡುಹಿಡಿಯುತ್ತೇವೆ. ಇದು ಟಿಪ್ಪಣಿ ಸಂಖ್ಯೆ 1ರಲ್ಲಿ ಬರುತ್ತದೆ. ಇದು ಕಂಪನಿಯು ಕರೆ ಮಾಡಿದ್ದು ಮತ್ತು ಶೇರುದಾರರಿಂದ ಪಾವತಿಯಾಗದೇ ಇರುವ ಹಣವು.
3. **ಲಾಭಾಂಶ (ಡಿವಿಡೆಂಡ್)**: ಶೇರುದಾರರಿಗೆ ಕಂಪನಿಯು ಭಾಗಶಃ ಲಾಭವನ್ನು ಹಂಚುವುದಕ್ಕೆ ಲಾಭಾಂಶ (ಡಿವಡೆಂಡ್) ಎಂದು ಕರೆಯುತ್ತೇವೆ. ಇದನ್ನು ಕಂಪನಿಯ ತಾಳೆಪಟ್ಟಿಯಲ್ಲಿ ಕೊಟ್ಟಿರುತ್ತಾರೆ. ಇದನ್ನು ಟಿಪ್ಪಣಿ ಸಂಖ್ಯೆ 2ರಲ್ಲಿ ಅಂದರೆ ಲಾಭಾಂಶ ಮತ್ತು ವಿನಿಯೋಗ ಎನ್ನುವ ಶೀರ್ಷಿಕೆಯ ಪಟ್ಟಿಯಲ್ಲಿ ತೋರಿಸಬೇಕು.
4. **ಮಧ್ಯಂತರ ಲಾಭಾಂಶ(ಇಂಟರಿಮ್ ಡಿವಿಡೆಂಡ್)** : ಎರಡು ವಾರ್ಷಿಕ ಸಾಮಾನ್ಯ ಸಭೆಗಳ ನಡುವೆ ಶೇರುದಾರರಿಗೆ ಕೊಡುವ ಲಾಭಾಂಶ(ಡಿವಿಡೆಂಡ್)ವನ್ನು ಮಧ್ಯಂತರ ಲಾಭಾಂಶ ಎಂದು ಕರೆಯುತ್ತೇವೆ. ಇದನ್ನು ಕಂಪನಿಯ ತಾಳೆಪಟ್ಟಿಯಲ್ಲಿ ಕೊಟ್ಟಿರುತ್ತಾರೆ. ಇದನ್ನು ಟಿಪ್ಪಣಿ ಸಂಖ್ಯೆ 2ರಲ್ಲಿ ಲಾಭಾಂಶ ಮತ್ತು ವಿನಿಯೋಗ ಎನ್ನುವ ಶೀರ್ಷಿಕೆಯ ಪಟ್ಟಿಯಲ್ಲಿ ತೋರಿಸಬೇಕು.
5. **(ಪ್ರಪೋಸ್‌ಡ್ ಡಿವಿಡೆಂಡ್)**: ಪ್ರಸ್ತಾವಿತ ಲಾಭಾಂಶ: ಮಂಡಳಿಯ ಸಭೆಯಲ್ಲಿ ನಿರ್ದೇಶಕರ ಮಂಡಳಿಯು ಲಾಭಾಂಶವನ್ನು ಶೇರುದಾರರಿಗೆ ನೀಡಲು ಪ್ರಸ್ತಾಪಿಸಿರುವ ಲಾಭಾಂಶಕ್ಕೆ ಪ್ರಸ್ತಾಪಿತ ಲಾಭಾಂಶ ಎಂದು ಕರೆಯುತ್ತೇವೆ. ಮತ್ತು ವಾರ್ಷಿಕ ಸಾಮಾನ್ಯ ಸಭೆಯಲ್ಲಿ ಇದರ ಒಪ್ಪಿಗೆಯನ್ನು ಪಡೆಯಬೇಕು. ಪ್ರಸ್ತಾಪಿತ ಲಾಭಾಂಶವನ್ನು ಹೊಂದಾಣಿಕೆಯಲ್ಲಿ ಕೊಟ್ಟಿರುತ್ತಾರೆ. ಇದನ್ನು ಟಿಪ್ಪಣಿ ಸಂಖ್ಯೆ 2 ಅಂದರೆ ಲಾಭಾಂಶ ಮತ್ತು ವಿನಿಯೋಗ ಮತ್ತು ಟಿಪ್ಪಣಿ ಸಂಖ್ಯೆ 6 ಅಂದರೆ ಚಾಲ್ತಿ ಜವಾಬ್ದಾರಿಗಳು ಹಾಗು ಮುಂಜಾಗ್ರತೆಯಲ್ಲಿ ತೋರಿಸಬೇಕು.
6. **ಕೋರಿಕೆಯಾಗದ ಲಾಭಾಂಶ** : ಕಂಪನಿಂದ ಲಾಭಾಂಶವು ಪ್ರಸ್ತಾಪಿಸಿದ್ದು ಆ ಹಣವನ್ನು ಶೇರುದಾರರು ಕೋರಿಕೆ ಸಲ್ಲಿಸದೇ ಇದ್ದಾಗ ಅದನ್ನು ಕೋರಿಕೆಯಾಗದ ಲಾಭಾಂಶ ಎಂದು ಕರೆಯುತ್ತೇವೆ. ಇದನ್ನು ಟಿಪ್ಪಣಿ ಸಂಖ್ಯೆ 6 ಅಂದರೆ ಚಾಲ್ತಿ ಜವಾಬ್ದಾರಿಗಳು ಮತ್ತು ಮುಂಜಾಗ್ರತೆಯಲ್ಲಿ ತೋರಿಸುತ್ತೇವೆ.
7. **ತೆರಿಗೆಗಳಿಗಾಗಿ ಮುಂಜಾಗ್ರತೆ ಅಥವಾ ಕಾಯ್ದಿರಿಸು** : ಮುಂದಿನ ವರ್ಷದಲ್ಲಿ ತೆರಿಗೆ ಪಾವತಿ ಮಾಡುವುದಕ್ಕಾಗಿ ಹಣವನ್ನು ಮೀಸಲಿಡಬೇಕು. ಇದನ್ನು ಈ ಕೆಳಕಂಡ ರೀತಿಯಲ್ಲಿ ಪರಿಗಣಿಸಬೇಕು.

   ಎ) ತೆರಿಗೆಯ ಮೀಸಲನ್ನು ತಾಳೆಪಟ್ಟಿಯ ಸಿಆರ್ ಭಾಗದಲ್ಲಿ ಕೊಟ್ಟಿದ್ದಾಗ ಅದನ್ನು ಟಿಪ್ಪಣಿ ಸಂಖ್ಯೆ 6 ಅಂದರೆ ಚಾಲ್ತಿ ಸಾಲಗಳು ಮತ್ತು ಮುಂಜಾಗ್ರತೆಯಲ್ಲಿ ತೋರಿಸಬೇಕು.

   ಬಿ) ಇದನ್ನು ಹೊಂದಾಣಿಕೆಯಲ್ಲಿ ಕೊಟ್ಟಾಗ ಲಾಭ–ನಷ್ಟ ಪಟ್ಟಿಯಲ್ಲಿ "ತೆರಿಗೆಯ ಪೂರ್ವ ಲಾಭದಲ್ಲಿ ಕಳೆದು ಮತ್ತು ಟಿಪ್ಪಣಿ ಸಂಖ್ಯೆ 6ರಲ್ಲಿ ಅಂದರೆ ಚಾಲ್ತಿ ಜವಾಬ್ದಾರಿಗಳು ಮತ್ತು ಮುಂಜಾಗ್ರತೆಯಲ್ಲಿ ತೋರಿಸಬೇಕು.

8. **ಮುಟ್ಟುಗೋಲು ಹಾಕಿದ ಶೇರುಗಳು :** ಇದನ್ನು ತಾಳೆಪಟ್ಟಿಯಲ್ಲಿ ಕೊಟ್ಟಿರುತ್ತಾರೆ. ಮತ್ತು ಇದನ್ನು ಟಿಪ್ಪಣಿ ಸಂಖ್ಯೆ 1 ಅಂದರೆ ಪಾವತಿ ಮಾಡಿದ ಬಂಡವಾಳಕ್ಕೆ ಕೂಡಬೇಕು.

9. **ಸಂಶಯಾತ್ಮಕ ಸಾಲಕ್ಕಾಗಿ ಮೀಸಲು. :**

   ಎ) ಇದನ್ನು ತಾಳೆಪಟ್ಟಿಯಲ್ಲಿ ಕೊಟ್ಟಿದ್ದಾಗ ಇದು ಹಳೆಯ ಮೀಸಲು . ಇದನ್ನು ಟಿಪ್ಪಣಿ ಸಂಖ್ಯೆ 14 ಅಂದರೆ ನಿರ್ವಹಣೆಯ ವೆಚ್ಚ ಮತ್ತು ನಷ್ಟಗಳ ಶೀರ್ಷಿಕೆಯಲ್ಲಿ ಕರಡು ಸಾಲದಿಂದ ಕಳೆಯಬೇಕು.

   ಬಿ) ಇದನ್ನು ಹೊಂದಾಣಿಕೆಯಲ್ಲಿ ಕೊಟ್ಟಾಗ ಟಿಪ್ಪಣಿ ಸಂಖ್ಯೆ 14ರ ಇತರೆ ಖರ್ಚುಗಳ ಅಡಿಯಲ್ಲಿ ಕರಡುಸಾಲಕ್ಕೆ ಕೂಡಬೇಕು ಮತ್ತು ಟಿಪ್ಪಣಿ ಸಂಖ್ಯೆ 8 ಚಾಲ್ತಿ ಆಸ್ತಿಗಳ, "ವಹಿವಾಟು ಸ್ವೀಕರಣಗಳಲ್ಲಿ" ಕಳೆಯಬೇಕು.

10. **ವರ್ಗಾವಣೆ ಶುಲ್ಕ :** ಇದನ್ನು ತಾಳೆಪಟ್ಟಿಯಲ್ಲಿ ಕೊಟ್ಟಿರುತ್ತಾರೆ. ಮತ್ತು ಇದನ್ನು ಲಾಭ–ನಷ್ಟ ಪಟ್ಟಿಯ ಶೀರ್ಷಿಕೆಯಾದ "ಇತರೆ ಆದಾಯದಲ್ಲಿ" ತೋರಿಸಬೇಕು.

11. **ಸೆಕ್ಯೂರಿಟಿ ಪ್ರೀಮಿಯಂ :**

    ಸಕ್ಯೂರಿಟಿ ಅಧಿಕ ಬೆಲೆ: ಇಲ್ಲಿ ಶೇರು ಮತ್ತು ಸಾಲಪತ್ರಗಳ ಅಧಿಕ ಬೆಲೆ ಸೇರಿರುತ್ತದೆ. ಇದನ್ನು ಟಿಪ್ಪಣಿ ಸಂಖ್ಯೆ 2 ಅಂದರೆ ಕಾಯ್ದಿಟ್ಟ ನಿಧಿ ಮತ್ತು ಕೂಡಿಟ್ಟ ಲಾಭದ ಶೀರ್ಷಿಕೆಯಲ್ಲಿ ತೋರಿಸಬೇಕು.

12. **ಲಾಭಾಂಶ ವಿತರಣಾ ತೆರಿಗೆ – ಲಾ.ವಿ.ತೆ. (ಡಿವಿಡೆಂಡ್ ಡಿಸ್ಟ್ರಿಬ್ಯೂಷನ್ ಟ್ಯಾಕ್ಸ್) :**

    ಲಾಭಾಂಶ ವಿತರಣಾ ತೆರಿಗೆ: ಶೇರುದಾರರಿಗೆ ಲಾಭಾಂಶವನ್ನು ಕೊಟ್ಟ ಅಥವಾ ಘೋಷಿಸಿದ ಅಥವಾ ವಿತರಣೆ ಮಾಡಿದ ಲಾಭಾಂಶದ ಮೇಲೆ ಪ್ರತಿ ಕಂಪನಿಯು ತೆರಿಗೆ ಕಟ್ಟಬೇಕು. ಪ್ರತಿಕಂಪನಿಯು 16.995% ಶೇಕಡರಷ್ಟು ಡಿ.ಡಿ.ಟಿ.ಯನ್ನು ಕಟ್ಟಬೇಕು. ಇದನ್ನು ತಾಳೆ ಪಟ್ಟಿಯಲ್ಲಿ ಕೊಟ್ಟಿದ್ದಾಗ ಇದನ್ನು ಟಿಪ್ಪಣಿ ಸಂಖ್ಯೆ 2 ಅಂದರೆ ಲಾಭಾಂಶ ಮತ್ತು ವಿನಿಯೋಗದ ಶೀರ್ಷಿಕೆಯಲ್ಲಿ ತೋರಿಸಬೇಕು. ಇದನ್ನು ಹೊಂದಾಣಿಕೆಯಲ್ಲಿ ಕೊಟ್ಟಾಗ ಟಿಪ್ಪಣಿ ಸಂಖ್ಯೆ 2 ಮತ್ತು ಟಿಪ್ಪಣಿ ಸಂಖ್ಯೆ 6ರಲ್ಲಿ ತೋರಿಸಬೇಕು.

## 7.5 ಹಣಕಾಸು ವಿವರಣಾ ಪಟ್ಟಿಗಳ ಪ್ರಾಮುಖ್ಯತೆ ಮತ್ತು ಮಿತಿಗಳು : (Importance and limitations of financial statements.)

### 7.5.1 ಹಣಕಾಸು ವಿವರಣಾ ಪಟ್ಟಿಗಳ ಉಪಯುಕ್ತೆ ಮತ್ತು ಪ್ರಾಮುಖ್ಯತೆ :

ಹಣಕಾಸು ಪಟ್ಟಿಗಳನ್ನು ಉಪಯೋಗಿಸುವವರಿಗೆ, ಅದರ ಮಾಹಿತಿಗಳನ್ನು ತಿಳಿದುಕೊಳ್ಳಲು ಆಸಕ್ತಿಯುಳ್ಳ ಬಾಹ್ಯ ಸಂಬಂಧಿತ ವ್ಯಕ್ತಿಗಳಿಗೆ (ಅಂದರೆ ಶೇರುದಾರರು, ಧನಿಗಳು, ಸರ್ಕಾರ, ಇತರರು) ಹಾಗೂ ಸೂಕ್ತ ಆರ್ಥಿಕ ತೀರ್ಮಾನಗಳನ್ನು ತೆಗೆದುಕೊಳ್ಳಲು ಈ ಹಣಕಾಸು ಪಟ್ಟಿಗಳು ಅತ್ಯಂತ ಅವಶ್ಯಕವಾಗಿದೆ.

ಹಣಕಾಸು ಪಟ್ಟಿಗಳ ಉಪಯುಕ್ತತೆ ಮತ್ತು ಪ್ರಾಮುಖ್ಯತೆಗಳು ಈ ಕೆಳಕಂಡಂತಿವೆ;

1. **ನಿರ್ವಹಣಾ ವ್ಯವಸ್ಥೆಯ ಕಾರ್ಯವೈಖರಿಯ ವರದಿ :** ಹಣಕಾಸು ಪಟ್ಟಿಗಳು ನಿರ್ವಹಣೆಯ ಕಾರ್ಯವೈಖರಿಯ ಬಗ್ಗೆ ಶೇರುದಾರರಿಗೆ ವರದಿಯನ್ನು ಸಲ್ಲಿಸುತ್ತದೆ. ಮಾಲೀಕತ್ವದ ನಿರೀಕ್ಷೆ ಹಾಗೂ ನಿರ್ವಹಣೆಯ ಕಾರ್ಯವೈಖರಿಗಳ ನಡುವಿನ ಅಂತರವನ್ನು ಈ ಪಟ್ಟಿಯ ಮೂಲಕ ಅರಿತುಕೊಳ್ಳಬಹುದು.
2. **ತೆರಿಗೆ ನೀತಿಗೆ ಆಧಾರ :** ಸರ್ಕಾರದ ತೆರಿಗೆ ನೀತಿಯ ರಚನೆ ವ್ಯಾವಹಾರಿಕ ಸಂಸ್ಥೆಗಳ ಹಣಕಾಸಿನ ನಡವಳಿಕೆಗಳಾಧಾರದ ಮೇಲೆ ಅವಲಂಬಿಸಿರುತ್ತದೆ. ಈ ಹಣಕಾಸು ಪಟ್ಟಿಗಳು ಇದಕ್ಕೆ ಸಂಬಂಧಿಸಿದ ಮಾಹಿತಿಯನ್ನು ನೀಡುವ ಮೂಲಕ ಸರ್ಕಾರ ರಚಿಸುವ ತೆರಿಗೆ ನೀತಿ, ಕೈಗಾರಿಕಾ ನೀತಿ ಮತ್ತು ಇತರೆ ಆರ್ಥಿಕ ನೀತಿಗಳಿಗೆ ಆಧಾರವಾಗಿದೆ.

3. **ಉದ್ದರಿಗಳ (ಸಾಲ) ನೀಡುವಿಕೆಗೆ ಆಧಾರ :** ವ್ಯಾವಹಾರಿಕ ಸಂಸ್ಥೆಗಳಿಗೆ ಬ್ಯಾಂಕ್ ಮತ್ತು ವಿವಿಧ ಹಣಕಾಸು ಸಂಸ್ಥೆಗಳಿಂದ ಉದ್ದರಿಗಳ ಮೂಲಕ ತಮ್ಮ ಹಣದ ಅವಶ್ಯಕತೆಯನ್ನು ಪೂರೈಸಿಕೊಳ್ಳುತ್ತವೆ. ಈ ಹಣಕಾಸು ಸಂಸ್ಥೆಗಳ ಉದ್ಧರಿ ನೀಡುವಿಕೆಯು, ಹಣಕಾಸು ಪಟ್ಟಿಗಳ ಅಂಕಿ-ಅಂಶಗಳ ಮೇಲೆ ಅವಲಂಭಿಸಿರುತ್ತದೆ.

4. **ಭಾವೀ ಹೂಡಿಕೆದಾರರಿಗೆ ಆಧಾರ :** ಪ್ರತಿಯೊಬ್ಬ ಹೂಡಿಕೆದಾರನು ತನ್ನ ಹೂಡಿಕೆಯ ಭದ್ರತೆ, ಲಾಭ ಮತ್ತು ದ್ರವತೆಯನ್ನು ನೋಡಿ ಹೂಡಿಕೆ ಮಾಡುತ್ತಾನೆ. ಇಂತಹ ಹೂಡಿಕೆದಾರರಿಗೆ ಕಂಪನಿಯ ಲಾಭ ಮತ್ತು ಋಣ ಮುಕ್ತಿ ಯೋಗ್ಯತೆಯನ್ನು ತಿಳಿದುಕೊಳ್ಳಲು ಈ ಹಣಕಾಸು ಪಟ್ಟಿಗಳು ಸಹಕಾರಿಯಾಗಿವೆ.

5. **ಶೇರು ವಿನಿಯಮ ಕೇಂದ್ರಗಳಿಗೆ ಸಹಾಯ :** ವ್ಯವಹಾರಿಕಾ ಸಂಸ್ಥೆಗಳ ಹಣಕಾಸು ನಡವಳಿಕಾ ವರಧಿಯ ಪಾರದರ್ಶಕತೆಯ ಬಗ್ಗೆ ಶೇರುವಿನಿಮಯ ಕೇಂದ್ರವು ಸದಾ ಕಣ್ಣಿಟ್ಟಿದ್ದು, ಹೂಡಿಕೆದಾರರ ಆಸಕ್ತಿಯನ್ನು ರಕ್ಷಿಸಲು ಸದಾಶ್ರಮಿಸುತ್ತದೆ. ಈ ದೆಸೆಯಲ್ಲಿ ಹಣಕಾಸು ಪಟ್ಟಿಗಳು ಶೇರು ವಿನಿಮಯ ಕೇಂದ್ರಕ್ಕೆ ವರದಿ ಸಲ್ಲಿಸುವ ಮೂಲಕ ಸಹಕರಿಸುತ್ತದೆ.

6. **ನೌಕರರಿಗೆ ಸಹಾಯ :** ನೌಕರರ ವೇತನ ಇತ್ಯಾದಿಗಳು ಕಂಪನಿಯ ಲಾಭದ ಮೇಲೆ ಅವಲಂಭಿಸಿರುತ್ತದೆ. ಕಂಪನಿಯ ಲಾಭವನ್ನು ಹಣಕಾಸು ಪಟ್ಟಿಯಲ್ಲಿನ ಲಾಭ–ನಷ್ಟ ಖಾತೆಯ ಮೂಲಕ ನೌಕರರು ತಿಳಿದುಕೊಂಡು, ಕಂಪನಿಯೊಂದಿಗೆ ತಮ್ಮ ಬೇಡಿಕೆಗಳನ್ನು ಈಡೇರಿಸಿಕೊಳ್ಳುತ್ತಾರೆ.

### 7.5.2 ಹಣಕಾಸು ವಿವರಣಾ ಪಟ್ಟಿಗಳ ಮಿತಿಗಳು (ದೋಷಗಳು) :

ಹಣಕಾಸು ಪಟ್ಟಿಗಳ ತಯಾರಿಕೆಯಲ್ಲಿ ಎಷ್ಟೇ ಗಮನಾರ್ಹವಾಗಿ ಕಾರ್ಯನಿರ್ವಹಿಸಿದರೂ, ಅವು ಈ ಕೆಳಕಂಡಂತೆ ನ್ಯೂನತೆಗಳನ್ನೊಳಗೊಂಡಿರುತ್ತದೆ.

1. **ಪ್ರಸ್ತುತ ವಿದ್ಯಮಾನವನ್ನು ತೋರಿಸುವುದಿಲ್ಲ :** ಹಣಕಾಸು ಪಟ್ಟಿಗಳನ್ನು "ಐತಿಹಾಸಿಕ ವೆಚ್ಚ ಒಡಂಬಡಿಕೆ"ಯ ಆಧಾರದ ಮೇಲೆ ತಯಾರಿಸಲಾಗುತ್ತದೆ. ಒಂದು ಸಂಸ್ಥೆಯ "ಕೊಳ್ಳುವಿಕೆಯ ಸಾಮರ್ಥ್ಯವು" ಸದಾ ಬದಲಾಗುತ್ತಿರುತ್ತದೆ. ಆದರೆ ಹಣಕಾಸು ಪಟ್ಟಿಯಲ್ಲಿನ ಆಸ್ತಿಗಳು ಮತ್ತು ಜವಾಬ್ದಾರಿಗಳು ಪ್ರಸ್ತುತ ವಿದ್ಯಮಾನವನ್ನು ಪ್ರತಿಬಿಂಬಿಸುವುದಿಲ್ಲ.

2. **ಆಸ್ತಿಗಳು ಬೆಲೆ ತರುವುದಿಲ್ಲ :** ಲೆಕ್ಕಪ್ರಕ್ರಿಯೆಗಳು ಹಲವು ಕಲ್ಪನೆ ಮತ್ತು ಒಡಂಬಡಿಕೆಗಳನ್ನೊಳಗೊಂಡಿರುವುದರಿಂದ ಹಣಕಾಸು ಪಟ್ಟಿಯಲ್ಲಿ ನಮೂದಿಸಿದ ಮೌಲ್ಯಕ್ಕೆ ಕೆಲವು ಆಸ್ತಿಗಳನ್ನು ಕೆಲವು ಆಸ್ತಿಗಳನ್ನು ಮಾರಲು ಸಾಧ್ಯವಾಗುವುದಿಲ್ಲ.

3. **ಊಹೆಗಳು :** ಹಣಕಾಸು ಪಟ್ಟಿಗಳ ತಯಾರಿಕೆ, ಬರೆದಿಟ್ಟ ಅಂಕಿ–ಅಂಶಗಳನ್ನೊಳಗೊಂಡ ಲೆಕ್ಕ ಪುಸ್ತಕಗಳ ಮೇಲೆ ಅವಲಂಭಿಸಿರುತ್ತದೆ. ಆ ಲೆಕ್ಕ ಪುಸ್ತಕದ ಅಂಶಗಳು ಲೆಕ್ಕಿಗನ ಊಹೆ, ತೀರ್ಮಾನ, ಅನಿಸಿಕೆ ಮತ್ತು ಕಲ್ಪನೆಗಳನ್ನೊಳಗೊಂಡಿದ್ದು, ಇವು ವಾಸ್ತವಿಕ ಫಲಿತಾಂಶವನ್ನು ನೀಡುವುದಿಲ್ಲ.

4. **ಸಮಷ್ಠಿ ಮಾಹಿತಿ :** ಹಣಕಾಸು ಪಟ್ಟಿಗಳು ಸಮಷ್ಠಿ (ಒಟ್ಟುಗೂಡಿಸಿದ) ಮಾಹಿತಿಯನ್ನು ನೀಡುತ್ತದೆಯೇ ಹೊರತು ಸವಿಸ್ತಾರ ಮಾಹಿತಿಯನ್ನು ನೀಡುವುದಿಲ್ಲ. ಹಾಗಾಗಿ, ಇವು ತೀರ್ಮಾನ ತೆಗೆದುಕೊಳ್ಳುವಿಕೆಗೆ ಪೂರಕವಾಗುವುದಿಲ್ಲ.

5. **ಗುಣಾತ್ಮಕ ಮಾಹಿತಿ ಅಲಭ್ಯ :** ಹಣಕಾಸು ಪಟ್ಟಿಗಳು ಅಂಕಿ ಆಧಾರಿತ ಮಾಹಿತಿಗಳನ್ನು ಮಾತ್ರ ನೀಡುತ್ತವೆ. ಗುಣಾತ್ಮಕ ಮಾಹಿತಿಗಳನ್ನು ಹೊಂದಿರುವುದಿಲ್ಲ. ಉದಾ : ಕಾರ್ಯಗುಣಮಟ್ಟ, ಕೈಗಾರಿಕಾ ಸಂಬಂಧಗಳು, ಕಾರ್ಮಿಕ ಸಂಬಂಧಗಳು ಇತ್ಯಾದಿ.

6. **ಇವು ಮಧ್ಯಂತರ ವರದಿ ಮಾತ್ರ :** ಹಣಕಾಸು ಪಟ್ಟಿ ತೋರುವ ಲಾಭ–ನಷ್ಟ ಅಥವಾ ಸ್ಥಿತಿ–ಗತಿಗಳು ಒಂದು ನಿರ್ದಿಷ್ಟ ವರ್ಷ ಮಾತ್ರ ಸೀಮಿತವಾಗಿದ್ದು, ಭವಿಷ್ಯತ್ತಿನ ಬದಲಾವಣೆಗಳನ್ನು ಸೂಚಿಸುವುದಿಲ್ಲ. ಹಾಗಾಗಿ ಇದು ಕೇವಲ ಒಂದು ಮಧ್ಯಂತರ ವರದಿ ಎಂದೆನಿಸಿಕೊಳ್ಳುತ್ತದೆ.

## 7.6 ಹಣಕಾಸು ವಿವರಣಾ ಪಟ್ಟಿ ತಯಾರಿಕೆ (ನಿದರ್ಶನ ಮತ್ತು ನಿರೂಪಣೆ) :

## Preparation of Financial Statements (Problems & Solutions):

### ನಿದರ್ಶನ –1

ಪ್ರಿಯ ವ್ಯಾಪಾರಿ ಕಂಪನಿ ನಿಯಮಿತದ ಮಾರ್ಚ್ 31 2014ರ ತಾಳೆಪಟ್ಟಿಯಿಂದ ಹಣಕಾಸಿನ ಪಟ್ಟಿಗಳನ್ನು ತಯಾರಿಸಿ.

| ಕ್ರ.ಸಂ. | ವಿವರಣೆಗಳು | ಖರ್ಚು ₹ | ಜಮಾ ₹ |
|---|---|---|---|
| 1 | ಶೇರು ಬಂಡವಾಳ (ಸಾಮಾನ್ಯ ಶೇರುಗಳು, ₹ 100 ಪ್ರತಿ ಶೇರಿಗೆ) | ------ | 3,75,000 |
| 2 | ನಿಧಿಗಳು ಮತ್ತು ಹೆಚ್ಚುವರಿ ಲಾಭಗಳು | ------ | 2,25,000 |
| 3 | ದೀರ್ಘಾವಧಿ ಸಾಲಗಳು | ------ | 2,50,000 |
| 4 | ವಹಿವಾಟು ಸಾಲ ಮತ್ತು ಹುಂಡಿಗಳು | ------ | 1,55,000 |
| 5 | ಇತರೆ ಚಾಲ್ತಿ ಹೊಣೆಗಾರಿಕೆಗಳು | ------ | 1,35,000 |
| 6 | ಅಲ್ಪಾವಧಿ ಕಾಯ್ದಿರಿಸುವಿಕೆಗಳು | ------ | 1,43,000 |
| 7 | ಭೌತಿಕ ಆಸ್ತಿಗಳು | 6,90,000 | ------ |
| 8 | ಅಭೌತಿಕ ಆಸ್ತಿಗಳು | 2,68,000 | ------ |
| 9 | ಸರಕುಗಳು | 28,500 | ------ |
| 10 | ವಹಿವಾಟು ಸ್ವೀಕರಣಗಳು | 1,65,000 | ------ |
| 11 | ನಗದು ಮತ್ತು ನಗದು ರೂಪಕಗಳು | 1,06,350 | ------ |
| 12 | ಅಲ್ಪಾವಧಿ ಸಾಲಗಳು ಮತ್ತು ಮುಂಗಡಗಳು | 45,000 | ------ |
| 13 | ವ್ಯವಹಾರಗಳಿಂದ ಆದಾಯ | ------ | 3,85,000 |
| 14 | ಇತರೆ ಆದಾಯಗಳು | ------ | 74,900 |
| 15 | ವಹಿವಾಟು ಸರಕುಗಳ ಕೊಳ್ಳುವಿಕೆ | 96,250 | ------ |
| 16 | ನೌಕರರ ಅನುಕೂಲತೆಯ ಖರ್ಚುಗಳು | 1,03,000 | ------ |
| 17 | ಸವಕಳಿ ಮತ್ತು ತೊರೆದ ವೆಚ್ಚಗಳು | 83,000 | ------ |
| 18 | ಇತರೆ ವೆಚ್ಚಗಳು | 1,07,800 | ------ |
| 19 | ಹಣಕಾಸಿನ ವೆಚ್ಚಗಳು | 50,000 | ------ |
| | ಒಟ್ಟು ಮೊತ್ತ | **17,42,900** | **17,42,900** |

**ಹೊಂದಾಣಿಕೆಗಳು**

1. ಅಂತಿಮ ಸರಕುಗಳ ಮೌಲ್ಯ ₹ 84,350.
2. ತೆರಿಗೆ ಮೀಸಲು ನಿಧಿಗಾಗಿ ಶೇಕಡಾ 30 ರನ್ನು ಒದಗಿಸಿ.

ನಿರೂಪಣೆ :

## ಪ್ರಿಯಾ ವ್ಯಾಪಾರಿ ಕಂಪನಿ ನಿಯಮಿತ
## ಆಡಾವೆಪತ್ರಿಕೆ – 31ನೇ ಮಾರ್ಚ್ 2014 ರಂದು

| ಬಂಡವಾಳ ಜವಾಬ್ದಾರಿಗಳು | ಟಿಪ್ಪಣಿಗಳು | ₹ |
|---|---|---|
| ಶೇರುದಾರರ ನಿಧಿ | | |
| ಶೇರು ಬಂಡವಾಳ | 1 | 3,75,000 |
| ಕಾದಿಟ್ಟ ಹಣ ಮತ್ತು ಮಿಗತೆ ಲಾಭ | 2 | 2,77,990 |
| ಚಾಲ್ತೇತರ ಜವಾಬ್ದಾರಿಗಳು | | |
| ದೀರ್ಘಾವಧಿ ಸಾಲಗಳು | 3 | 2,50,000 |
| ಚಾಲ್ತಿ ಜವಾಬ್ದಾರಿಗಳು : | | |
| ಅಲ್ಪಾವಧಿ ಸಾಲಗಳು | 4 | |
| ವ್ಯಾಪಾರಿ ನೀಡುವಿಕೆಗಳು | | 1,55,000 |
| ಇತರೆ ಚಾಲ್ತಿ ಜವಾಬ್ದಾರಿಗಳು | 5 | 1,35,000 |
| ಅಲ್ಪಾವಧಿ ಮತ್ತು ಕಾಯ್ದಿಟ್ಟ ನಿಧಿಗಳು | 6 | 1,65,710 |
| **ಒಟ್ಟು ಮೊತ್ತ** | | **13,58,700** |
| **ಆಸ್ತಿಗಳು** | | |
| ಚಾಲ್ತೇತರ ಸ್ವತ್ತುಗಳು | | |
| ಸ್ಥಿರ ಸ್ವತ್ತುಗಳು | 7 | |
| ಭೌತಿಕ ಸ್ವತ್ತುಗಳು | | 6,90,000 |
| ಭಾವುಕ ಸ್ವತ್ತುಗಳು | | 2,68,000 |
| ಚಾಲ್ತಿ ಸ್ವತ್ತುಗಳು | | |
| ಹೂಡಿಕೆಗಳು | | |
| ಸರಕುಗಳು | | 84,350 |
| ವಹಿವಾಟು ಸ್ವೀಕರಣಗಳು | 8 | 1,65,000 |
| ನಗದು & ನಗದು ಸಮಾನಗಳು | 9 | 1,06,350 |
| ಅಲ್ಪಾವಧಿ ಸಾಲಗಳು ಮತ್ತು ಮುಂಗಡಗಳು | 10 | 45,000 |
| **ಒಟ್ಟು ಮೊತ್ತ** | | **13,58,700** |

## ಪ್ರಿಯಾ ವ್ಯಾಪಾರಿ ಕಂಪನಿ ನಿಯಮಿತ
## ಲಾಭ–ನಷ್ಟಗಳ ಪಟ್ಟಿ–ಮಾರ್ಚ್ 31, 2014ನೇ ಸಾಲಿನ ಕೊನೆಗೆ

| ವಿವರಣೆಗಳು | | ಟಿಪ್ಪಣೆಗಳು | ₹ |
|---|---|---|---|
| ಆದಾಯ | | | |
| ವ್ಯವಹಾರಗಳಿಂದ ಆದಾಯ | | | 3,85,000 |
| ಕಳೆ : ವಾಪಸಾತಿ | | | - |
| ವ್ಯವಹಾರಗಳಿಂದ ಆದಾಯ (ಒಟ್ಟು) | | | 3,85,000 |
| ಕಳೆ : ಅಬಕಾರಿ ಸುಂಕ | | | - |
| ವ್ಯವಹಾರಗಳಿಂದ ಆದಾಯ (ನಿವ್ವಳ) | | | 3,85,000 |
| ಇತರೆ ಖರ್ಚುಗಳು | | | 74,900 |
| **ಒಟ್ಟು ಮೊತ್ತ ಆದಾಯ** | | | **4,59,900** |
| ಖರ್ಚುಗಳು | | | |
| ಸರಕುಗಳ ಖರೀದಿ ವೆಚ್ಚ | | | 96,250 |
| ಸರಕುಗಳ ಮೌಲ್ಯ ವ್ಯತ್ಯಯ | | | |
| ಪ್ರಾರಂಭಿಕ ಸರಕುಗಳ ಮೌಲ್ಯ | 28,500 | | |
| ಅಂತಿಮ ಸರಕುಗಳ ಮೌಲ್ಯ | 84,350 | | *(55,850) |
| ನೌಕರರ ಅನುಕೂಲತೆಯ ವೆಚ್ಚಗಳು | | 11 | 1,03,000 |
| ಹಣಕಾಸು ವೆಚ್ಚಗಳು | | 12 | 50,000 |
| ಸವಕಳಿ ಮತ್ತು ತೊರೆದ ವೆಚ್ಚಗಳು | | 13 | 83,000 |
| ಇತರೆ ಖರ್ಚುಗಳು | | 14 | 1,07,800 |
| **ಒಟ್ಟು ವೆಚ್ಚಗಳು** | | | **3,84,200** |
| ತೆರಿಗೆಯ ಮುಂಚಿನ ಲಾಭ | | | 75,700 |
| ತೆರಿಗೆ ವೆಚ್ಚಗಳು : | | | |
| ಚಾಲ್ತಿ ತೆರಿಗೆ | | | 22,710 |
| **ತೆರಿಗೆಯ ನಂತರದ ಲಾಭ** | | | **52,990** |

ಪ್ರತಿ ಸಾಮಾನ್ಯ ಶೇರಿನ ಮೇಲೆ ಲಾಭ: 13.25
(ವಾರ್ಷಿಕ ಲಾಭ ÷ ಒಟ್ಟು ಸಾಮಾನ್ಯ ಶೇರುಗಳು)

**ಟಿಪ್ಪಣಿ ( ) * ಅಂದರೆ ಕಳೆ (–) ಸರಕುಗಳ ಮೌಲ್ಯ ವ್ಯತ್ಯಯ**

**ಟಿಪ್ಪಣಿ–1 - ಶೇರುದಾರರ ನಿಧಿ :**

| ವಿವರಣೆಗಳು | ಸಂಖ್ಯೆ | ₹ |
|---|---|---|
| ಸಾಮಾನ್ಯ ಶೇರು ಬಂಡವಾಳ | 3,750 | 3,75,000 |
| **ಒಟ್ಟು ಮೊತ್ತ** | **3,750** | **3,75,000** |

**ಟಿಪ್ಪಣಿ–2 - ನಿಧಿ ಮತ್ತು ಹೆಚ್ಚುವರಿ ಲಾಭ**

| ವಿವರಣೆಗಳು | ₹ | ₹ |
|---|---|---|
| ಪರಿಗತೆ ಲಾಭ–ಪ್ರಾರಂಭಿಕ ಮೊತ್ತ | | 2,25,000 |
| ಕೂಡು: ಲಾಭ–ನಷ್ಟ ಪಟ್ಟಿಯಿಂದ ಮಿಗತೆ ಲಾಭ | | 52,990 |
| ಅಂತಿಮ ಮೊತ್ತ | | 2,77,990 |
| **ಒಟ್ಟು ನಿಧಿ ಕಾಯ್ದಿಟ್ಟ ಹಣ** | | **2,77,990** |

**ಟಿಪ್ಪಣಿ–3 - ದೀರ್ಘಾವಧಿ ಸಾಲಗಳು**

| ವಿವರಣೆಗಳು | ₹ |
|---|---|
| ದೀರ್ಘಾವಧಿ ಸಾಲಗಳು | 2,50,000 |
| **ಒಟ್ಟು ಮೊತ್ತ** | **2,50,000** |

**ಟಿಪ್ಪಣಿ– 4 - ಅಲ್ಪಾವಧಿಯ ಸಾಲಗಳು**

| ವಿವರಣೆಗಳು | ₹ |
|---|---|
| | - |
| **ಒಟ್ಟು ಮೊತ್ತ** | - |

**ಟಿಪ್ಪಣಿ–5 - ಇತರೆ ಚಾಲ್ತಿ ಹೊಣೆಗಾರಿಕೆಗಳು**

| ವಿವರಣೆಗಳು | ₹ |
|---|---|
| ಇತರೆ ಚಾಲ್ತಿ ಹೊಣೆಗಾರಿಕೆಗಳು | 1,35,000 |
| **ಒಟ್ಟು ಮೊತ್ತ** | **1,35,000** |

**ಟಿಪ್ಪಣಿ–6 - ಅಲ್ಪಾವಧಿಯ ಕಾಯ್ದಿಟ್ಟ ನಿಧಿಗಳು**

| ವಿವರಣೆಗಳು | ₹ |
|---|---|
| ಅಲ್ಪಾವಧಿಯ ಕಾಯ್ದಿಟ್ಟ ನಿಧಿಗಳು | 1,43,000 |
| ತೆರಿಗೆ ನಿಧಿ | 22,710 |
| **ಒಟ್ಟು ಮೊತ್ತ** | 1,65,710 |

**ಟಿಪ್ಪಣಿ–7 - ಸ್ಥಿರ ಸ್ವತ್ತುಗಳು :**

| ವಿವರಣೆಗಳು | ಒಟ್ಟು | ಸವಕಳಿ | ನಿವ್ವಳ |
|---|---|---|---|
| ಭೌತಿಕ ಸ್ವತ್ತುಗಳು | 6,90,000 | - | 6,90,000 |
| ಅಭೌತಿಕ ಸ್ವತ್ತುಗಳು | 2,68,000 | - | 2,68,000 |
| **ಒಟ್ಟು ಮೊತ್ತ** | **9,58,000** | - | **9,58,000** |

**ಟಿಪ್ಪಣಿ–8 -ವಹಿವಾಟಿನ ಸ್ವೀಕರಗಳು**

| ವಿವರಣೆಗಳು | ₹ |
|---|---|
| ವಹಿವಾಟಿನ ಸ್ವೀಕರಗಳು | 1,65,000 |
| ಒಟ್ಟು ಮೊತ್ತ | **1,65,000** |

**ಟಿಪ್ಪಣಿ–9 - ನಗದು ಮತ್ತು ನಗದು ಸಮಾನಗಳು**

| ವಿವರಣೆಗಳು | ₹ |
|---|---|
| ನಗದು ಮತ್ತು ನಗದು ಸಮಾನಗಳು | 1,06,350 |
| ಒಟ್ಟು ಮೊತ್ತ | **1,06,350** |

**ಟಿಪ್ಪಣಿ–10 - ಅಲ್ಪಾವಧಿ ಸಾಲ ಮತ್ತು ಮುಂಗಡಗಳು**

| ವಿವರಣೆಗಳು | ₹ |
|---|---|
| ಅಲ್ಪಾವಧಿ ಸಾಲ ಮತ್ತು ಮುಂಗಡಗಳು | 45,000 |
| ಒಟ್ಟು ಮೊತ್ತ | **45,000** |

**ಟಿಪ್ಪಣಿ–11 - ನೌಕರರ ಅನುಕೂಲತೆಯ ವೆಚ್ಚಗಳು**

| ವಿವರಣೆಗಳು | ₹ |
|---|---|
| ನೌಕರರ ಅನುಕೂಲತೆಯ ವೆಚ್ಚಗಳು | 1,03,000 |
| ಒಟ್ಟು ಮೊತ್ತ | **1,03,000** |

**ಟಿಪ್ಪಣಿ–12 - ಹಣಕಾಸು ವೆಚ್ಚಗಳು**

| ವಿವರಣೆಗಳು | ₹ |
|---|---|
| ಹಣಕಾಸು ವೆಚ್ಚಗಳು | 50,000 |
| ಒಟ್ಟು ಮೊತ್ತ | **50,000** |

**ಟಿಪ್ಪಣಿ–13 -ಸವಕಳಿ ಮತ್ತು ತೊರೆದ ವೆಚ್ಚಗಳು**

| ವಿವರಣೆಗಳು | ₹ |
|---|---|
| ಸವಕಳಿ ಮತ್ತು ತೊರೆದ ವೆಚ್ಚಗಳು | 83,000 |
| ಒಟ್ಟು ಮೊತ್ತ | **83,000** |

**ಟಿಪ್ಪಣಿ–14 - ಇತರೆ ಖರ್ಚುಗಳು**

| ವಿವರಣೆಗಳು | ₹ |
|---|---|
| ಇತರೆ ಖರ್ಚುಗಳು | 1,07,800 |
| ಒಟ್ಟು ಮೊತ್ತ | **1,07,800** |

### ನಿದರ್ಶನ -2

ಕೆಳಗಿನ ಲೆಕ್ಕ ಸಮತುಲನ ಪಟ್ಟಿಯಿಂದ 31ನೇ ಮಾರ್ಚ್ 2014ನೇ ವರ್ಷಾಂತ್ಯದಲ್ಲಿ ರತ್ನ ವ್ಯಾಪಾರಿ ಕಂಪನಿಯ ಅಂತಿಮ ಲೆಕ್ಕ ಪತ್ರಿಕೆಗಳನ್ನು ತಯಾರಿಸಿ.

| ಕ್ರ.ಸಂ. | ವಿವರಣೆಗಳು | ಖರ್ಚು ₹ | ಜಮಾ ₹ |
|---|---|---|---|
| 1 | ಸರಕುಗಳ ಮಾರಾಟ | | 5,50,000 |
| 2 | ಕಛೇರಿ ಬಾಡಿಗೆ | 50,000 | |
| 3 | ಪ್ರಾರಂಭಿಕ ಸರಕುಗಳ ಮೌಲ್ಯ | 35,000 | |
| 4 | ಸರಕುಗಳ ಕೊಳ್ಳುವಿಕೆ | 1,70,000 | |
| 5 | ಪೀಠೋಪಕರಣಗಳು | 1,85,000 | |
| 6 | ವಹಿವಾಟು ನೀಡುವಿಕೆಗಳು | | 85,000 |
| 7 | ಯಂತ್ರೋಪಕರಣಗಳು | 1,00,000 | |
| 8 | ವಹಿವಾಟು ಸ್ವೀಕರಣಗಳು | 1,60,000 | |
| 9 | ಸಾಮಾನ್ಯ ಶೇರು ಬಂಡವಾಳ (40000 ಶೇರು ಪ್ರ. ಶೇ. ₹10 ನಂತೆ) | | 4,00,000 |
| 10 | 10% ಸಾಲಪತ್ರಗಳು | | 1,00,000 |
| 11 | ಸಾಲಪತ್ರಗಳ ಮೇಲಿನ ಬಡ್ಡಿ | 10,000 | |
| 12 | ಸ್ಥಿರ ಠೇವಣಿ (ಆರು ತಿಂಗಳಿಗೆ) | 70,000 | |
| 13 | ನೌಕರರ ಕ್ಷೇಮಾಭಿವೃದ್ಧಿ ಖರ್ಚುಗಳು | 12,000 | |
| 14 | ಹೆಚ್ಚುವರಿ ಲಾಭ (ಪ್ರಾರಂಭಿಕ ಮೊತ್ತ) | | 10,000 |
| 15 | ನಗದು ಮತ್ತು ಬ್ಯಾಂಕಿನಲ್ಲಿನ ನಗದು | 63,000 | |
| 16 | ಕಟ್ಟಡಗಳು | 90,000 | |
| 17 | ದರಗಳು ಮತ್ತು ತೆರಿಗೆಗಳು | 25,000 | |
| 18 | ಸಂಬಳಗಳು | 55,000 | |
| 19 | ಕೀರ್ತಿಮೌಲ್ಯ | 1,25,000 | |
| 20 | ಸಾಮಾನ್ಯ ನಿಧಿ | | 5,000 |
| | **ಒಟ್ಟು ಮೊತ್ತ** | **11,50,000** | **11,50,000** |

**ಹೊಂದಾಣಿಕೆಗಳು**

1. ಅಂತ್ಯದ ಸರಕುಗಳು ₹ 45,000

2. ತೆರಿಗೆಗಾಗಿ ಶೇ 30 ರಷ್ಟು ನಿಧಿಯನ್ನು ಕಾಯ್ದಿಡಿ
3. ₹ 5,000 ಗಳನ್ನು ಸಾಮಾನ್ಯ ನಿಧಿಗೆ ವರ್ಗಾಯಿಸಿ
4. ನಿರ್ದೇಶಕರು ಶೇ. 10ರಷ್ಟು ಲಾಭಾಂಶವನ್ನು ಘೋಷಿಸಿದ್ದಾರೆ.
5. ಯಂತ್ರೋಪಕರಣಗಳ ಮೇಲೆ ಶೇ 10 ಹಾಗೂ ಕಟ್ಟಡಗಳ ಮೇಲೆ ಶೇ. 5ರಷ್ಟು ಸವಕಳಿಗೆ ಮೀಸಲುಯಿಡಿ.

**ನಿರೂಪಣೆ :**

ರತ್ನ ವ್ಯಾಪಾರಿ ಕಂಪನಿ ನಿಯಮಿತ
ಮಾರ್ಚ್ 31, 2014ರಂದು ಅಡಾವೆ ಪತ್ರಿಕೆ

| ಬಂಡವಾಳ ಮತ್ತು ಜವಾಬ್ದಾರಿಗಳು | ಟಿಪ್ಪಣಿ | ₹ |
|---|---|---|
| **ಶೇರುದಾರರ ನಿಧಿ :** | | |
| ಶೇರು ಬಂಡವಾಳ | 1 | 4,00,000 |
| ನಿಧಿ ಮತ್ತು ಹೆಚ್ಚುವರಿ ಲಾಭ | 2 | 1,24,652 |
| ಚಾಲ್ತೇತರ ಹೊಣೆಗಾರಿಕೆಗಳು | | |
| ದೀರ್ಘಾವಧಿ ಸಾಲಗಳು | 3 | 1,00,000 |
| ಚಾಲ್ತಿ ಹೊಣೆಗಾರಿಕೆಗಳು | | |
| ಅಲ್ಪಾವಧಿಯ ಸಾಲಗಳು | 4 | - |
| ವಹಿವಾಟು ಸಾಲ ಮತ್ತು ಹುಂಡಿಗಳು | | 85,000 |
| ಇತರೆ ಚಾಲ್ತಿ ಹೊಣೆಗಾರಿಕೆಗಳು | 5 | - |
| ಅಲ್ಪಾವಧಿಯ ಕಾಯ್ದಿಟ್ಟ ನಿಧಿಗಳು | 6 | 1,13,848 |
| **ಒಟ್ಟು ಮೊತ್ತ** | | **8,23,500** |
| **ಆಸ್ತಿಗಳು/ಸ್ವತ್ತುಗಳು** | | |
| ಚಾಲ್ತೇತರ ಸ್ವತ್ತುಗಳು : | | |
| ಸ್ಥಿರ ಸ್ವತ್ತುಗಳು : | 7 | |
| ಭೌತಿಕ ಸ್ವತ್ತುಗಳು | | 3,60,500 |
| ಅಭೌತಿಕ ಸ್ವತ್ತುಗಳು | | 1,25,000 |
| **ಚಾಲ್ತಿ ಸ್ವತ್ತುಗಳು :** | | |
| ಹೂಡಿಕೆಗಳು | | |
| ಸರಕುಗಳು | | 45,000 |
| ವಹಿವಾಟಿನ ಸ್ವೀಕರಗಳು | 8 | 1,60,000 |
| ನಗದು ಮತ್ತು ನಗದು ಸಮಾನಗಳು | 9 | 1,33,000 |
| ಅಲ್ಪಾವಧಿ ಸಾಲ ಮತ್ತು ಮುಂಗಡಗಳು | 10 | - |
| **ಒಟ್ಟು ಮೊತ್ತ** | | **8,23,500** |

## ರತ್ನ ವ್ಯಾಪಾರಿ ಕಂಪನಿ ನಿಯಮಿತ

## ಲಾಭ–ನಷ್ಟ ಪಟ್ಟಿ –ಮಾರ್ಚ್ 31, 2014ನೇ ಸಾಲಿನ ಕೊನೆಗೆ

| ವಿವರಣೆಗಳು | ಟಿಪ್ಪಣಿ | ₹ |
|---|---|---|
| ಆದಾಯಗಳು | | |
| ವ್ಯವಹಾರಗಳಿಂದ ಆದಾಯ | | 5,50,000 |
| ಕಳೆ : ವಾಪಸಾತಿಗಳು | | - |
| ವ್ಯವಹಾರಗಳಿಂದ ಆದಾಯ (ಒಟ್ಟು) | | 5,50,000 |
| ಕಳೆ : ಅಬಕಾರಿ ಸುಂಕ | | - |
| ವ್ಯವಹಾರಗಳಿಂದ ಆದಾಯ (ನಿವ್ವಳ) | | 5,50,000 |
| ಇತರೆ ಆದಾಯಗಳು | | |
| **ಒಟ್ಟು ಮೊತ್ತ ಆದಾಯ - (A)** | | **5,50,000** |
| **ಖರ್ಚುಗಳು :** | | |
| ಸರಕುಗಳ ಖರೀದಿ ವೆಚ್ಚ | | 1,70,000 |
| ಸರಕುಗಳ ಮೌಲ್ಯ ವ್ಯತ್ಯಯ | | |
| (ಪ್ರಾರಂಭಿಕ ಸರಕುಗಳ ಮೌಲ್ಯ–ಅಂತಿಮ ಸರಕುಗಳ ಮೌಲ್ಯ) | | (10,000) |
| ನೌಕರರ ಅನುಕೂಲತೆಯ ವೆಚ್ಚಗಳು | 11 | 67,000 |
| ಹಣಕಾಸು ವೆಚ್ಚಗಳು | 12 | 10,000 |
| ಸವಕಳಿ ಮತ್ತು ತೊರೆದ ವೆಚ್ಚಗಳು | 13 | 14,500 |
| ಇತರೆ ಖರ್ಚುಗಳು | 14 | 75,000 |
| **ಒಟ್ಟು ವೆಚ್ಚಗಳು - (B)** | | **3,26,500** |
| **ತೆರಿಗೆಯ ಮುಂಚಿನ ಲಾಭ (A - B)** | | **2,23,500** |
| **ತೆರಿಗೆ ವೆಚ್ಚಗಳು :** | | |
| ಚಾಲ್ತಿ ತೆರಿಗೆ | | 67,050 |
| **ತೆರಿಗೆಯ ನಂತರದ ಲಾಭ** | | **1,56,450** |

ಪ್ರತಿ ಸಾಮಾನ್ಯ ಶೇರಿನ ಮೇಲೆ ಲಾಭ: 3.91
(ವಾರ್ಷಿಕ ಲಾಭ ÷ ಒಟ್ಟು ಸಾಮಾನ್ಯ ಶೇರುಗಳು)

**ಟಿಪ್ಪಣಿ–1 - ಶೇರುದಾರರ ನಿಧಿ :**

| ವಿವರಣೆಗಳು | ಸಂಖ್ಯೆ | ₹ |
|---|---|---|
| ಸಾಮಾನ್ಯ ಶೇರು ಬಂಡವಾಳ | 40,000 | 4,00,000 |
| ಒಟ್ಟು ಮೊತ್ತ | **40,000** | **4,00,000** |

ಟಿಪ್ಪಣಿ–**2** - ನಿಧಿ ಮತ್ತು ಹೆಚ್ಚುವರಿ ಲಾಭ

| ವಿವರಣೆಗಳು | ₹ | ₹ |
|---|---|---|
| ಸಾಮಾನ್ಯ ನಿಧಿ | | 5,000 |
| ಕೂಡು: ಸಾಮಾನ್ಯ ನಿಧಿಗೆ ವರ್ಗಾಯಿಸಿ | | 5,000 |
| ಅಂತಿಮ ಶಿಲ್ಕು | | **10,000** |
| ಪರಿಗತೆ ಲಾಭ– ಪ್ರಾರಂಭಿಕ ಮೊತ್ತ | | 10,000 |
| ಕೂಡು: ಲಾಭ–ನಷ್ಟಪಟ್ಟಿಯಿಂದ ಮಿಗತೆ ಲಾಭ | | 1,56,450 |
| ಹಂಚಿಕೆಗೆ ಉಳಿದ ಮೊತ್ತ | | **1,66,450** |
| ಹಂಚಿಕೆಗಳು | | |
| ಕಳೆ : ಅನುಮೋದಿತ ಲಾಭಾಂಶ | 40,000 | |
| ಕಳೆ : @ 16.995% ಲಾ.ವಿ.ತೆ<br>ಸಾಮಾನ್ಯ ನಿಧಿಗೆ ವರ್ಗಾಯಿಸಿದ ಹಣ | 6,798<br>5,000 | 51,798 |
| **ಅಂತಿಮ ಶಿಲ್ಕು** | | **1,14,652** |
| **ಒಟ್ಟು ನಿಧಿ** | | **1,24,652** |

ಟಿಪ್ಪಣಿ–**3** - ದೀರ್ಘಾವಧಿ ಸಾಲಗಳು

| ವಿವರಣೆಗಳು | ₹ |
|---|---|
| 10% ಸಾಲಪತ್ರಗಳು | 1,00,000 |
| **ಒಟ್ಟು ಮೊತ್ತ** | **1,00,000** |

ಟಿಪ್ಪಣಿ–**4** - ಅಲ್ಪಾವಧಿಯ ಸಾಲಗಳು

| ವಿವರಣೆಗಳು | ₹ |
|---|---|
| **ಒಟ್ಟು ಮೊತ್ತ** | Nil |

ಟಿಪ್ಪಣಿ–**5** - ಇತರೆ ಚಾಲ್ತಿ ಹೊಣೆಗಾರಿಕೆಗಳು

| ವಿವರಣೆಗಳು | ₹ |
|---|---|
| **ಒಟ್ಟು ಮೊತ್ತ** | Nil |

ಟಿಪ್ಪಣಿ–**6** - ಅಲ್ಪಾವಧಿಯ ಕಾಯ್ದಿಟ್ಟ ನಿಧಿಗಳು

| ವಿವರಣೆಗಳು | ₹ |
|---|---|
| ಅನುಮೋದಿತ ಲಾಭಾಂಶ | 40,000 |
| ಲಾ.ವಿ.ತೆ | 6,798 |
| ಕಾಯ್ದಿಟ್ಟ ತೆರಿಗೆಯ ನಿಧಿ | 67,050 |
| **ಒಟ್ಟು ಮೊತ್ತ** | **1,13,848** |

**ಟಿಪ್ಪಣಿ–7 - ಸ್ಥಿರ ಸ್ವತ್ತುಗಳು**

| ವಿವರಣೆಗಳು | ಒಟ್ಟು | ಸವಕಳಿ | ನಿವ್ವಳ |
|---|---|---|---|
| ಭೌತಿಕ ಸ್ವತ್ತುಗಳು | | | |
| ಯಂತ್ರೋಪಕರಣಗಳು | 1,00,000 | 10,000 | 90,000 |
| ಪೀಠೋಪಕರಣಗಳು | 1,85,000 | | 1,85,000 |
| ಕಟ್ಟಡಗಳು | 90,000 | 4,500 | 85,500 |
| **ಮೊತ್ತ** | **3,75,000** | **14,500** | **3,60,500** |
| **ಅಭೌತಿಕ ಸ್ವತ್ತುಗಳು** | | | |
| ಕೀರ್ತಿಮೌಲ್ಯ | 1,25,000 | - | 1,25,000 |
| **ಮೊತ್ತ** | **1,25,000** | - | **1,25,000** |
| **ಒಟ್ಟು ಮೊತ್ತ** | **5,00,000** | **14,500** | **4,85,500** |

**ಟಿಪ್ಪಣಿ–8 - ವಹಿವಾಟಿನ ಸ್ವೀಕರಗಳು**

| ವಿವರಣೆಗಳು | ₹ |
|---|---|
| ವಹಿವಾಟಿನ ಸ್ವೀಕರಗಳು | 1,60,000 |
| **ಒಟ್ಟು ಮೊತ್ತ** | **1,60,000** |

**ಟಿಪ್ಪಣಿ– 9 - ನಗದು ಮತ್ತು ನಗದು ಸಮಾನಗಳು**

| ವಿವರಣೆಗಳು | ₹ |
|---|---|
| ನಿಶ್ಚಿತ ಠೇವಣಿಗಳು | 70,000 |
| ನಗದು ಮತ್ತು ಬ್ಯಾಂಕಿನಲ್ಲಿರುವ ನಗದು | 63,000 |
| **ಒಟ್ಟು ಮೊತ್ತ** | **1,33,000** |

**ಟಿಪ್ಪಣಿ–10 - ಅಲ್ಪಾವಧಿ ಸಾಲ ಮತ್ತು ಮುಂಗಡಗಳು**

| ವಿವರಣೆಗಳು | ₹ |
|---|---|
| **ಒಟ್ಟು ಮೊತ್ತ** | Nil |

**ಟಿಪ್ಪಣಿ–11 - ನೌಕರರ ಅನುಕೂಲತೆಯ ವೆಚ್ಚಗಳು**

| ವಿವರಣೆಗಳು | ₹ |
|---|---|
| ಸಂಬಳಗಳು | 55,000 |
| ನೌಕರರ ಕ್ಷೇಮಾಭಿವೃದ್ಧಿ ಖರ್ಚುಗಳು | 12,000 |
| **ಒಟ್ಟು ಮೊತ್ತ** | **67,000** |

**ಟಿಪ್ಪಣಿ–12 - ಹಣಕಾಸು ವೆಚ್ಚಗಳು**

| ವಿವರಣೆಗಳು | ₹ |
|---|---|
| ಸಾಲಪತ್ರಗಳ ಮೇಲೆ ಬಡ್ಡಿ | 10,000 |
| **ಒಟ್ಟು ಮೊತ್ತ** | **10,000** |

**ಟಿಪ್ಪಣಿ–13 - ಸವಕಳಿ ಮತ್ತು ತೊರೆದ ವೆಚ್ಚಗಳು**

| ವಿವರಣೆಗಳು | ₹ |
|---|---|
| ಭೌತಿಕ ಸ್ವತ್ತುಗಳ ಮೇಲೆ ಸವಕಳಿ | 14,500 |
| **ಒಟ್ಟು ಮೊತ್ತ** | **14,500** |

**ಟಿಪ್ಪಣಿ–14 - ಇತರೆ ಖರ್ಚುಗಳು**

| ವಿವರಣೆಗಳು | ₹ |
|---|---|
| ಕಛೇರಿಯ ಬಾಡಿಗೆ | 50,000 |
| ದರಗಳ ಮತ್ತು ತೆರಿಗೆಗಳು | 25,000 |
| **ಒಟ್ಟು ಮೊತ್ತ** | **75,000** |

***ನಿದರ್ಶನ 3:***

ಎಸ್‌ಎ ವ್ಯಾಪಾರಿ ಕಂಪನಿ ನಿಯಮಿತದ ಈ ಕೆಳಕಂಡ ತಾಳೆಪಟ್ಟಿಯಿಂದ ಮಾರ್ಚ್ 31 2014ಕ್ಕೆ ಕೊನೆಯಲ್ಲಿ ಹಣಕಾಸು ಪಟ್ಟಿಯನ್ನು ತಯಾರಿಸಿ.

| ಕ್ರ.ಸಂ. | ವಿವರಣೆಗಳು | ಖರ್ಚು ₹ | ಜಮಾ ₹ |
|---|---|---|---|
| 1 | ಕೀರ್ತಿಮೌಲ್ಯ | 2,50,000 | |
| 2 | ವಹಿವಾಟಿನ ಸ್ವೀಕರಗಳು | 2,45,000 | |
| 3 | ಪ್ರಾರಂಭಿಕ ಸರಕುಗಳು | 58,000 | |
| 4 | ಪೇಟೆಂಟ್ | 32,000 | |
| 5 | ಲಾಭ–ನಷ್ಟ ಖಾತೆ ಪ್ರಾರಂಭಿಕ ಮೊತ್ತ | | 58,000 |
| 6 | ಯಂತ್ರೋಪಕರಣಗಳು | 2,55,000 | |
| 7 | ಕಟ್ಟಡಗಳು | 2,89,000 | |
| 8 | ಬ್ಯಾಂಕಿನ ಮೀರಳತೆ | | 2,25,000 |
| 9 | ನಗದು ಮತ್ತು ನಗದಿನ ಸಮಾನಗಳು | 2,25,000 | |
| 10 | ವಹಿವಾಟು ಸಾಲ ಮತ್ತು ಹುಂಡಿಗಳು | | 1,95,000 |

| | | | |
|---|---|---|---|
| 11 | ಕೂಲಿ ಮತ್ತು ಸಂಬಳಗಳು | 1,75,000 | |
| 12 | ಮಾರಿದ ಸರಕಿನ ಬಾಡಿಗೆ | 50,000 | |
| 13 | ವ್ಯಾಪಾರ ಸರಕುಗಳ ಕ್ರಯ | 3,25,000 | |
| 14 | ಬಾಡಿಗೆ, ಸುಂಕ ಮತ್ತು ತೆರಿಗೆಗಳು | 63,000 | |
| 15 | ಬ್ಯಾಂಕಿನ ಮೀರಳತೆ ಮೇಲಿನ ಬಡ್ಡಿ | 16,875 | |
| 16 | ಇಂಧನ ಮತ್ತು ಶಕ್ತಿ ವೆಚ್ಚಗಳು | 48,000 | |
| 17 | ಸಾಮಾನ್ಯ ಕಾಯ್ದಿಟ್ಟ ಹಣ | | 1,95,000 |
| 18 | ಶೇರು ಬಂಡವಾಳ (ಸಾಮಾನ್ಯ ಶೇರು ಪ್ರತಿ ₹ 10 ರಂತೆ) | | 5,00,000 |
| 19 | ನೌಕರರಿಗೆ ನೀಡಿದ ಸಾಲಗಳು | 88,125 | |
| 20 | ಮಾರಟ | | 9,47,000 |
| | **ಒಟ್ಟು ಮೊತ್ತ** | **21,20,000** | **21,20,000** |

**ಹೊಂದಾಣಿಕೆಗೆ**

1. ಅಂತಿಮ ಸರಕುಗಳು ₹ 145,000.
2. ಶೇ. 30 ರಷ್ಟು ತೆರಿಗೆಗಾಗಿ ಕಾಯ್ದಿರಿಸಿ.
3. ₹ 25,000 ಮೊತ್ತವನ್ನು ಸಾಮಾನ್ಯ ಕಾಯ್ದಿಟ್ಟ ಹಣಕ್ಕೆ ವರ್ಗಾಯಿಸಿ.
4. ನಿರ್ದೇಶಕರು ಶೇ. 5 ರಷ್ಟು ಲಾಭಾಂಶವನ್ನು ಅನುಮೋದಿಸಿರುತ್ತಾರೆ.
5. ಯಂತ್ರಗಳ ಮೇಲೆ ಶೇ. 10 ಕಟ್ಟಡಗಳ ಮೇಲೆ ಶೇ. 5 ಮತ್ತು ಕೀರ್ತಿ ಮೌಲ್ಯದ ಮೇಲೆ ಶೇ.20ರಷ್ಟು ಸವಕಳಿಯನ್ನು ಒದಗಿಸಿ.

**ನಿರೂಪಣೆ :**

### ಎಸ್.ಎ. ವ್ಯಾಪಾರಿ ಕಂಪನಿ ನಿಯಮಿತ
### ಮಾರ್ಚ್ 31, 2014ರಂದು ಅಡಾವೆ ಪತ್ರಿಕೆ

| **ಬಂಡವಾಳ ಮತ್ತು ಜವಾಬ್ದಾರಿಗಳು** | **ಟಿಪ್ಪಣಿ** | **₹** |
|---|---|---|
| **ಶೇರುದಾರರ ನಿಧಿ :** | | |
| ಶೇರು ಬಂಡವಾಳ | 1 | 5,00,000 |
| ನಿಧಿ ಮತ್ತು ಹೆಚ್ಚುವರಿ ಲಾಭ | 2 | 4,10,074 |
| **ಚಾಲ್ತೀತರ ಹೊಣೆಗಾರಿಕೆಗಳು** | | |
| ದೀರ್ಘಾವಧಿ ಸಾಲಗಳು | 3 | - |
| **ಚಾಲ್ತಿ ಹೊಣೆಗಾರಿಕೆಗಳು** | | |
| ಅಲ್ಪಾವಧಿಯ ಸಾಲಗಳು | 4 | 2,25,000 |

| | | |
|---|---|---|
| ವಹಿವಾಟು ಸಾಲ ಮತ್ತು ಹುಂಡಿಗಳು | | 1,95,000 |
| ಇತರೆ ಚಾಲ್ತಿ ಹೊಣೆಗಾರಿಕೆಗಳು | 5 | - |
| ಅಲ್ಪಾವಧಿಯ ಕಾಯ್ದಿಟ್ಟ ನಿಧಿಗಳು | 6 | 1,09,101 |
| **ಒಟ್ಟು ಮೊತ್ತ** | | **14,39,175** |
| **ಆಸ್ತಿಗಳು/ಸ್ವತ್ತುಗಳು** | | |
| **ಚಾಲ್ತ್ಯೇತರ ಸ್ವತ್ತುಗಳು :** | | |
| ಸ್ಥಿರ ಸ್ವತ್ತುಗಳು : | 7 | |
| ಭೌತಿಕ ಸ್ವತ್ತುಗಳು | | 5,04,050 |
| ಅಭೌತಿಕ ಸ್ವತ್ತುಗಳು | | 2,32,000 |
| **ಚಾಲ್ತಿ ಸ್ವತ್ತುಗಳು :** | | |
| ಚಾಲ್ತಿ ಹೂಡಿಕೆಗಳು | | |
| ಸರಕುಗಳು | | 1,45,000 |
| ವಹಿವಾಟಿನ ಸ್ವೀಕರಗಳು | 8 | 2,45,000 |
| ನಗದು ಮತ್ತು ನಗದು ಸಮಾನಗಳು | 9 | 2,25,000 |
| ಅಲ್ಪಾವಧಿ ಸಾಲ ಮತ್ತು ಮುಂಗಡಗಳು | 10 | 88,125 |
| **ಒಟ್ಟು ಮೊತ್ತ** | | **14,39,175** |

ಎಸ್.ಎ. ವ್ಯಾಪಾರಿ ಕಂಪನಿ ನಿಯಮಿತ

ಲಾಭ–ನಷ್ಟ ಪಟ್ಟಿ –ಮಾರ್ಚ್ 31, 2014ನೇ ಸಾಲಿನ ಕೊನೆಗೆ

| ವಿವರಣೆಗಳು | ಟಿಪ್ಪಣಿ | ₹ |
|---|---|---|
| **ಆದಾಯಗಳು:** | | |
| ವ್ಯವಹಾರಗಳಿಂದ ಆದಾಯ | | 9,47,000 |
| ಕಳೆ : ವಾಪಸಾತಿಗಳು | | - |
| ವ್ಯವಹಾರಗಳಿಂದ ಆದಾಯ (ಒಟ್ಟು) | | 9,47,000 |
| ಕಳೆ : ಅಬಕಾರಿ ಸುಂಕ | | - |
| ವ್ಯವಹಾರಗಳಿಂದ ಆದಾಯ (ನಿವ್ವಳ) | | 9,47,000 |
| ಇತರೆ ಆದಾಯಗಳು | | |
| **ಒಟ್ಟು ಮೊತ್ತ ಆದಾಯ** | | **9,47,000** |
| **ಖರ್ಚುಗಳು :** | | |
| ಬಳಸಿದ ಪದಾರ್ಥಗಳ ವೆಚ್ಚ | | |
| ಸರಕುಗಳ ಖರೀದಿ ವೆಚ್ಚ | | 3,25,000 |

| | | |
|---|---|---|
| ಸರಕುಗಳ ಮೌಲ್ಯ ವ್ಯತ್ಯಯ<br>(ಪ್ರಾರಂಭಿಕ ಸರಕುಗಳು – ಅಂತಿಮ ಸರಕುಗಳು) | | (87,000) |
| ನೌಕರರ ಅನುಕೂಲತೆಯ ವೆಚ್ಚಗಳು | 11 | 1,75,000 |
| ಹಣಕಾಸು ವೆಚ್ಚಗಳು | 12 | 16,875 |
| ಸವಕಳಿ ಮತ್ತು ತೊರೆದ ವೆಚ್ಚಗಳು | 13 | 89,950 |
| ಇತರೆ ಖರ್ಚುಗಳು | 14 | 1,61,000 |
| **ಒಟ್ಟು ವೆಚ್ಚಗಳು** | | **6,80,825** |
| **ತೆರಿಗೆಯ ಮುಂಚಿನ ಲಾಭ** | | **2,66,175** |
| ತೆರಿಗೆ ವೆಚ್ಚಗಳು : | | |
| ಚಾಲ್ತಿ ತೆರಿಗೆ / ಪ್ರಸುತ ತೆರಿಗೆ | | 79,853 |
| **ತೆರಿಗೆಯ ನಂತರದ ಲಾಭ** | | **1,86,323** |

ಪ್ರತಿ ಸಾಮಾನ್ಯ ಶೇರಿನ ಮೇಲೆ ಲಾಭ: 3.73
(ವಾರ್ಷಿಕ ಲಾಭ ÷ ಒಟ್ಟು ಸಾಮಾನ್ಯ ಶೇರುಗಳು)

**ಟಿಪ್ಪಣಿ–1 - ಶೇರುದಾರರ ನಿಧಿ :**

| ವಿವರಣೆಗಳು | ಸಂಖ್ಯೆ | ₹ |
|---|---|---|
| ಸಾಮಾನ್ಯ ಶೇರು ಬಂಡವಾಳ (₹10 ಪ್ರತಿ ಶೇರಿಗೆ) | 50,000 | 5,00,000 |
| **ಮೊತ್ತ** | **50,000** | **5,00,000** |

**ಟಿಪ್ಪಣಿ–2 - ನಿಧಿ ಮತ್ತು ಹೆಚ್ಚುವರಿ ಲಾಭ**

| ವಿವರಣೆಗಳು | ₹ | ₹ |
|---|---|---|
| ಸಾಮಾನ್ಯ ನಿಧಿ | | 1,95,000 |
| ಕೂಡಿ : ಮಿಗತೆ ಲಾಭದಿಂದ ವರ್ಗಾವಣೆ | | 25,000 |
| **ಅಂತಿಮ ಉಳಿಕೆ** | | **2,20,000** |
| ಮಿಗತೆ ಲಾಭ – ಪ್ರಾರಂಭಿಕ ಉಳಿಕೆ | | 58,000 |
| ಕೂಡಿ : ಲಾಭ–ನಷ್ಟ ಖಾತೆಯಿಂದ ಮಿಗತೆ ಲಾಭ | | 1,86,323 |
| **ಬಳಕೆಗೆ ಸಿಗುವ ಲಾಭ** | | **2,44,323** |
| ಲಾಭದ ಬಳಕೆ | | |
| ಕಳಿ : ಅನುಮೋದಿತ ಲಾಭಾಂಶ | 25,000 | |
| ಕಳಿ : ಲಾ.ವಿ.ತೆ @ 16.995% | 4,249 | |
| ಸಾಮಾನ್ಯ ನಿಧಿಗೆ ವರ್ಗಾಯಿಸಲ್ಪಟ್ಟ ಹಣ | 25,000 | 54,249 |
| **ಅಂತಿಮ ಉಳಿಕೆ** | | **1,90,074** |
| **ಒಟ್ಟು ಮೊತ್ತ ನಿಧಿಗಳು** | | **4,10,074** |

**ಟಿಪ್ಪಣಿ–3 - ದೀರ್ಘಾವಧಿ ಸಾಲಗಳು**

| ವಿವರಣೆಗಳು | ₹ |
|---|---|
| **ಒಟ್ಟು ಮೊತ್ತ** | — |

**ಟಿಪ್ಪಣಿ–4 - ಅಲ್ಪಾವಧಿಯ ಸಾಲಗಳು**

| ವಿವರಣೆಗಳು | ₹ |
|---|---|
| ಬ್ಯಾಂಕಿನ ಮೀರಳತೆ | 2,25,000 |
| **ಒಟ್ಟು ಮೊತ್ತ** | **2,25,000** |

**ಟಿಪ್ಪಣಿ–5 -ಇತರೆ ಚಾಲ್ತಿ ಹೊಣೆಗಾರಿಕೆಗಳು**

| ವಿವರಣೆಗಳು | ₹ |
|---|---|
| **ಒಟ್ಟು ಮೊತ್ತ** | — |

**ಟಿಪ್ಪಣಿ– 6 - ಅಲ್ಪಾವಧಿಯ ಕಾಯ್ದಿಟ್ಟ ನಿಧಿಗಳು**

| ವಿವರಣೆಗಳು | ₹ |
|---|---|
| ಪ್ರಸ್ತಾವಿತ ಲಾಭಾಂಶ | 25,000 |
| ಲಾ.ವಿ.ತೆ. | 4,249 |
| ಕಾಯ್ದಿರಿಸಿದ ತೆರಿಗೆ ನಿಧಿ | 79,853 |
| **ಒಟ್ಟು ಮೊತ್ತ** | **1,09,101** |

**ಟಿಪ್ಪಣಿ–7 - ಸ್ಥಿರ ಸ್ವತ್ತುಗಳು :**

| ವಿವರಣೆಗಳು | ಒಟ್ಟು | ಸವಕಳಿ | ನಿವ್ವಳ |
|---|---|---|---|
| **ಭೌತಿಕ ಸ್ವತ್ತುಗಳು** | | | |
| ಯಂತ್ರಗಳು | 2,55,000 | 25,500 | 2,29,500 |
| ಕಟ್ಟಡಗಳು | 2,89,000 | 14,450 | 2,74,550 |
| ಉಪ ಮೊತ್ತ | **5,44,000** | **39,950** | **5,04,050** |
| **ಅಭೌತಿಕ ಸ್ವತ್ತುಗಳು** | | | |
| ಕೀರ್ತಿಮೌಲ್ಯ | 2,50,000 | 50,000 | 2,00,000 |
| ಪೇಟೆಂಟ್ | 32,000 | - | 32,000 |
| **ಉಪ ಮೊತ್ತ** | **2,82,000** | **50,000** | **2,32,000** |
| **ಒಟ್ಟು ಮೊತ್ತ** | **8,26,000** | **89,950** | **7,36,050** |

**ಟಿಪ್ಪಣಿ–8 - ವಹಿವಾಟಿನ ಸ್ವೀಕರಗಳು**

| ವಿವರಣೆಗಳು | ₹ |
|---|---|
| ವಹಿವಾಟಿನ ಸ್ವೀಕರಗಳು | 2,45,000 |
| **ಒಟ್ಟು ಮೊತ್ತ** | **2,45,000** |

**ಟಿಪ್ಪಣಿ–9 - ನಗದು ಮತ್ತು ನಗದು ಸಮಾನಗಳು**

| ವಿವರಣೆಗಳು | ₹ |
|---|---|
| ನಗದು ಮತ್ತು ನಗದು ಸಮಾನಗಳು | 2,25,000 |
| **ಒಟ್ಟು ಮೊತ್ತ** | **2,25,000** |

**ಟಿಪ್ಪಣಿ–10 -ಅಲ್ಪಾವಧಿ ಸಾಲ ಮತ್ತು ಮುಂಗಡಗಳು**

| ವಿವರಣೆಗಳು | ₹ |
|---|---|
| ನೌಕರರಿಗೆ ಸಾಲ | 88,125 |
| **ಒಟ್ಟು ಮೊತ್ತ** | **88,125** |

**ಟಿಪ್ಪಣಿ–11 - ನೌಕರರ ಅನುಕೂಲತೆಯ ವೆಚ್ಚಗಳು**

| ವಿವರಣೆಗಳು | ₹ |
|---|---|
| ಸಂಬಳ ಮತ್ತು ಕೂಲಿ | 1,75,000 |
| **ಒಟ್ಟು ಮೊತ್ತ** | **1,75,000** |

**ಟಿಪ್ಪಣಿ–12 - ಹಣಕಾಸು ವೆಚ್ಚಗಳು**

| ವಿವರಣೆಗಳು | ₹ |
|---|---|
| ಬ್ಯಾಂಕಿನ ಮೀರಳತೆ ಬಡ್ಡಿ | 16,875 |
| **ಒಟ್ಟು ಮೊತ್ತ** | **16,875** |

**ಟಿಪ್ಪಣಿ–13 - ಸವಕಳಿ ಮತ್ತು ತೊರೆದ ವೆಚ್ಚಗಳು**

| ವಿವರಣೆಗಳು | ₹ |
|---|---|
| ಭೌತಿಕ ಆಸ್ತಿಗಳ ಮೇಲೆ ಸವಕಳಿ | 39,950 |
| ಅಭೌತಿಕ ಆಸ್ತಿಗಳ ಮೇಲಿನ ವಜಾ | 50,000 |
| **ಒಟ್ಟು ಮೊತ್ತ** | **89,950** |

**ಟಿಪ್ಪಣಿ–14 - ಇತರೆ ಖರ್ಚುಗಳು**

| ವಿವರಣೆಗಳು | ₹ |
|---|---|
| ಸರಕು ಸಾಗಾಣೆಯ ಬಾಡಿಗೆ | 50,000 |
| ಬಾಡಿಗೆ, ದರ ಮತ್ತು ತೆರಿಗೆಗಳು | 63,000 |
| ಇಂಧನ ಮತ್ತು ಶಕ್ತಿಯ ಖರ್ಚುಗಳು | 48,000 |
| **ಒಟ್ಟು ಮೊತ್ತ** | **1,61,000** |

*ನಿದರ್ಶನ 4*

ಹಿಂದುಸ್ತಾನ ವ್ಯಾಪಾರಿ ಕಂಪನಿ ನಿಯಮಿತದ ಈ ಕೆಳಕಂಡ ತಾಳೆಪಟ್ಟಿಯಿಂದ ಮಾರ್ಚ್ 31 2014ಕ್ಕೆ ಕೊನೆಕೊಂಡಂತೆ ಹಣಕಾಸು ಪಟ್ಟಿಯನ್ನು ತಯಾರಿಸಿ.

| ಕ್ರ.ಸಂ. | ವಿವರಣೆಗಳು | ಖರ್ಚು ₹ | ಜಮಾ ₹ |
|---|---|---|---|
| 1 | ಕ್ರಯ | | 21,00,000 |
| 2 | ಸರಕುಗಳ ಕೊಳ್ಳುವಿಕೆ | 2,50,000 | |
| 3 | ಶೇರು ಬಂಡವಾಳ (ಸಾಮಾನ್ಯ ಶೇರು, ₹ 10 ಪ್ರ.ಶೇ.) | | 3,00,000 |
| 4 | ಪ್ರಾರಂಭಿಕ ಸರಕುಗಳು | 1,25,000 | |
| 5 | ಸಂಬಳ ಮತ್ತು ಕೂಲಿ | 2,37,000 | |
| 6 | ಅನುಬೋಗಿತ ಕಚ್ಚಾ ಪದಾರ್ಥಗಳ ವೆಚ್ಚ | 8,50,000 | |
| 7 | 10% ಸಾಲಪತ್ರಗಳು | | 5,00,000 |
| 8 | ವಹಿವಾಟು ಸ್ವೀಕರಣಗಳು | 5,50,000 | |
| 9 | ಸಾಮಾನ್ಯ ನಿಧಿ | | 72,000 |
| 10 | ಬಾಡಿಗೆ ಖರ್ಚುಗಳು | 2,15,000 | |
| 11 | ನೌಕರರ ಕಲ್ಯಾಣ ಖರ್ಚುಗಳು | 85,000 | |
| 12 | ಕ್ರಯದ ಮೇಲೆ ದಲ್ಲಾಳಿ | 2,10,000 | |
| 13 | ಬಡ್ಡಿ ಖರ್ಚುಗಳು | 55,000 | |
| 14 | ದರ ಮತ್ತು ತೆರಿಗೆಗಳು | 88,000 | |
| 15 | ಹೆಚ್ಚುವರಿ ಲಾಭ | | 86,000 |
| 16 | ಬ್ಯಾಂಕಿನ ಮೀರಳತೆ | | 15,000 |

| | | | |
|---|---|---|---|
| 17 | ವಹಿವಾಟು ನೀಡುವಿಕೆಗಳು | | 1,92,500 |
| 18 | ಕಟ್ಟಡಗಳು | 5,00,000 | |
